
ಜನಪದ ವಿಚಾರ

ಸಂಪುಟ ೧೯
ಆಗಸ್ಟ್ ೨೦೧೮
ಸಂಚಿಕೆ ೦೧



ಅವರ ರಾಜ್ಯ, ಇವರ ರಾಜ್ಯ, ನಮ್ಮ ರಾಜ್ಯ, ನಿಮ್ಮ ರಾಜ್ಯ
ಎಂಥದೋ ಕುಚೋದ್ಯ !
ಉರಿವ ಬೆಂಕಿ ಉರಿಯುತಿರೆ
ಹಾಕು ಹಾಕು ಆಜ್ಯ,
ಬಂತು ಹೊಸತು ರಾಜ್ಯ
-ಗೋಪಾಲಕೃಷ್ಣ ಅಡಿಗ

ಈ ಸಂಚಿಕೆಯಲ್ಲಿ

೧. ನಾ ಮೆಚ್ಚಿದ ಕವನ / ಪುಟ ೧

೨. ನಿಮ್ಮೊಂದಿಗೆ / ಪುಟ ೨

೩. ರಾಷ್ಟ್ರ–ರಾಷ್ಟ್ರೀಯತೆ ಒಂದಷ್ಟು ಪರಿಕಲ್ಪನಾತ್ಮಕ ಟಿಪ್ಪಣಿಗಳು/ ಪುಟ ೩
ವಿ.ಎಸ್.ಶ್ರೀಧರ್

೪. ರಾಷ್ಟ್ರೀಯತೆ / ಪುಟ ೯
ಎಂ.ಆರ್.ಅರುಣಕುಮಾರ

೫. ರಾಷ್ಟ್ರೀಯತೆ ಮತ್ತು ಕನ್ನಡಿಗ / ಪುಟ ೧೪
ಆನಂದ್

೬. ಗ್ರಾಮೀಣ ಆಂದೋಲನ ಏಕೆ – ೪ / ಪುಟ ೧೮
ಜೆ.ಸಿ.ಕುಮಾರಪ್ಪ ; ಅನು: ಕೆ.ವೆಂಕಟರಾಜು

೭. ಹರಿಲಾಲ್ ಗಾಂಧಿ ಕಥನ – ೪ / ಪುಟ ೨೩
ಮೂಲ : ಚಂದೂಲಾಲ್ ಜೈನ್; ಅನು: ಡಾ.ಜಗದೀಶ್ ಕೊಪ್ಪ

೮. ಚಿಂತನ / ಪುಟ ೨೮
ವೈನತೇಯ

೯. ನಾ ಮೆಚ್ಚಿದ ಕವನ ಟಿಪ್ಪಣಿ / ಪುಟ ೩೨
ಚಂದ್ರಶೇಖರ ತಾಳ್ಯ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಆಗಸ್ಟ್ - ೨೦೧೮
ಸಂಪುಟ - ೧೯
ಸಂಚಿಕೆ -೦೧

ಸಂಪಾದಕರು
ಸಂತೋಷ್ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೨೦೦/-

ಸಂಪರ್ಕವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ - ೫೭೧೪೩೧
ಮಂಡ್ಯ ಜಿಲ್ಲೆ

ದೂರವಾಣಿ
೦೨೩೬೭ ೨೯ ೯೮ ೫೪
೭೮ ೨೯ ೪೮ ೯೧ ೪೭

Email : janapada@yahoo.com
web : janapada.org

ನಾ ಮೆಚ್ಚಿದ ಕವನ

ಪಾಂಚಜನ್ಯ

ನಡೆ ಮುಂದೆ, ನಡೆ ಮುಂದೆ
ನುಗ್ಗಿ ನಡೆ ಮುಂದೆ !
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ !
ಬೆಚ್ಚ ಬಿಡು, ನೆಚ್ಚ ನೆಡು
ಕೆಚ್ಚದೆಯ ಗುಡಿಯಲ್ಲಿ ;
ಸೆರೆಯ ಹರಿ, ಅರಿಯನಿರಿ,
ಹುಟ್ಟಳಿಸು ಹುಡಿಯಲ್ಲಿ !
ನಾನಳಿವೆ, ನೀನಳಿವೆ,
ನಮ್ಮೆಲುಬುಗಳ ಮೇಲೆ
ಮೂಡುವುದು, ಮೂಡುವುದು
ನವಭಾರತದ ಲೀಲೆ !
ನೊಂದ ದನಿ, ಕಣ್ಣಪನಿ,
ಬರಿದೆ ಎಂದೊರೆಯದಿರು !
ತೆತ್ತ ಹಣ, ಸತ್ತ ಹೆಣ
ಹೋಯ್ತೆಂದು ಮೊರೆಯದಿರು !
ಪೊಡವಿಯೊಳಗಡಗಿರುವ
ತಳಹದಿಯ ತೆಗಳುವರೆ ?
ಮೆರೆಯುತಿರುವರಮನೆಯ
ಸಿರಿಯೊಂದ ಹೊಗಳುವರೆ ?
ಎಲ್ಲ ಇದೆ, ಎಲ್ಲ ಇದೆ
ನಿತ್ಯತೆಯ ಗಬ್ಬದಲಿ ;
ಮುಂದೆಯದು ತೋರುವುದು
ಬಿಡುಗಡೆಯ ಹಬ್ಬದಲಿ !
ನೆಚ್ಚುಗೆಡಬೇಡ ನಡೆ,
ಕೆಚ್ಚೆದೆಯ ಕಲಿಯೆ !
ಬೆಚ್ಚಿದರೆ, ಬೆದರಿದರೆ.
ಕಾಳಿಗದು ಬಲಿಯೇ ?
ಭರತಖಂಡದ ಹಿತವೆ
ನನ್ನ ಹಿತ ಎಂದು,
ಭರತಮಾತೆಯ ಮತವೆ
ನನ್ನ ಮತ ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು,
ನುಗ್ಗು ಮುಂದಕೆ, ಧೀರ,
ಕಾಳಿಗದ ಕೊಲೆಗೆ !
ನುಗ್ಗು ಮರಣಕೆ, ವೀರ,
ಸಗ್ಗದಾ ನೆಲೆಗೆ !

-ಕುವೆಂಪು

ನಿಮ್ಮೊಂದಿಗೆ

ಪ್ರಿಯ ಓದುಗರೇ,

ಆಗಸ್ಟ್ ಮಾಹೆಯ ಜನಪದ ವಿಚಾರವನ್ನು ನಿಮ್ಮ ಕೈಯಲ್ಲಿ ಇಡುತ್ತಿದ್ದೇವೆ. ಈ ಪತ್ರಿಕೆಯ ಸಂಪಾದಕರಾಗಿದ್ದ ಸುರೇಂದ್ರ ಕೌಲಗಿಯವರು ನಿಧನರಾಗಿ ಈ ತಿಂಗಳ ೬ ನೇ ತಾರೀಖಿಗೆ ಒಂದು ವರ್ಷವಾಗುತ್ತದೆ. ಅವರು ಇಲ್ಲದ ನಿರ್ವಾತ ಸ್ಥಿತಿಯಲ್ಲಿ ನಾವು ಜನಪದ ವಿಚಾರದ ೧೨ ಸಂಚಿಕೆಗಳನ್ನು ಹೊರತಂದಿದ್ದೇವೆ. ಒಂದು ವರ್ಷ ಓಡಿ ಹೋದದ್ದು ನಮ್ಮ ಕಲ್ಪನೆಗೆ ಸಿಗುತ್ತಿಲ್ಲ. ಈ ಒಂದು ವರ್ಷದಲ್ಲಿ ಜನಪದ ವಿಚಾರದ ಮೂಲ ವಿಚಾರಕ್ಕೆ ಧಕ್ಕೆ ತರದೆ ಅದಕ್ಕೊಂದು ಹೊಸ ರೂಪ ಕೊಡುವ ಪ್ರಯತ್ನ ಮಾಡಿದ್ದೇವೆ. ಹಲವರು ನಮ್ಮ ಪ್ರಯೋಗವನ್ನು ಮೆಚ್ಚಿದ್ದಾರೆ. ಕೆಲವರು ಹಳೆಯ ಸಂಚಿಕೆಗಳೊಂದಿಗೆ ಹೋಲಿಸಿ ಒಂದಿಷ್ಟು ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. ಎರಡೂ ಅಭಿಪ್ರಾಯಗಳನ್ನು ಸಮಚಿತ್ತದಿಂದ ಸ್ವೀಕರಿಸಿದ್ದೇವೆ. ಕಳೆದ ಕೆಲವು ತಿಂಗಳಿನಿಂದ ಹೊಸ ಓದುಗರು ಮತ್ತು ಲೇಖಕರು ಪತ್ರಿಕೆಯ ಬಗ್ಗೆ ಆಸಕ್ತಿ ತೋರುತ್ತಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಸಂಚಿಕೆ ಮತ್ತಷ್ಟು ವಿಚಾರಪೂರ್ಣವಾಗಿ ಹೊರಬರಲಿದೆ ಎಂಬ ನಂಬಿಕೆ ನಮ್ಮದು.

'ತಿಂಗಳ ಕವನ' ಅಂಕಣವನ್ನು 'ನಾ ಮೆಚ್ಚಿದ ಕವನ' ಎಂದು ಬದಲಿಸಿ ಹೊಸಬರು ಅಂಕಣಕ್ಕೆ ಬರೆಯಲು ಅವಕಾಶ ಮಾಡಲಾಗಿದೆ. ಈ ಬಾರಿ ಶ್ರೀ ಚಂದ್ರಶೇಖರ ತಾಳ್ಯ ಅವರು ಕುವೆಂಪು ಅವರ 'ಪಾಂಚಜನ್ಯ' ಕವನವನ್ನು ಆಯ್ದು ಕೊಂಡು ಟಿಪ್ಪಣಿ ಬರೆದಿದ್ದಾರೆ. ಶ್ರೀ ವಿ.ಎಸ್. ಶ್ರೀಧರ್, ಶ್ರೀ ಎಂ.ಆರ್.ಅರುಣಕುಮಾರ, ಶ್ರೀ ಆನಂದ ಅವರು ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ರಾಷ್ಟ್ರೀಯತೆಯನ್ನು ಕುರಿತು ಮೌಲ್ಯಯುತ ಲೇಖನಗಳನ್ನು ಬರೆದು ಕೊಟ್ಟಿದ್ದಾರೆ. ಶ್ರೀ ವೆಂಕಟರಾಜು ಮತ್ತು ಶ್ರೀ ಜಗದೀಶ ಕೊಪ್ಪ ತಮ್ಮ ಅನುವಾದಿತ ಬರಹಗಳನ್ನು ಮುಂದುವರೆಸಿದ್ದಾರೆ.

ರಾಷ್ಟ್ರೀಯತೆಯ ವಿಚಾರ ಕೆಲವರ ಕೈಯಲ್ಲಿ ಬೆದರಿಕೆಯ ಅಸ್ತ್ರವಾಗಿ ಪರಿಣಮಿಸುತ್ತಿರುವುದು ಅಪಾಯಕಾರಿಯಾದ ಬೆಳವಣಿಗೆ. ರಾಷ್ಟ್ರ ಭಕ್ತಿ ಮತ್ತು ಧರ್ಮಶ್ರದ್ಧೆ ವಿಚಾರಗಳನ್ನು ಚರ್ಚಿಸಲೇ ಆಗದಂತಹ ಒಂದು ವಾತಾವರಣ ದೇಶದಲ್ಲಿ ನಿರ್ಮಾಣವಾಗತೊಡಗಿದೆ. ಈ ಎರಡೂ ವಿಚಾರಗಳನ್ನು ಹಿಡಿದು ಅಮಾಯಕ ಜನರನ್ನು ಗುಂಪಿನಲ್ಲಿ ಹಿಡಿದು ಥಳಿಸುವ ಅಮಾನವೀಯ ವರ್ತನೆ ಕಳೆದ ಹಲವು ತಿಂಗಳುಗಳಿಂದ ದೇಶದ ಹಲವು ಕಡೆ ನಡೆಯತೊಡಗಿದೆ. ಈ ರೀತಿಯ ವರ್ತನೆ ಪ್ರಜಾಪ್ರಭುತ್ವ ದೇಶಕ್ಕೆ ಶೋಭೆ ತರುವಂತಹದಲ್ಲ.

ಈ ಸ್ವಾತಂತ್ರ್ಯೋತ್ಸವ ದೇಶದ ಬಹುತ್ವ ಮತ್ತು ಸಹಿಷ್ಣುತೆಯ ವಿಚಾರಗಳು ನಲುಗದ ವಾತಾವರಣವನ್ನು ಉಂಟುಮಾಡಲಿ.

ಈ ಪತ್ರಿಕೆ ಅರ್ಥಪೂರ್ಣವಾಗಿ ಹೊರಬರಲು ನೆರವಾದ ಎಲ್ಲರಿಗೂ ವಂದನೆಗಳು. ನಿಮ್ಮ ಅಭಿಪ್ರಾಯ ತಿಳಿಸಿ.

ವಂದನೆಗಳು.

ರಾಷ್ಟ್ರ –ರಾಷ್ಟ್ರೀಯತೆ : ಒಂದಷ್ಟು ಪರಿಕಲ್ಪನಾತ್ಮಕ ಟಿಪ್ಪಣಿಗಳು

ವಿ.ಎಸ್.ಶ್ರೀಧರ್

ಅತಿ ಬಳಕೆಯಿಂದಾಗಿ ಕೆಲವು ಪದಗಳು ತಮ್ಮ ಮೂಲಾರ್ಥವನ್ನು ಕಳೆದುಕೊಂಡು ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತವೆ. ಕೆಲವೊಮ್ಮೆ ಅವುಗಳು ಸವಕಲಾಗಿ ಹೋದರೆ ಇನ್ನೊಮ್ಮೆ ಅವುಗಳ ಅರ್ಥವ್ಯಾಪ್ತಿಯೇ ಪಲ್ಲಟವಾಗಿ, ಹೀಗೆ ಪಲ್ಲಟಗೊಂಡ ಅರ್ಥವೇ ಚಲಾವಣೆಯಲ್ಲಿ ಉಳಿದುಕೊಳ್ಳುತ್ತದೆ. ಪದಗಳು ಕೇವಲ ಶಬ್ದಗಳಲ್ಲ; ಅವು 'ಪದಾರ್ಥ'ಗಳೂ ಹೌದು. ಮತ್ತು ಪದಾರ್ಥಗಳು ಉಂಟಾಗುವುದೇ ಪದಗಳು ಇರುವ ಆವರಣ ಅಥವಾ ಕ್ಷೇತ್ರದಿಂದ. ಅವುಗಳ ಆವರಣ ಅಥವಾ ಕ್ಷೇತ್ರಗಳಲ್ಲಾಗುವ ಬದಲಾವಣೆಯಿಂದ ಪದಗಳ ಅರ್ಥ ಬೇರೆಯಾಗುವುದು. ಕೆಲವೊಮ್ಮೆ ಅರ್ಥ ವಿಸ್ತರಣೆಯಾದರೆ, ಇನ್ನೊಮ್ಮೆ ಅದು ಸಂಕುಚಿತಗೊಳ್ಳುವುವು.

ಹೀಗೆ ಪದದ ಅರ್ಥಪಲ್ಲಟದಿಂದ ಸಂಕುಚಿತಗೊಂಡು ತಮ್ಮ ಮೂಲ ಅರ್ಥ ವ್ಯಾಪ್ತಿಯನ್ನು ಕಳೆದುಕೊಂಡಿರುವ ಪದಗಳಲ್ಲಿ ಮುಖ್ಯವಾದದ್ದು "ಸೆಕ್ಯುಲರಿಸಂ" ಮತ್ತು "ನ್ಯಾಷಲಿಸಂ" ಎಂಬ ಪದಗಳು. ಯಾವಾಗ ಅದ್ವಾನಿಯವರು ಹುಸಿ ಸೆಕ್ಯುಲರಿಸಂ (ಸೂಡೋ ಸೆಕ್ಯುಲರಿಸಂ) ಎಂಬ ಪದವನ್ನು ಟಂಕಿಸಿದರೋ ಅಲ್ಲಿಂದ ಜನರ ಮನಸ್ಸಿನಲ್ಲಿ ಮತ್ತು ಬಳಕೆಯಲ್ಲಿ ಸೆಕ್ಯುಲರಿಸಂನ ಅರ್ಥವೇ ಬದಲಾಗಿ ಹೋಯಿತು. ಇಂದು ಅದು ಕಾಂಗ್ರೆಸ್ಸನ್ನು, ಅದರಲ್ಲೂ ನೆಹರು ಅವರನ್ನು, ಬೈಯುವ ಪದವಾಗಿ ಬಿಟ್ಟಿದೆ. ಸಂಘ ಪರಿವಾರ ನಿಧಾನವಾಗಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿರುವ ಈ ಕಾಲದಲ್ಲಂತೂ "ಸೆಕ್ಯುಲರಿಸಂ" ಎನ್ನುವುದು ಬುದ್ಧಿಜೀವಿಗಳ ಮೇಲೆ ಉಪಯೋಗಿಸುವ ಟೀಕಾಸ್ತ್ರವಾಗಿ ಬಿಟ್ಟಿದೆ. ಅದೊಂದು ಪಶ್ಚಿಮಮುಖಿಯಾದ, ಈ ದೇಶಕ್ಕೆ ಹೊರತಾದ ಪದ ಎಂದಾಗಿದೆ. ಇಂದು ಜಾತ್ಯತೀತರು ಎಂದ ಕೂಡಲೇ ಅವರು ಹಿಂದುತ್ವ ವಿರೋಧಿಗಳು, ಮುಸ್ಲಿಂ ಮತ್ತು ಇತರ ಅಲ್ಪಸಂಖ್ಯಾತರ ಪರವಾಗಿರುವವರು ಎಂಬಂತೆ ಬಿಂಬಿಸಲಾಗುತ್ತಿದೆ. ಅಷ್ಟೇ ಅಲ್ಲ ಸೆಕ್ಯುಲರ್ ಜನ ಇತ್ತೀಚೆಗೆ ರಾಷ್ಟ್ರವಿರೋಧಿಗಳು ಕೂಡ ಆಗಿಬಿಟ್ಟಿದ್ದಾರೆ! ಬಹುಷ: ಹಿಂದುತ್ವವಾದಿಗಳಿಗೆ 'ಸೆಕ್ಯುಲರ್' ಎಂಬ ಪರಿಕಲ್ಪನೆಯೇ ಅಪಥ್ಯವಾಗಿರುವುದರಿಂದ ಮತ್ತೆ ಅದರ ಬಗ್ಗೆ ಆಳವಾದ ಭಯ ಇರುವುದರಿಂದ ಹೀಗೆ ಅದರ ಅರ್ಥವನ್ನು ತಿರುಚಲಾಗಿದೆ. ಹಾಗೆಯೇ ಇಂದು 'ರಾಷ್ಟ್ರೀಯತೆ' ಎಂದರೆ ಹಿಂದೂ ರಾಷ್ಟ್ರೀಯತೆ ಎಂಬಂತಾಗಿದೆ. ಇದು ಎಂದಿನಿಂದ ಹೀಗಾಯಿತು? ರಾಷ್ಟ್ರೀಯತೆ ಎಂಬ ಪದ ಮತ್ತು ಪರಿಕಲ್ಪನೆಯಲ್ಲಿ ಯಾವಾಗ ಇಂಥ ಪಲ್ಲಟವಾಯಿತು?

'ಹಿಂದುತ್ವ', 'ಭಾರತೀಯ ಸಂಸ್ಕೃತಿ', 'ಜಾತ್ಯತೀತತೆ' ಮುಂತಾದ ಪದಗಳಿಗೂ, ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆಗೂ ಆಳವಾದ ಸಂಬಂಧವಿದೆ. ಹಿಂದೂ ಧರ್ಮ ಎನ್ನುವುದಕ್ಕೆ 'ಹಿಂದುತ್ವ', ಬ್ರಾಹ್ಮಣೀಕರಣಕ್ಕೆ 'ಭಾರತ ಸಂಸ್ಕೃತಿ' ಮತ್ತು ದೇಶ ಪ್ರೇಮ ಎನ್ನುವುದಕ್ಕೆ 'ರಾಷ್ಟ್ರೀಯತೆ' ಎನ್ನುವ ಪದಗಳನ್ನು ಒಂದು short hand ನಂತೆ ಬಳಸಲಾಗುತ್ತಿದೆ ಮತ್ತೆ ಆ ಮೂಲಕ ಅವುಗಳ ಅರ್ಥವನ್ನು ತಿರುಚಲಾಗುತ್ತಿದೆ.

ಉದಾಹರಣೆ 'ಹಿಂದೂಗಳ ಮನಸ್ಸಿಗೆ ನೋವುಂಟು ಮಾಡುವಂತೆ ಮಾತನಾಡಿದ್ದರಿಂದ

ಸ್ವಾಮಿ ಅಗ್ನಿವೇಶ್ ಅವರನ್ನು ಥಳಿಸಲಾಯಿತು ಎಂಬ ಮಾತು ಈಗ ಎಲ್ಲೆಡೆ ಹರಿದಾಡುತ್ತಿದೆ. ಹಲ್ಲೆಗೆ ಈ ಮೂಲಕ ಸಮರ್ಥನೆಯನ್ನು ಒದಗಿಸಲಾಗಿದೆ. ಆದರೆ ಹೀಗೆ ಹಿಂದೂಗಳ ಭಾವನೆಗೆ ನೋವುಂಟಾದ ಸಂದರ್ಭವನ್ನು ಕೆದಕಿ ನೋಡಿದರೆ ಆಳದಲ್ಲಿ ಅದು ಹಿಂದುತ್ವ ಪರಿಕಲ್ಪನೆಗೆ ಒಡ್ಡಿದ ವಿರೋಧ ಅಥವಾ ಟೀಕೆ ಎನ್ನುವುದು ತಿಳಿಯುತ್ತದೆ. (ದಲಿತರ ಮೇಲೆ ಬರ್ಬರವಾಗಿ ಹಲ್ಲೆಯಾದಾಗ ಯಾಕೆ ಯಾವ ಹಿಂದೂ ಭಾವನೆಗಳಿಗೂ ನೋವಾಗುವುದಿಲ್ಲ ಎನ್ನುವುದು ಬೇರೆ ಮಾತು! ಯಾಕೆಂದರೆ ಅದರಿಂದ ಹಿಂದುತ್ವಕ್ಕೆ ಯಾವ ಧಕ್ಕೆಯೂ ಇಲ್ಲ!) ಇದು ಯಾಕೆ ಹೀಗೆ ಎಂದರೆ ಜನ ಮಾನಸದಲ್ಲಿ ಹಿಂದೂ-ಹಿಂದುತ್ವ, ಇವೆರೆಡರ ನಡುವಿನ ವ್ಯತ್ಯಾಸವನ್ನು ಮರೆಮಾಚಲಾಗಿದೆ ಮತ್ತು ಹೀಗೆ ಮಾಡಿರುವುದರಿಂದ ಹಿಂದುತ್ವದ ಕುರಿತ ಟೀಕೆಯನ್ನು ಇಡೀ ಹಿಂದೂಗಳ ಹಿಂದೂಧರ್ಮದ ವಿರುದ್ಧದ ಪ್ರಹಾರ ಎಂಬಂತೆ ಬಿಂಬಿಸಲಾಗುತ್ತದೆ. ಇದರ ಹಿಂದೆ ಬಲಪಂಥೀಯ ಸಂಘ ಪರಿವಾರದ ಸಾಂಸ್ಕೃತಿಕ ರಾಜಕಾರಣ ಅಡಗಿದೆ. ರಾಜಕೀಯಕ್ಕೂ ಭಾಷೆಗೂ ಇರುವ ಸಂಕೀರ್ಣ ಸಂಬಂಧವನ್ನು ಇದು ಸೂಚಿಸುತ್ತದೆ.

ಹೀಗೆಯೇ ಇಂದು ಭಾರತೀಯ ಸಂಸ್ಕೃತಿ ಎಂಬ ಹೆಸರಿನಲ್ಲಿ ಎತ್ತಿಹಿಡಿಯುವ ಆಚಾರ-ವಿಚಾರಗಳು, ನಂಬಿಕೆಗಳು, ಆಹಾರ ಪದ್ಧತಿ ಎಲ್ಲವೂ ಮೇಲ್ಜಾತಿಗಳಿಗೆ ಮಾತ್ರ ಸೀಮಿತವಾಗಿದ್ದರೂ, ತಳಸಮುದಾಯದ ಬಹುಸಂಖ್ಯಾತ ಸಮಾಜಗಳು ಈ ಸಂಸ್ಕೃತಿಯ ಹೊರಗಿದ್ದರೂ, ಅದನ್ನು ಮರೆಮಾಚಿ ಎಲ್ಲದಕ್ಕೂ 'ಭಾರತೀಯ' ಎಂಬ ಹಣೆಪಟ್ಟಿಯನ್ನು ಅಂಟಿಸಲಾಗುತ್ತದೆ.

ಈ ಮೇಲಿನ ವಿವರಣೆಯನ್ನು 'ರಾಷ್ಟ್ರೀಯತೆ' ಎಂಬ ಪರಿಕಲ್ಪನೆಗೂ ಅನ್ವಯಿಸಬಹುದಾಗಿದೆ. ಇಂದು ರಾಷ್ಟ್ರ ಎಂದರೆ ಕೇವಲ ಬಲಾಢ್ಯರ, ಮೇಲು ಜಾತಿಯವರ ಒಕ್ಕೂಟ ಎಂದಾಗಿದೆ. ಆದರೆ ಒಂದು ರಾಷ್ಟ್ರೀಯತೆ ಒಳಗೊಳ್ಳಬೇಕಾದ ಅಲ್ಪಸಂಖ್ಯಾತರ ಬಗ್ಗೆ, ಅವರ ಹಕ್ಕುಗಳ ಬಗ್ಗೆ ಮಾತನಾಡಿದರೆ, ನೀವು ರಾಷ್ಟ್ರವಿರೋಧಿ, ಸುಳ್ಳು ಜಾತ್ಯತೀತರಾಗಿ ಬಿಡುತ್ತೀರಿ. ಹೀಗಾಗಿ ರಾಷ್ಟ್ರೀಯತೆ ಎನ್ನುವುದು ಇಂದು ಬಹು ಚರ್ಚಿತವಾದ ಹಾಗೆಯೇ ಬಹು 'ಅರ್ಥವಂಚನೆ'ಗೆ ಒಳಗಾದ ಪದ ಮತ್ತು ಪರಿಕಲ್ಪನೆ ಇದು. ಇಂದು ಸಂಘಪರಿವಾರದ ಹುನ್ನಾರಗಳನ್ನು ಟೀಕಿಸಿದರೆ, ಅದರ ಹಿಂದುತ್ವ ಸಿದ್ಧಾಂತವನ್ನು ಪ್ರಶ್ನಿಸಿದರೆ, ಅಷ್ಟೇ ಏಕೆ ಇವರಿಂದ ಹಲ್ಲೆಗೊಳಗಾದವರ ಪರ ಮಾತನಾಡಿದರೆ ಅವು 'ರಾಷ್ಟ್ರ ವಿರೋಧಿ' ಎಂದು ಕರೆಸಿಕೊಳ್ಳುವಷ್ಟು ಮಟ್ಟಿಗೆ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ತಿರುಚಲಾಗಿದೆ. ಭಾರತದ ಆಡಳಿತ ವರ್ಗದ, ಬಂಡವಾಳಶಾಹಿ ಪ್ರಣೀತ ಆಧುನಿಕ ಅಭಿವೃದ್ಧಿಯನ್ನು ಪ್ರಶ್ನಿಸುವ ಪ್ರಗತಿಪರರು, ಪರಿಸರವಾದಿಗಳೂ ಕೂಡ ಈ 'ರಾಷ್ಟ್ರ ವಿರೋಧಿ' ಎನ್ನುವ ಸಾಲಿಗೆ ಸೇರಿದ್ದಾರೆ. ಆಡಳಿತ ವರ್ಗದ ದೃಷ್ಟಿಯಲ್ಲಿ ಜೆ.ಎನ್.ಯುನ ಕನ್ನಯಕುಮಾರ್, ಪರಿಸರವಾದಿ ಹೋರಾಟಗಾರ್ತಿ ಮೇಧಾ ಪಾಟ್ಕರ್ ಮುಂತಾದವರು ಈ ರೀತಿಯ 'ರಾಷ್ಟ್ರವಿರೋಧಿ'ಗಳು. ಹಾಗಾದರೆ ಈ 'ರಾಷ್ಟ್ರ', 'ರಾಷ್ಟ್ರೀಯತೆ' ಎನ್ನುವ ಪರಿಕಲ್ಪನೆ ಎಂಥದ್ದು? ಎಲ್ಲಿಂದ ಬಂತು?

ಮೊದಲಿಗೆ ರಾಷ್ಟ್ರೀಯತೆಗೂ ದೇಶಪ್ರೇಮಕ್ಕೂ ಇರುವ ಸಂಬಂಧ. ಇವುಗಳು ಬೇರೆಯೇ ಆದ ಪರಿಕಲ್ಪನೆಗಳಾಗಿದ್ದರೂ ಇವುಗಳನ್ನು ಒಂದೇ ಎಂದು ಬಿಂಬಿಸಲಾಗುತ್ತದೆ. ಇವುಗಳ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ಮರೆಮಾಚಿರುವುದರಿಂದ ಮತ್ತು ಒಂದಕ್ಕೆ ಇನ್ನೊಂದನ್ನು ಸಮಾನಾಂತರ ಪದಗಳೆಂದು ಬಳಸುವುದರ ಮೂಲಕ ಎರಡೂ ಪದಗಳ ಅರ್ಥಗಳನ್ನು ತಿರುಚಲಾಗಿದೆ. ಕ್ರಿಕೆಟ್ಟಿನಲ್ಲಿ ಪಾಕಿಸ್ತಾನದ ಆಟಗಾರ ಸೆಂಚುರಿ ಬಾರಿಸಿದಾಗ ನೀವು ಚಪ್ಪಾಳೆ ತಟ್ಟಿದರೆ, ರಾಷ್ಟ್ರಗೀತೆಗೆ ನೀವು ಎದ್ದು ನಿಲ್ಲದಿದ್ದರೆ ನೀವು ದೇಶದ್ರೋಹಿ; ಆದರೆ ರಾಷ್ಟ್ರವನ್ನು ಮುನ್ನಡೆಸಲು ಬೇಕಾದ ತೆರಿಗೆಯನ್ನು ಪಾವತಿಸದಿದ್ದರೆ ನೀವು ರಾಷ್ಟ್ರವಿರೋಧಿ

ಏನಲ್ಲ. ಗೋವುಗಳನ್ನು ಸಾಗಿಸುತ್ತಿದ್ದಾರೆ ಎಂಬ ಅಪಾದನೆಯ ಮೇರೆಗೆ ಕೆಲವರನ್ನು ಕೈಯಲ್ಲಿ ಹೊಡೆದು ಸಾಯಿಸಿದರೂ, ಬಾಯಲ್ಲಿ 'ಭಾರತ್ ಮಾತಾಕಿ ಜೈ!' ಎಂದು ಉಲಿದರೆ ಸಾಕು, ನಿಮ್ಮ ದೇಶಪ್ರೇಮವನ್ನು ಪ್ರಶ್ನಿಸುವಂತೆಯೇ ಇಲ್ಲ. ಬಾರಾಖೂನಿ ಮಾಫ್!

ದೇಶಪ್ರೇಮ ಎನ್ನುವುದು ನಾಡಿಗೂ ಜನರಿಗೂ ಮಧ್ಯೆ ಇರುವ ಒಂದು ಭಾವನಾತ್ಮಕ ಸಂಬಂಧವನ್ನು ಸೂಚಿಸಿದರೆ, ರಾಷ್ಟ್ರೀಯತೆ ಎನ್ನುವುದು ಒಂದು ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮತ್ತು ಭಾಷಿಕತೆಯ ಆಧಾರದ ಮೇಲೆ ಕಟ್ಟಲ್ಪಟ್ಟಿರುವ ಪರಿಕಲ್ಪನೆ. ಇದು ಚರಿತ್ರೆಯ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಒಂದು ಆಧುನಿಕ ವಿದ್ಯಮಾನ. ಅಲ್ಲದೆ ರಾಷ್ಟ್ರೀಯತೆ ಎನ್ನುವುದು ಒಂದು ಸಿದ್ಧಾಂತವಾಗಿ, ಒಂದು ಸಮುದಾಯದ ಅನನ್ಯತೆಯನ್ನು ರೂಪಿಸುವ, ಮತ್ತು ಬೇರೆ ಬೇರೆ ಗುರುತುಗಳಿಗಿಂತಲೂ (ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿ) ತಾನೆ ಮುಖ್ಯ ಮತ್ತು ಪ್ರಥಮ ಎಂಬಂತೆ ಬಿಂಬಿಸುವ ವಾಖ್ಯಾನವೂ ಹೌದು. ಮಾನವ ಸಮಾಜದಲ್ಲಿ ದೇಶಪ್ರೇಮ ಅನಾದಿಕಾಲದಿಂದಲೂ ರೂಪುಗೊಂಡ ಭಾವನೆ; ಆದರೆ ರಾಷ್ಟ್ರೀಯತೆ ಇಪ್ಪತ್ತನೆ ಶತಮಾನದ ಕೂಸು. ಇನ್ನೂ ನಿರ್ದಿಷ್ಟವಾಗಿ ಹೇಳಬೇಕಾದರೆ ಮಹಾಯುದ್ಧದ ಕಾಲದಲ್ಲಿ ಹುಟ್ಟಿಕೊಂಡು, ಕ್ರಮೇಣ ಒಂದು ತತ್ವವಾಗಿ ಬೆಳೆದ ವಿದ್ಯಮಾನ. ವಿಜ್ಞಾನದ ಇತಿಹಾಸಕಾರವಾದ ಸಿ.ಪಿ. ಸ್ನೋ ಎಂಬ ವಿದ್ವಾಂಸ ಹೇಗೆ ಮೂಲದಲ್ಲಿ 'ಅಂತರಾಷ್ಟ್ರೀಯ' ವಾಗಿದ್ದ ವಿಜ್ಞಾನ ಮತ್ತು ವೈಜ್ಞಾನಿಕ ಸಂಶೋಧನೆ ಮೊದಲ ಮಹಾಯುದ್ಧದ ಕಾಲದಲ್ಲಿ 'ರಾಷ್ಟ್ರೀಯ ವಿಜ್ಞಾನ'ವಾಗಿ ಮಾರ್ಪಟ್ಟಿತು ಎಂದು ವಿವರಿಸಿದ್ದಾನೆ. ಯುದ್ಧಕ್ಕೆ ಮೊದಲು ಬೇರೆಬೇರೆ ದೇಶದ ವಿಜ್ಞಾನಿಗಳು ಒಂದೇ ವಿಶ್ವವಿದ್ಯಾನಿಯದಲ್ಲಿ ಇದ್ದುಕೊಂಡು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅವರ ಚರ್ಚೆ ಕ್ಯಾಂಪಸ್ಸಿನ ಕ್ಯಾಂಟೀನುಗಳಲ್ಲೂ ಮುಂದುವರೆದು ಊಟದ ಮೇಜಿನಮೇಲೆ ಅವರು ಗೀಚಿಕೊಳ್ಳುತ್ತಿದ್ದ ವೈಜ್ಞಾನಿಕ ಸೂತ್ರಗಳನ್ನು ಅಲ್ಲಿಯೇ ಬಿಟ್ಟು ಹೋದರೆ ಅದನ್ನು ಕ್ಯಾಂಟಿನ ಕೆಲಸಗಾರರು ಅಳಿಸದೆ ಇಟ್ಟಿರುತ್ತಿದ್ದರಂತೆ. ಮುಂದಿನ ದಿನ ಮತ್ತೆ ಚರ್ಚೆ ಶುರುವಾದರೆ, ಹಿಂದಿನ ದಿನದ ಸೂತ್ರಗಳನ್ನು ಹಾಗೆಯೇ ಮುಂದುವರೆಸುತ್ತಿದ್ದರಂತೆ. ಯಾವಾಗ ಯುದ್ಧ ಪ್ರಾರಂಭವಾಯಿತೋ, ಆಗ ಇಂತಹ ಚರ್ಚೆಗಳು ಕಣ್ಮರೆಯಾದವಂತೆ. ವಿವಿಧ ರಾಷ್ಟ್ರಗಳ ನಡುವಿನ ವಿಜ್ಞಾನಿಗಳ ನಡುವೆ ಸಂವಹನವೇ ನಿಂತುಹೋಯಿತಂತೆ. ನಂತರ ವಿಜ್ಞಾನಿಗಳು ಯುದ್ಧಕ್ಕೆ ಬೇಕಾದ ಮಾರಕಾಸ್ತ್ರಗಳು, ಅದರಲ್ಲೂ ಅಣ್ವಸ್ತ್ರ ಕುರಿತ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರಿಂದ, ಅವರ ವಿಜ್ಞಾನ 'ರಾಷ್ಟ್ರೀಯತೆ' ಎಂಬ ಸಂಕೋಲೆಯಲ್ಲಿ ಸಿಕ್ಕಿಹಾಕಿಕೊಂಡಿತು. ಅಲ್ಲಿಯವರೆಗೆ ಕೇಂಬ್ರಿಜ್, ಆಕ್ಸ್‌ಫರ್ಡ ಮುಂತಾದ ಕಡೆ ಕೇವಲ 'ವಿಜ್ಞಾನಿ'ಗಳಾಗಿದ್ದವರು. ೩೦ರದಶಕದಲ್ಲಿ ತಮ್ಮ ತಮ್ಮ ದೇಶದ ಗುಣವಾಚಕಗಳನ್ನು ಸೇರಿಸಿಕೊಂಡು 'ಜರ್ಮನ್ ವಿಜ್ಞಾನಿ' 'ರಷ್ಯನ್ ವಿಜ್ಞಾನಿ'ಗಳಾಗಿ ಮಾರ್ಪಟ್ಟಿದ್ದನ್ನು ಸಿ.ಪಿ.ಸ್ನೋ ಅತ್ಯಂತ ವಿಷಾದದಿಂದ ದಾಖಲಿಸಿದ್ದಾನೆ.

ರಾಷ್ಟ್ರೀಯತೆ ಎನ್ನುವುದು 'ನಾವು' ಮತ್ತೆ 'ಅವರು' , 'ಒಳಗು' ಹಾಗೂ 'ಹೊರಗು' ಎಂಬ ವ್ಯತ್ಯಾಸಗಳನ್ನು ಸೃಷ್ಟಿಸುವುದರ ಮೂಲಕ ಅಸ್ತಿತ್ವಕ್ಕೆ ಬರುತ್ತದೆ. ಹೀಗಾಗಿ ಅದರ ಹುಟ್ಟಿನಲ್ಲೇ ಒಂದು ವಿಭಜನೆಯ ಮತ್ತು ಸೇರ್ಪಡೆಯ ಅಂಶ ಅಡಕವಾಗಿದೆ. ಜಗತ್ತಿನ ಎಲ್ಲ ರಾಷ್ಟ್ರೀಯತೆಗಳಿಗೂ ಸಾಮಾನ್ಯವಾದ ಲಕ್ಷಣ ಇದು. ತನ್ನ ಅನನ್ಯತೆಯನ್ನು ಕಟ್ಟಿಕೊಳ್ಳಲು ಅದು ಕೆಲವರನ್ನು ಅನ್ಯ ಅಥವಾ ಇತರೆ ಎಂದು ಗುರುತಿಸಬೇಕಾದ ಸಂಧಿಗ್ಧತೆಯಲ್ಲಿ ರಾಷ್ಟ್ರೀಯತೆಯ ಉಗಮ ಅಡಗಿದೆ. ಇದು ರಾಷ್ಟ್ರೀಯತೆಯ ಪರಿಕಲ್ಪನೆಯ ಮೂಲದಲ್ಲೇ ಇರುವ ದ್ವಂದ್ವ. ಕೆಲವೊಮ್ಮೆ ಅತೀ ರಾಷ್ಟ್ರೀಯತೆ ಫ್ಯಾಸಿಸ್ಟ್ ಧೋರಣೆಯನ್ನು ಬೆಳೆಸುತ್ತದೆ. ಆರ್ಯನ್ನರ ಪಾರಮ್ಯವನ್ನು ಎತ್ತಿಹಿಡಿಯಲು ಜ್ಯೂಗಳನ್ನು ಅನ್ಯ ಜನಾಂಗ ಎಂಬ ಅಭಿಪ್ರಾಯವನ್ನು ಹಿಟ್ಲರ್

ಜರ್ಮನ್ನರಲ್ಲಿ ಬಿತ್ತಬೇಕಾಯಿತು.

ರಾಷ್ಟ್ರೀಯತೆ ತನ್ನ ಅನನ್ಯತೆಯನ್ನು ಕಟ್ಟಿಕೊಳ್ಳುವಾಗ ಸಂಸ್ಕೃತಿ, ಭಾಷೆ, ಜನಾಂಗೀಯತೆ, ಭೌಗೋಳಿಕ ವ್ಯಾಪ್ತಿ, ಚರಿತ್ರೆ, ನೆನಪು ಮತ್ತೆ ಪುರಾಣಗಳನ್ನು ಬಳಸಿಕೊಳ್ಳುತ್ತದೆ. ಇದರಲ್ಲಿ ಭೌಗೋಳಿಕ ವ್ಯಾಪ್ತಿ ಮಾತ್ರ ಖಾತರಿಯಾದ, ವಸ್ತುನಿಷ್ಠವಾದ ಹಾಗೂ ಅಳತೆಗೆ ಸಿಗುವ ವಸ್ತು. ಇನ್ನಿತರ ಎಲ್ಲ ಸಾಮಗ್ರಿಗಳನ್ನು ರಾಷ್ಟ್ರೀಯತೆಗಾಗಿ ಹುಟ್ಟು ಹಾಕಲಾಗುತ್ತದೆ. ಇಲ್ಲಿ 'ಹುಟ್ಟಿ ಹಾಕುವುದು' ಎಂದರೆ ಈ ಮೊದಲು ಇಲ್ಲದ್ದನ್ನು ಹೊಸದಾಗಿ ಸೃಷ್ಟಿಸುವುದು ಎಂತಲ್ಲ. ಇತಿಹಾಸದಲ್ಲಿ ಇರುವ ಎಲ್ಲ ಅಂಶಗಳಲ್ಲಿ ಕೆಲವನ್ನು ಮಾತ್ರ ಬಳಸಿಕೊಂಡು, ಅದನ್ನೇ ತನ್ನ ನಿಜವಾದ ಚಾರಿತ್ರಿಕ ಅಸ್ಮಿತೆ ಎಂದು ನಂಬುವುದು, ಮತ್ತು ಇತರರನ್ನೂ ನಂಬಿಸುವುದು. ಹೀಗೆ ರಾಷ್ಟ್ರೀಯತೆ ತನ್ನ ಅಸ್ಮಿತೆಗಾಗಿ ಗತಕಾಲದ ಚರಿತ್ರೆಯನ್ನು ಮರು ಸೃಷ್ಟಿಮಾಡುತ್ತದೆ. ಅದಕ್ಕೆ ಮೇಲ್ಕಂಡ ಸಾಮಾಗ್ರಿಗಳಲ್ಲಿ ತನಗೆ ಬೇಕಾದ್ದ ಕೆಲವನ್ನು ಮಾತ್ರ ಬಳಸಿಕೊಳ್ಳುತ್ತದೆ. ಅಲ್ಲದೆ, ಈ ಚರಿತ್ರೆ 'ಹಿಂದಕ್ಕೆ ಹೋದಷ್ಟೂ ಹಿರಿತನ' ಎಂಬ ನಂಬಿಕೆಯ ಮೇಲೆ ಬಲವಾಗಿ ನಿಂತಿರುತ್ತದೆ. ಇದು ಎಲ್ಲ ಕಾಲದಲ್ಲೂ ಇದ್ದು, ಈಗಲೂ ಇರುವ ಬಲವಾದ ನಂಬಿಕೆ. ಉದಾಹರಣೆಗೆ ತಮಿಳರು ತಮ್ಮ ರಾಷ್ಟ್ರೀಯತೆಯನ್ನು ಸಾದರಪಡಿಸಲು, ಅದಕ್ಕೆ ಮೂಲವಾದ ತಮಿಳು ಭಾಷೆಯನ್ನು ಎಷ್ಟು ಹಿಂದಕ್ಕೆ ತಳ್ಳಬಹುದೋ ಅಷ್ಟು ಹಿಂದಕ್ಕೆ ತಳ್ಳಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಾರೆ. ಪ್ರಾಚಿನವಾದಷ್ಟೂ ಪುರಾತನ, ಪುರಾತನವಾದಷ್ಟೂ ಅಧಿಕೃತ ಎಂಬ ಸೂತ್ರ ಇಲ್ಲಿ ಕೆಲಸಮಾಡುತ್ತದೆ. ಹಿಂದೂ ಧರ್ಮವನ್ನು 'ಸನಾತನ' ಎಂದು ಕರೆಯುವುದರಲ್ಲೂ ಇದೇ ಸೂತ್ರ ಕೆಲಸಮಾಡುತ್ತದೆ. ಹಿಂದುತ್ವ ವಕ್ತಾರರ ಪ್ರಕಾರ ಅದು ಜಗತ್ತಿನ ಎಲ್ಲ ಸಂಸ್ಕೃತಿಗಳಿಗಿಂತಲೂ ಪ್ರಾಚೀನವಾದದ್ದು. ಇಲ್ಲಿ ಚರಿತ್ರೆಯ ಸತ್ಯಾಸತ್ಯದ ಪ್ರಶ್ನೆಗಿಂತಲೂ, ನಂಬಿಕೆ, ಶ್ರೇಷ್ಟತೆಯ ಗೀಳು, ಒಣ ಹೆಮ್ಮೆ ಮುಖ್ಯವಾಗುತ್ತದೆ.

ರಾಷ್ಟ್ರೀಯತೆಯ ಪರಿಕಲ್ಪನೆ ಆಧುನಿಕ ಎಂದೆವು. ಅದು ಮಹಾಯುದ್ಧದ ಕಾಲದಲ್ಲಿ ಮುನ್ನೆಲೆಗೆ ಬಂದ ವಿದ್ಯಮಾನ ಅಂತಲೂ ಹೇಳಲಾಗಿದೆ. ಹಾಗಾದರೆ, ಅದಕ್ಕೆ ಪರಂಪರೆಯ ಹಂಗೇಕೆ? ಎಷ್ಟು ಹಿಂದಕ್ಕೆ ಆ ಪರಂಪರೆಯ ಮೂಲವನ್ನು ತಳ್ಳಿದರೂ ಅಷ್ಟು ಹಿರಿದಾದ ಹಿರಿಮೆ ಈ ಆಧುನಿಕ ಪರಿಕಲ್ಪನೆಗೆ ಲಭಿಸುವುದು ಹೇಗೆ?

ರಾಷ್ಟ್ರೀಯತೆ ನಿಂತಿರುವುದೇ ಈ ಪುರಾತನ ಮತ್ತು ಆಧುನಿಕತೆಯ ವಿಶಿಷ್ಟ ಸಂಗಮದಲ್ಲಿ. ರಾಷ್ಟ್ರೀಯತೆ ಕುರಿತ ಜಿಜ್ಞಾಸೆಯಲ್ಲಿ ರಾಷ್ಟ್ರೀಯತೆಗೆ ಇರುವ ಈ ಇಬ್ಬಂದಿ ಮುಖ ಅತ್ಯಂತ ವಿವಾದಾತ್ಮಕವೂ ಸಮಸ್ಯಾತ್ಮಕವೂ ಆಗಿರುವ, ಇಂದಿಗೂ ಮುಂದುವರೆದಿರುವ ವಿವಾದವಾಗಿದೆ. ರಾಷ್ಟ್ರೀಯತೆ ಕುರಿತು ಅಧ್ಯಯನ ಮಾಡಿರುವವರು ಈ ವಾದವನ್ನು ಎರಡು ನೆಲೆಗಳಲ್ಲಿಟ್ಟು ವಿಶ್ಲೇಷಿದ್ದಾರೆ. ಆದರೆ ಈ ವಿವಾದ ಎಷ್ಟು ಜಟಿಲವಾದದ್ದೆಂದರೆ, ವಿಶ್ಲೇಷಣಾಕಾರರಲ್ಲಿ 'ಆದಿಮ' ಮತ್ತು 'ಆಧುನಿಕ' ಎಂಬ ಎರಡು ಬಣಗಳೇ ಸೃಷ್ಟಿಯಾಗಿದೆ.

ರಾಷ್ಟ್ರೀಯತೆ: ಆದಿಮವೋ? ಆಧುನಿಕವೋ?

ಆಧುನಿಕರು ರಾಷ್ಟ್ರೀಯತೆಯನ್ನು ಇತ್ತೀಚಿನ ವಿದ್ಯಮಾನವೆಂದೂ, ಒಂದು ಚಾರಿತ್ರಿಕ ಘಟ್ಟದ ಉತ್ಪಾದನೆ ಎಂದೂ ಗುರುತಿಸಿರುತ್ತಾರೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅದು ೧೮ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಜ್ಞಾನೋದಯ ವೈಚಾರಿಕತೆಯ (enlightenment rationality) ಕೂಸು ಎಂಬುದು ಅದರ ಅಭಿಪ್ರಾಯ. ಇದಕ್ಕೆ ವಿರುದ್ಧವಾಗಿ 'ಆದಿಮ' ಬಣದ ವ್ಯಾಖ್ಯಾನಕಾರರು ರಾಷ್ಟ್ರೀಯತೆಯ ನೆಲೆಯನ್ನು ಮನುಷ್ಯರ ಮೂಲಭೂತ ಗುಣವಾದ ಸಾಂಘಿಕತೆಯಲ್ಲಿ ಗುರುತಿಸುತ್ತಾರೆ. ಒಂದು ಗುಂಪಾಗಿ ಗುರುತಿಸಿಕೊಳ್ಳುವ ಅಗತ್ಯ ಮಾನವ

ಜನಾಂಗದ ಮುಖ್ಯ ಲಕ್ಷಣ. ಗುಂಪಿನಲ್ಲಿ ಬೆಳೆಯುವ ಮಕ್ಕಳು ಒಂದೇ ಆಡುಭಾಷೆ ಕಲಿಯುತ್ತಾರೆ; ಒಂದೇ ರೀತಿಯ ಆಚರಣೆಗಳನ್ನು ಆಚರಿಸುತ್ತಾರೆ. ಒಂದೇ ರೀತಿಯ ಆಹಾರ –ವಿಚಾರಗಳನ್ನು ಪಾಲಿಸುತ್ತಾರೆ. ಎಲ್ಲಕ್ಕಿಂತಲ್ಲೂ ಹೆಚ್ಚಾಗಿ ತಮ್ಮ ಪೂರ್ವಜರನ್ನೂ (ಅಥವಾ ದೇವರನ್ನು) ಒಂದೇ ರೀತಿಯಲ್ಲಿ ಆರಾಧಿಸುತ್ತಾರೆ. ಇದು ಜನರಿಗೆ ಒಂದು ಸಮುದಾಯಕ್ಕೆ ಸೇರಿದ ಅನುಭವವನ್ನು ನೀಡುತ್ತದೆ. ಹಾಗೆಯೇ ಆ ಸಮುದಾಯಕ್ಕೆ ಸೇರದ ಭಿನ್ನ ಆಚರಣೆಗಳನ್ನು ಪಾಲಿಸುವವರನ್ನು 'ಅನ್ಯ'ರೆಂದು ಭಾವಿಸುತ್ತದೆ. ಹೀಗೆ 'ತಾನು ಮತ್ತು ಇತರರು' ಎಂಬ ಭಿನ್ನ ಭಾವವೇ ರಾಷ್ಟ್ರೀಯತೆಯನ್ನು ಹುಟ್ಟಿಹಾಕಲು ಬೇಕಾದ ಮೂಲಧಾತು. ಅದು ಈಗಿನ ಕಾಲದಲ್ಲೂ ಹೆಚ್ಚು ಸಂಕೀರ್ಣವಾಗಿ ಮುಂದುವರೆದಿರುವುದರಿಂದ, ರಾಷ್ಟ್ರೀಯತೆ ಒಂದು ಸನಾತನವಾದ ಆದರೆ ನಿರಂತರವಾದ ವಿದ್ಯಮಾನ ಎನ್ನುವುದು ಈ ಗುಂಪಿನ ವಾದ. ಒಂದು ಗುಂಪು ತನ್ನನ್ನು ತಾನು ವಿಶಿಷ್ಟ ಎಂದು ಗುರುತಿಸಿಕೊಳ್ಳಲು ಕ್ರಮೇಣ ಭೌಗೋಳಿಕ ವ್ಯಾಪ್ತಿ, ಕಾನೂನು, ಪ್ರಭುತ್ವ ಮುಂತಾದ ಪರಿಕರಗಳನ್ನು ಬಳಸಿಕೊಂಡರೂ ಅದರ ಮೂಲ ಪ್ರವೃತಿ ಒಂದೇ ಎನ್ನುವ ವಾದವನ್ನೂ 'ಆದಿಮ'ದ ವಕ್ತಾರರು ಬಳಸಿಕೊಳ್ಳುತ್ತಾರೆ. ಇವರ ಪ್ರಕಾರ ಈ ಕಾಲದ ಆಧುನಿಕ ರಾಷ್ಟ್ರೀಯತೆ ಮನುಷ್ಯ ಸ್ವಭಾವದಲ್ಲೇ ಇರುವ, ಅನಾದಿಯಾದ 'ಗುಂಪುಗಾರಿಕೆ'ಯ ಸಮಕಾಲೀನ ಅಭಿವ್ಯಕ್ತಿ. ಮುಂಚೆ ಈ ಅಭಿವ್ಯಕ್ತಿ ಒಬ್ಬ ಪಾಳೆಯಗಾರ, ರಾಜ, ಚಕ್ರವರ್ತಿ ಇತ್ಯಾದಿಗಳ ಆಡಳಿತದಲ್ಲಿದ್ದ ಪಾಳೇಗಾರಿಕೆ ಅಥವಾ ಅರಸೊತ್ತಿಗೆಯ ರೂಪದಲ್ಲಿ ಇದ್ದರೆ, ಈಗಿನ ಪ್ರಜಾಪ್ರಭುತ್ವದ ಕಾಲಘಟ್ಟದಲ್ಲಿ ಈಗ ಅದು 'ರಾಷ್ಟ್ರ' ಮತ್ತೆ 'ರಾಷ್ಟ್ರೀಯತೆ'ಯ ಸ್ವರೂಪದಲ್ಲಿ ಪ್ರಕಟವಾಗಿದೆ. ಮುಂದೆ ಜಾಗತೀಕರಣದ ಮುಂದುವರಿಕೆಯಾಗಿ ರಾಷ್ಟ್ರ ರಾಷ್ಟ್ರಗಳ ನಡುವಿನ ಗೆರೆಯೇ ಇಲ್ಲವಾದಾದಲ್ಲಿ, ಹೊಸರೀತಿಯ ಬಂಡವಾಳಶಾಹಿ ಅಥವ ಸಮಾಜವಾದಿ ರಾಷ್ಟ್ರಗಳು ಸೃಷ್ಟಿಯಾಗಿ ನಮ್ಮ ಈ ಹೊತ್ತಿನ ರಾಷ್ಟ್ರ–ರಾಷ್ಟ್ರೀಯತೆಯ ಕಲ್ಪನೆಯೇ ಬದಲಾಗಬಹುದು. ಹೀಗೆ ರಾಷ್ಟ್ರೀಯತೆಯ ಲಕ್ಷಣಗಳು, ಅದನ್ನು ನಿರ್ವಹಿಸಲು ಬಳಸುವ ಸಾಮಗ್ರಿಗಳು ಬದಲಾಗುತ್ತವೆಯಾದರೂ ಮಾನವ ಸ್ವಭಾವದ ಮೂಲ ಸ್ವಭಾವವಾದ "ಸೇರುವ" (belonging) ಗುಣ ರಾಷ್ಟ್ರೀಯತೆಯ ಮೂಲ ದ್ರವ್ಯವಾಗಿ ಎಂದಿಗೂ ಬದಲಾಗದು ಎನ್ನುವುದು ಈ ಆದಿಮ ಬಣದ ವಾದ.

ಇದಕ್ಕೆ ಪ್ರತಿ ವ್ಯತಿರಿಕ್ತವಾಗಿ ಆಧುನಿಕರು ಇನ್ನೊಂದು ರೀತಿಯ ವಾದವನ್ನು ಮುಂದಿಡುತ್ತಾರೆ. ಅವರು ಕೂಡ 'ಭಾಷೆ', ಸಂಸ್ಕತಿ, ನಂಬಿಕೆ–ಆಚರಣೆ ಜನಾಂಗೀಯತೆ ಇತ್ಯಾದಿಗಳಿಗೆ ಸೇರಿರುವ ಗುಣ ಮಾನವ ಸಮಾಜದ ಮೂಲ ಲಕ್ಷಣ ಎಂದು ಗುರುತಿಸುತ್ತಾರಾದರೂ ಅವಷ್ಟೇ ಆಧುನಿಕ ರಾಷ್ಟ್ರೀಯತೆಗೆ ಸಾಕಾಗುವುದಿಲ್ಲ; ಮತ್ತು ಈ ಹೊತ್ತಿನ ರಾಷ್ಟ್ರೀಯತೆ ತನ್ನ ಭೂತಕಾಲದ ಅನೇಕ ಅಂಶಗಳನ್ನು ಬಳಸಿಕೊಳ್ಳುತ್ತವೆಯಾದರೂ ಅವುಗಳನ್ನು ಆಧುನಿಕ ಕಾಲಘಟ್ಟಕ್ಕೆ ಬೇಕಾದ ಹಾಗೆ ಮರುರೂಪಿಸಿಕೊಳ್ಳುತ್ತದೆ. ಹೀಗಾಗಿ ಪ್ರಾಚೀನವಾದದ್ದು ಅಧುನಿಕವಾಗಿ ಮಾರ್ಪಡುತ್ತದೆ ಮತ್ತು ಹೀಗೆ ಮಾರ್ಪಡುವುದರಿಂದಲೇ ತಮ್ಮ ಆದಿಮ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಅಷ್ಟೇ ಏಕೆ ಅದು ಹಳೆಯ ಕಾಲದ ನಂಬಿಕೆ, ಆಚರಣೆ ಜೀವನ ಪದ್ಧತಿ ಇತ್ಯಾದಿಗಳಲ್ಲಿ ಕೆಲವನ್ನೂ ಮಾತ್ರ ಮುಂದಿಟ್ಟುಕೊಂಡು ತನ್ನದೇ ವ್ಯಾಖ್ಯಾನದ ಮೂಲಕ ಚರಿತ್ರೆ ಹಾಗೂ ಪರಂಪರೆಗಳನ್ನ ಮರುಸೃಷ್ಟಿಸುವುದರಿಂದ ರಾಷ್ಟ್ರೀಯತೆ ಒಂದು ಪಕ್ಕಾ ಆಧುನಿಕವಾದ ವಿದ್ಯಮಾನ ಎಂದು ವಾದಿಸುತ್ತದೆ.

ಈ ಬಗ್ಗೆ ಗೆಲ್ನರ್ ಮತ್ತು ಆಂಟೊನಿ ಸ್ಮಿತ್ ಎಂಬ ಗುರು–ಶಿಷ್ಯರ ನಡುವಿನ ವಾಗ್ವಾದ ಸ್ವಾರಸ್ಯವ್ವಾಗಿದ್ದು, ಅದು ರಾಷ್ಟ್ರೀಯತೆ ಕುರಿತ ಚರ್ಚೆಯ ಸಂಕೀರ್ಣತೆಯನ್ನು ಪ್ರಸ್ತುತ ಪಡಿಸುತ್ತದೆ. ಇದು ಇಂಗ್ಲೆಂಡಿನಲ್ಲಿ "ವಾರ್‌ವಿಕ್ ಡಿಬೇಟ್" ಎಂದು ಪ್ರಸಿದ್ಧವಾದ ವಾಗ್ವಾದ.

'ರಾಷ್ಟ್ರಗಳಿಗೆ ಹೊಕ್ಕುಳುಗಳಿವೆಯೇ?' ಇದು ಆಧುನಿಕನಾದ ಗೆಲ್ನರ್‌ನ ಪ್ರಶ್ನೆ. ಹೊಕ್ಕುಳು ನಮ್ಮ ತಾಯಿಯ ಅಂದರೆ ಪರಂಪರೆಯ ಜತೆ ಇರುವ ಕರುಳು ಬಳ್ಳಿ ಸಂಬಂಧದ ಸೂಚಕ. ಆದರೆ ಆಧುನಿಕವಾದ ರಾಷ್ಟ್ರಕ್ಕೂ ಪರಂಪರೆಗೂ ಹೊಕ್ಕುಳ ಬಳ್ಳಿ ಸಂಬಂಧವಿದೆಯೆ? 'ಇದೆ ಮತ್ತು ಇಲ್ಲ' ಎನ್ನುತ್ತಾನೆ ಗೆಲ್ನರ್. ಆತನ ವಾದ ಇದು: 'ಹುಟ್ಟುವ ಮುನ್ನ ಹೊಕ್ಕಳು ಅಗತ್ಯ ಸರಿ, ಆದರೆ ಹುಟ್ಟಿದ ನಂತರ ಅದೊಂದು ದೇಹದ ನಿಷ್ಪ್ರಯೋಜಕ ಅಂಗ, ಬೇರೆ ಅವಯವಗಳಂತೆ ಅದು ಜೀವಕ್ಕೆ ಅಗತ್ಯವಾದುದಲ್ಲ. ಸಂಸ್ಕೃತಿ, ಜನಾಂಗೀಯತೆ, ಭಾಷೆ ಇತ್ಯಾದಿ ರಾಷ್ಟ್ರ ನಿರ್ಮಾಣಕ್ಕೆ ಬೇಕಾದ ಪರಿಕರಗಳು ಈ ಹೊಕ್ಕಳು ಇದ್ದ ಹಾಗೆ, ಅದರ ಹುಟ್ಟಿಗೆ ಅವು ಬೇಕಾದರೂ ಒಂದು ಸಾರಿ ರಾಷ್ಟ್ರ ಅಸ್ತಿತ್ವಕ್ಕೆ ಬಂದಮೇಲೆ, ಅವು ಅನಗತ್ಯ. ಈ ಪರಿಕರಗಳು ಕೇವಲ ಗತಕಾಲದ ಪ್ರತೀಕಗಳಷ್ಟೆ. ಯಾಕೆಂದರೆ ಇಂದು ಅನೇಕ ರಾಷ್ಟ್ರಗಳು ಈ ಪರಿಕರಗಳಿಲ್ಲದೆಯೂ ಅಸ್ತಿತ್ವಕ್ಕೆ ಬಂದಿವೆ.

ಆದರೆ ಈತನ ಶಿಷ್ಯ ಆಂಟೋನಿ ಸ್ಮಿತ್ ಈ ಕಟ್ಟರ್ ಆಧುನಿಕವಾದವನ್ನು ಒಪ್ಪಿಕೊಳ್ಳಲಾರ. ಅವನ ಪ್ರಕಾರ, ರಾಷ್ಟ್ರೀಯತೆಯ ಹುಟ್ಟಿಗೆ ಕಾರಣವಾದ ಭೂತಕಾಲದ ಪರಿಕರಗಳು, ರಾಷ್ಟ್ರದ ಸ್ಥಾಪನೆ ನಂತರ ಸಂಪೂರ್ಣವಾಗಿ ಕಣ್ಮರೆಯಾಗುವುದಿಲ್ಲ. ಬದಲಿಗೆ ಅವು ಮತ್ತೆ ಮತ್ತೆ ಪ್ರತ್ಯಕ್ಷವಾಗುತ್ತಿರುತ್ತವೆ ಮತ್ತು ತಮ್ಮ ಪ್ರಭಾವವನ್ನು ರಾಷ್ಟ್ರೀಯತೆಯ ಮೂಲಕ ಇನ್ನಷ್ಟು ಹೆಚ್ಚಿಸಿಕೊಳ್ಳುತ್ತವೆ. ಹೀಗಾಗಿ ಅದನ್ನು ಅಲಕ್ಷಿಸಲಾಗದು. ಹೊಕ್ಕುಳು ದೇಹದ ಒಂದು ಭಾಗವಾಗಿ ಯಾವ ಪ್ರಯೋಜನಕ್ಕೆ ಬರದೇ ಇದ್ದರೂ ಅದು ಒಂದು ಅಳಿಸಲಾಗದ ಗುರುತಾಗಿ ಉಳಿದುಕೊಳ್ಳುವಂತೆ, ಮತ್ತು ತಾಯಿಯೊಡನೆಯ ಸಂಬಂಧವನ್ನು ಸದಾ ನೆನಪಿಸುವಂತೆ ರಾಷ್ಟ್ರೀಯತೆ ಪರಂಪರೆಯೊಡನೆ ತನ್ನ ನೆಂಟನ್ನು ಉಳಿಸಿಕೊಳ್ಳುತ್ತದೆ.

ಹೀಗೆ ಎರಡು ರೀತಿಯ ರಾಷ್ಟ್ರೀಯತೆಗಳು (ಒಂದು ಆಧುನಿಕ, ಇನ್ನೊಂದು ಪ್ರಾಚೀನ) ಒಟ್ಟಿಗೇ ಇರುವುದನ್ನು ನಾವು ನೋಡಬಹುದು. ಕೆಲವರು ಇದನ್ನೇ 'ನಾಗರಿಕ ರಾಷ್ಟ್ರೀಯತೆ' ಮತ್ತು 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂದು ಕರೆದಿದ್ದಾರೆ. ಇವೆರಡೂ ಒಟ್ಟಿಗೆ ಇದ್ದರೂ ಕೆಲವೊಮ್ಮೆ ಒಂದು ಇನ್ನೊಂದನ್ನು ಪೋಷಿಸುವುದು ಅಥವಾ ಕಬಳಿಸುವುದು ನಡೆದೇ ಇರುತ್ತದೆ. ಇವೆರಡೂ ರಾಷ್ಟ್ರೀಯತೆಗಳು ಒಂದಕ್ಕೊಂದು ಡಿಕ್ಕಿಹೊಡೆದಿದ್ದು ವಸಾಹತುಶಾಹಿ ವಿರೋಧಿ ಹೋರಾಟದಿಂದ ರೂಪಗೊಂಡ ಮೂರನೇ ಜಗತ್ತಿನ ರಾಷ್ಟ್ರೀಯತೆಯ ಸಂದರ್ಭದಲ್ಲಿ. ಇದು ಪಶ್ಚಿಮದ ರಾಷ್ಟ್ರೀಯತೆಗಳಿಗಿಂತಲೂ ಭಿನ್ನವಾದದ್ದು, ಮತ್ತು ವಿಶಿಷ್ಟವಾದದ್ದು.

(ಮುಂದುವರೆಯುವುದು)

ಲೇಖಕರು : ವಿ.ಎಸ್.ಶ್ರೀಧರ್, ಚಿಂತಕರು ಮತ್ತು ಮಾನವ ಹಕ್ಕು ಹೋರಾಟಗಾರರು.

ರಾಷ್ಟ್ರೀಯತೆ

ಎಂ.ಆರ್.ಅರುಣಕುಮಾರ

ರಾಷ್ಟ್ರೀಯತೆ ಎಂದರೇನು?

ಇದನ್ನು ಆತುರದಿಂದ ಸಮೀಪಿಸುವ ಬದಲು ರಾಷ್ಟ್ರ ಮತ್ತು ಅದರ ಅತಿ ಪ್ರಮುಖ ಸಂಪನ್ಮೂಲವಾದ ಪ್ರಜೆಗಳು, ಮತ್ತು ಇವೆರಡರ ಪರಸ್ಪರ, ಪೂರಕ ಸಂಬಂಧಗಳ ಬಗ್ಗೆ ದೃಷ್ಟಿ ಹಾಯಿಸೋಣ.

ರಾಷ್ಟ್ರ ಮತ್ತು ಸಾಮ್ರಾಜ್ಯ

ಮೂಲದಲ್ಲಿ ರಾಜನೆಂಬ ಶಬ್ದದಿಂದ ಹುಟ್ಟಿದ ರಾಷ್ಟ್ರದ ಕಲ್ಪನೆ ಭೌಗೋಳಿಕವಾಗಿದ್ದುದು ವೇದ ಮತ್ತು ಪುರಾಣಗಳಲ್ಲಿ ಸ್ಪಷ್ಟವಾಗಿದೆ. ಹೆಚ್ಚಿನ ಮಟ್ಟಿಗೆ ಒಂದೇ ಬುಡಕಟ್ಟು ಅಥವಾ ಭಾಷೆಯನ್ನು ಹೊಂದಿದ, ಹಾಗೂ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದ ಆಡಳಿತ ಪ್ರದೇಶಕ್ಕೆ ರಾಷ್ಟ್ರವೆಂದು ಕರೆಯುವುದು ವಾಡಿಕೆಯಾಯಿತು. ಕಾಲಕ್ರಮೇಣ ರಾಷ್ಟ್ರ ಎನ್ನುವ ಶಬ್ದಕ್ಕೆ ದೇಶ ಎನ್ನುವ ಶಬ್ದವು ಸಮಾನಾರ್ಥಕವಾಯಿತು. ಆದರೆ ರಾಜರು ಮಹಾರಾಜರಾಗಿ, ದೊರೆಗಳು ಸಾಮ್ರಾಟರಾಗಿ ಹಲವಾರು ದೇಶ ಅಥವಾ ರಾಷ್ಟ್ರಗಳನ್ನು ಆಳುವ ಮಹತ್ವಾಕಾಂಕ್ಷೆಯನ್ನು ಸಮರ್ಥಿಸಿಕೊಳ್ಳುವುದು ಪ್ರತಿಷ್ಠೆಯ ವಿಷಯವಾಯಿತು. ತದನಂತರ ಈ ರೀತಿ ಹುಟ್ಟಿದ ರಾಷ್ಟ್ರಗಳು ಒಂದೇ ಜಾತಿಯ ಅಥವಾ ಮತದ ರಾಷ್ಟ್ರಗಳಾಗಿ ಉಳಿಯದೆ ಬಹುಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿದ ಅಗಾಧ ಸಾಮ್ರಾಜ್ಯಗಳೂ ಆದವು. ಒಬ್ಬೊಬ್ಬ ಸಾಮ್ರಾಟನ ಸ್ವಯಂ ವೈಭವೀಕರಣಕ್ಕೆ ತಕ್ಕಂತೆ ವಸಾಹತುಶಾಹಿ ಸಾಮ್ರಾಜ್ಯಗಳೂ ಆದವು. ಮಂಗೋಲರು, ರಷ್ಯಾದ ಜಾರ್ ದೊರೆಗಳು, ಯೂರೋಪಿನ ವ್ಯಾಪಾರಿಗಳು ಇವರು ಜಾತಿ ಮತ್ತು ಭಾಷೆಗಳನ್ನು ಮೀರಿದ ರಾಷ್ಟ್ರಗಳ ಕಲ್ಪನೆಯನ್ನು ಹುಟ್ಟುಹಾಕಿದರು. ಇದರಿಂದಾಗಿ ವಸಾಹತು ಪ್ರದೇಶಗಳ ಜನಗಳ ಬಗ್ಗೆ ನಿಷ್ಕಾಳಜಿ, ದುರ್ವರ್ತನೆಗಳು ಸಾಮಾನ್ಯವಾಗಿ ಅವರನ್ನು ತಮ್ಮ ಧರ್ಮಕ್ಕೋ, ವ್ಯಾಪಾರಕ್ಕೋ ಬಳಸಿಕೊಳ್ಳುವ ಶೋಷಣಾ ನೀತಿಯು ಸಹನೀಯವಾಯಿತು. ಪ್ರಜೆಗಳು ಸ್ವರಕ್ಷಣೆ, ಪ್ರತಿಷ್ಠೆಗಾಗಿ ಸಾಮ್ರಾಟರನ್ನು ಓಲೈಸುವ ಊಳಿಗ, ಸಾಮಂತ ಸಂಸ್ಕೃತಿಯೂ ಬೆಳೆಯಿತು.

ರಾಷ್ಟ್ರ ಮತ್ತು ಸಾಮಾಜಿಕ ಪ್ರಜ್ಞೆ

ರಾಜ, ರಾಜಕಾರಣಿಗಳಿಗೆ ಇರುವ ಪ್ರಜ್ಞೆಯು ಸಾಮಾಜಿಕ ಪ್ರಜ್ಞೆಯಾಗಿರುವುದಿಲ್ಲ, ಬದಲಾಗಿ ಸ್ವಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವ ಕನಸುಗಳ ಸಮೂಹವಾಗಿರುತ್ತದೆ. ರಾಷ್ಟ್ರ ಅಥವಾ ದೇಶದಲ್ಲಿ ಪಾರಸ್ಪರಿಕ ಸಂಬಂಧವುಳ್ಳ ಜನರು ಧರ್ಮ ಮತ್ತು ರಾಜ ಶಾಸನಗಳ ಮೂಲಕ ತಮ್ಮ ಜೀವನವನ್ನು ನಡೆಸುತ್ತಿರುತ್ತಾರೆ. ಅನುಮಾನ, ಅಜ್ಞಾನ, ಮನಸ್ತಾಪಗಳನ್ನೂ ಸಹ ಇದೇ ಸಾಧನಗಳ ಮೂಲಕ ಪರಿಹರಿಸಿಕೊಳ್ಳುತ್ತಿರುತ್ತಾರೆ. ಇವರಿಗೆ ಇರುವ ಸಾಮರಸ್ಯ, ಸಹಕಾರ, ಸೌಜನ್ಯಗಳಿಂದ ಕೂಡಿದ ವರ್ತನೆಯನ್ನೇ ಸಾಮಾಜಿಕ ಪ್ರಜ್ಞೆಯಿಂದ ಹುಟ್ಟಿದ ವರ್ತನೆ ಎನ್ನಬಹುದು. ಆದರೆ ಜನಸಾಮಾನ್ಯರು ರಾಜರನ್ನು ಅನುಕರಿಸಿದಾಗ, ಅಥವಾ ಸಾಮಾನ್ಯ ವರ್ತನೆಯಲ್ಲಿ ಶ್ರದ್ಧೆ, ನಿರೀಕ್ಷೆಗಳು ಕಡಿಮೆಯಾದಾಗ, ಅಥವಾ ಸಾಮಾಜಿಕ ಗುಣಗಳಾದ ಸಾಮರಸ್ಯ ಇತ್ಯಾದಿಗಳು

ಕಾಣೆಯಾದಾಗ ಆ ರಾಷ್ಟ್ರದಲ್ಲಿ ಸಾಮಾಜಿಕ ಪ್ರಜ್ಞೆ ನಶಿಸುತ್ತಿದೆ ಎನ್ನಬಹುದು. ಇಂಥ ಶಿಥಿಲವಾದ ಸಮಾಜಗಳಿಗೆ ರಾಷ್ಟ್ರಗಳನ್ನು ಕಾಪಾಡುವ ಶಕ್ತಿ ಇರುವುದಿಲ್ಲ. 'Decline and Fall of the Roman Empire' ಎನ್ನುವ ಪುಸ್ತಕದ ಕರ್ತೃ ಗಿಬ್ಬನ್ ಇದನ್ನೇ ಹೇಳುತ್ತಾನೆ. ಕ್ರೌರ್ಯ, ಕಾಮ ಮತ್ತು ಸುಖಲೋಲುಪತೆಗಳು ಯಾವುದೇ ರಾಷ್ಟ್ರದ ಅವನತಿಗೆ ಬಿತ್ತಿದ ಬೀಜಗಳಾಗುತ್ತವೆ. ನಮ್ಮದೇ ಮಹಾಭಾರತದ ಕಥೆಯೂ ಇದರದೇ ದೃಷ್ಟಾಂತ.

ರಾಷ್ಟ್ರ ಮತ್ತು ವಿಕಾಸ

ರಾಷ್ಟ್ರದ ಸ್ವರೂಪ ರಾಜರುಗಳ ಸೃಷ್ಟಿ ಅಥವಾ ಕಲ್ಪನೆ ಅಲ್ಲ, ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಪ್ರಜ್ಞೆ ಮತ್ತು ಸಂಸ್ಕೃತಿಗಳ ಮೂರ್ತರೂಪ ಎನ್ನುವುದು ಶತಶತಮಾನಗಳ ನಂತರ ಗೋಚರಿಸಿದ ಸತ್ಯ. ರಾಜರ ಆಡಳಿತದಿಂದ ಪ್ರಜಾರಾಜ್ಯಕ್ಕೆ, ವಸಾಹತು ಯಾ ಸಾಮಂತಶಾಹಿಯಿಂದ ಪ್ರಜಾ ಸಾರ್ವಭೌಮತ್ವಕ್ಕೆ, ಪ್ರತ್ಯೇಕ ತತ್ವಗಳಿದ್ದರೂ ವಸುಧೈವ ಕುಟುಂಬಕಮ್ ಎನ್ನುವ ತಾತ್ವಿಕ ಮಟ್ಟಕ್ಕೆ ಸಮಾಜಗಳು ಬೆಳೆದಿರುವ ಹಿನ್ನೆಲೆಯಲ್ಲಿ ವಿಕಾಸ ಎನ್ನುವ ಪದಕ್ಕೆ ಕಾಲ ಕಳೆದಂತೆ ಅರ್ಥವೂ ಬದಲಾಗಿದೆ. ಭೌಗೋಳಿಕ ವಿಕಾಸಕ್ಕಿಂತ ಜೀವನಮಟ್ಟದ ಸುಧಾರಣೆಯೇ ವಿಕಾಸ ಎನ್ನುವ ಅರಿವು ಮೂಡಿದೆ. ಯಾವ ರಾಷ್ಟ್ರದಲ್ಲಿ ನಮ್ಮ ಬುದ್ಧಿಶಕ್ತಿಯ ಸಂವರ್ಧನೆಗೆ ಬೇಕಾದ ವ್ಯಾಯಾಮ ಮತ್ತು ಶಿಸ್ತುಗಳ ಜತೆಗೆ ಎಲ್ಲ ಕಡೆಯಿಂದ ಬರುವ ಜ್ಞಾನವನ್ನೂ ಸ್ವೀಕರಿಸುವ ವಿದ್ಯಾಭ್ಯಾಸ ಕ್ರಮ ಇದೆಯೋ ಆ ರಾಷ್ಟ್ರ ವಿಕಾಸಶೀಲ ರಾಷ್ಟ್ರವಾಗಿದೆ ಎಂದು ಇತ್ತೀಚಿಗೆ ವಿಶ್ಲೇಷಿಸುತ್ತಿದ್ದೇವೆ.

ವ್ಯಕ್ತಿಗತವಾಗಿ, ಪೂರ್ವಾಗ್ರಹವಿಲ್ಲದೆ ವಿಚಾರವಿನಿಮಯದಲ್ಲಿ ತೊಡಗುವುದು, ಒಂದೇ ವಿಷಯಕ್ಕೆ ಹಲವಾರು ಮುಖಗಳಿರಬಹುದು ಎನ್ನುವ ಸ್ವೀಕಾರ ಮನೋಭಾವವನ್ನು ಹೊಂದಿರುವುದು, ಪ್ರಶ್ನೆಗಳನ್ನು ಪ್ರೋತ್ಸಾಹಿಸುವುದು, ನಮಗೆ ಗೊತ್ತಿರುವ ಎಲ್ಲೆಗಳನ್ನು ಮೀರಿಯೂ ಸಂವಾದಕ್ಕೆ ಅವಕಾಶ ಕೊಡುವುದು ಇವೆಲ್ಲಾ ವಿಕಾಸದ ಲಕ್ಷಣಗಳು.

ಯಾವ ರಾಷ್ಟ್ರದಲ್ಲಿ ವ್ಯಕ್ತಿಯನ್ನು ಆತನ ಜಾತೀಯ, ಪ್ರಾಂತೀಯ ಇತ್ಯಾದಿ ಹಿನ್ನೆಲೆಗಳ ಮೇಲೆ ಅಳೆಯದೆ ಮನೋವಿಕಾಸದ ಮೇಲೆ ಅಳೆಯಲಾಗುತ್ತದೆಯೋ ಆ ಇಡೀ ರಾಷ್ಟ್ರವು ವಿಕಸನದ ಅವಕಾಶವನ್ನು ಕಾಪಾಡಿಕೊಂಡಿದೆ ಎನ್ನಬಹುದು.

ರಾಷ್ಟ್ರದಲ್ಲಿ ವ್ಯಕ್ತಿಯನ್ನು ಮೀರಿದ ಅಂದರೆ ವ್ಯಕ್ತಿಯ ಸಾಮರ್ಥ್ಯವನ್ನು ಮೀರಿದ ಬಹಳಷ್ಟು ಕೆಲಸಕಾರ್ಯಗಳನ್ನು ನಿರ್ವಹಿಸಲು ಸಮರ್ಥವಾದ ಆಡಳಿತ ಒಂದು ಬೇಕಾಗುತ್ತದೆ. ಬಹಳ ಹಿಂದುಳಿದ ಬುಡಕಟ್ಟು ಸಂಸ್ಕೃತಿಗಳಲ್ಲಿ ಇಂತಹ ಕೆಲಸಗಳು ಕಡಿಮೆ ಇರುವುದರಿಂದ ಆಡಳಿತ ಸರಳವಾಗಿ ನಡೆದುಹೋಗುತ್ತದೆ. ಆದರೆ ಮುಂದುವರಿದ ಅಥವಾ ಸಂಕೀರ್ಣ ಸಮಾಜಗಳಲ್ಲಿ ವ್ಯಕ್ತಿಯನ್ನು ಮೀರಿದ ಬಹುಸ್ತರದ ನಿಯಂತ್ರಣ ಬೇಕಾಗುತ್ತದೆ. ಸಾಧಾರಣವಾಗಿ ಇದನ್ನು ಇಂಗ್ಲಿಷ್ ನಲ್ಲಿ Estate ಎನ್ನುವ ಪದದಿಂದ ಕರೆಯುತ್ತಾರೆ. ಶಾಸಕಾಂಗ(Legislature), ಕಾರ್ಯನಿರ್ವಾಹಕ((Executive) ಮತ್ತು ನ್ಯಾಯಾಂಗ(Judiciary) ಎನ್ನುವ ಪಾರಂಪರಿಕ ಮೂರು ಸ್ತರಗಳ ಜತೆಗೆ ನಾಲ್ಕನೆಯ ಸ್ತರವಾದ ಪತ್ರಿಕೋದ್ಯಮ(Journalism)ಗಳು ನಮ್ಮ ರಾಷ್ಟ್ರದ ಸಮತೋಲನವನ್ನು ಕಾಪಾಡುತ್ತಾ ರಾಷ್ಟ್ರೀಯ ವಿಕಾಸಕ್ಕೆ ಬೇಕಾದ ಭೂಮಿಕೆಯನ್ನು ಒದಗಿಸುತ್ತವೆ.

ರಾಷ್ಟ್ರೀಯತೆ

ಇಷ್ಟೆಲ್ಲಾ ಬಾಗಿಲುಗಳಲ್ಲಿ ಇಣುಕಿದ ಮೇಲೆ ರಾಷ್ಟ್ರೀಯತೆ ಎನ್ನುವ ಶಬ್ದ ಬಹಳ

ವಿಸ್ತಾರವೂ, ವ್ಯಾಪಕವೂ, ಚೈತನ್ಯಶೀಲವೂ, ದೀರ್ಘಕಾಲಿಕವೂ, ಒಟ್ಟಾರೆ ಸಂಕೀರ್ಣವೂ ಆಗಿದೆ ಎನ್ನಿಸುವುದಿಲ್ಲವೇ?

ಇತ್ತೀಚಿನ ಜಾಗತಿಕ ಪರಿಭಾಷೆಯನ್ನು ಗಮನಿಸಿದರೆ ಈ ಶಬ್ದಕ್ಕೆ ಬೇರೆಯೇ ಅರ್ಥ ಇದೆ. ಅದೇನೆಂದರೆ ಒಬ್ಬ ವ್ಯಕ್ತಿಯು ಯಾವ ರಾಷ್ಟ್ರದ ಪ್ರಜೆ ಎಂದು. ಇಲ್ಲೇ ಗೊಂದಲವಿರುವುದನ್ನು ಗಮನಿಸಬಹುದು. ಅನಿವಾಸಿ ಪ್ರಜೆ, ಇಂತಹ ರಾಷ್ಟ್ರದ ಮೂಲವುಳ್ಳ ಪ್ರಜೆ ಮತ್ತು ಬಹುರಾಷ್ಟ್ರೀಯ ಪ್ರಜೆ ಎಂತೆಲ್ಲಾ ಪಂಗಡಗಳು ಆಗಿವೆ.

ಮೇಲಾಗಿ ಕೆಲವೊಂದು ರಾಷ್ಟ್ರಗಳು ವಿಲೀನವಾದಾಗ ಒಂದಷ್ಟು ಕಾಲ ಒಂದಿಷ್ಟು ಜನಕ್ಕೆ ರಾಷ್ಟ್ರೀಯತೆಯನ್ನು ಮರೆಯದಂತೆ ಮೀಸಲಾತಿಗಳನ್ನು ನಿಜವಾಗಿಯೋ, ಸಾಂಕೇತಿಕವಾಗಿಯೋ ಇಡಬಹುದು – ಉದಾ. ಭಾರತದಲ್ಲಿ ಸಿಕ್ಕಿಂನ ಜನಕ್ಕೆ, ಎರಡೆರಡು ಗುರುತಿನ ಚೀಟಿಗಳು, ಕಾಶ್ಮೀರಿಗಳಿಗೆ ಪರಿಚ್ಛೇದ ೩೭೦ರ ಮೂಲಕ ಕಾಶ್ಮೀರಿಯತ್ ಕಾಪಾಡುವ ಭರವಸೆ, ಟಿಬೆಟಿಯನ್ ನಿರಾಶ್ರಿತರಿಗೆ ಆಶ್ರಯ ಮತ್ತು ಸವಲತ್ತುಗಳು ಇತ್ಯಾದಿ. ಮುಂದುವರಿದ ದೇಶಗಳಲ್ಲಿ ಈ ಗೊಂದಲ ಇನ್ನೂ ಹೆಚ್ಚಾಗಿಯೇ ಇದೆ.

ಬ್ರಿಟನ್ ಅರ್ಥಾತ್ ಗ್ರೇಟ್ ಬ್ರಿಟನ್ – ಉತ್ತರ ಐರ್ಲೆಂಡ್, ಸ್ಕಾಟ್ ಲ್ಯಾಂಡ್, ಇಂಗ್ಲೆಂಡ್ ಮತ್ತು ವೇಲ್ಸ್ ದೇಶಗಳ(ಭೂಭಾಗಗಳು ಸ್ಪಷ್ಟವಾಗಿವೆ) ಒಂದು ಸಂಯುಕ್ತ ರಾಷ್ಟ್ರ. ಇಷ್ಟೇ ಸಾಲದು ಎಂಬಂತೆ ಹಳೆಯ ವಸಾಹತುಗಳಾದ ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಝೀಲ್ಯಾಂಡ್ ಗಳು ಕಾಮನ್ ವೆಲ್ತ್ ಡೊಮಿನಿಯನ್ ಎಂಬುವ ಸಡಿಲವಾದ ಸಂಬಂಧವನ್ನು ಇಟ್ಟುಕೊಂಡಿವೆ. ಸಾಂಕೇತಿಕವಾಗಿ ಈ ರಾಷ್ಟ್ರಗಳು ಇಂಗ್ಲೆಂಡ್ ರಾಣಿಯ ಆಳ್ವಿಕೆಗೆ ಒಳಪಟ್ಟಿವೆ. ಹಳೆಯ ಕಾಮನ್ವೆಲ್ತ್ ರಾಷ್ಟ್ರಗಳ ಪ್ರಜೆಗಳು(ನೈಜೀರಿಯಾ), ಯುದ್ಧಗಳಲ್ಲಿ ಇಂಗ್ಲೆಂಡಿಗೆ ಸಹಾಯ ಮಾಡಿದ ಜಾತಿಗಳು(ಗುರ್ಖಾ), ಹಳೆಯ ಮತ್ತು ಬಿಟ್ಟುಕೊಟ್ಟ ವಸಾಹತುಗಳ ಪ್ರಜೆಗಳು(ಹಾಂಗ್ ಕಾಂಗ್) ಇವರೆಲ್ಲರಿಗೂ ಇಂಗ್ಲೆಂಡ್ ರಾಷ್ಟ್ರೀಯತೆಯ ಪಾಠದ ಪುನರಾವರ್ತನೆ ಆಗುತ್ತಿದೆ. ಸಾಲದೆಂಬಂತೆ ಪೂರ್ವ ಯೂರೋಪಿನ ನಿರಾಶ್ರಿತರು, ಏಷಿಯಾ ಮಗ್ಗುಲಿನ ನಿರಾಶ್ರಿತರು, ರಾಜಕೀಯ ಅತಂತ್ರ ದೇಶಗಳ ವಲಸೆಗಾರರು, ಹೀಗೆ ಹೊರಗಿನವರು ಇಂಗ್ಲೆಂಡಿಗೆ ಲಗ್ಗೆ ಇಡುತ್ತಿದ್ದಾರೆ ಎನ್ನುವ ಕೂಗನ್ನು ಅಲ್ಲಿನ ಒಂದು ರಾಜಕೀಯ ಪಕ್ಷ ಎತ್ತಿತ್ತು. ವಲಸೆಗಾರರ ಸಂಖ್ಯೆ ಹೆಚ್ಚಾಗಿ ಅವರ ಮತಗಳು ಚುನಾವಣೆಯಲ್ಲಿ ಬೇಕಾದಾಗ ರಾಷ್ಟ್ರೀಯತೆಯ ಕೂಗಿಗಿಂತ ರಾಜಕೀಯ ಕೂಗು ಜೋರಾಯಿತು.

ಇನ್ನೂ ಮುಂದುವರಿದು ಯೂರೋಪಿನ ಬಹು ರಾಷ್ಟ್ರಗಳು ಯೂರೋಪಿಯನ್ ಸಂಸತ್ತು ಒಂದನ್ನು ರಚಿಸಿಕೊಂಡು ಯೂರೋಪಿಯನ್ ಯೂನಿಯನ್ ಎನ್ನುವ ವ್ಯವಸ್ಥೆಯ ಸದಸ್ಯರಾಗಿವೆ. ಆದರೆ ಬ್ರಿಟನ್ ಇದನ್ನು ಬಿಡಬೇಕೆಂದಿದೆ. ಈ ಹೊಚ್ಚಹೊಸ ಗೊಂದಲವನ್ನು ಬ್ರಿಟನ್+ ಎಕ್ಸಿಟ್=ಬ್ರೆಕ್ಸಿಟ್ ಎಂದು ಕರೆಯಲಾಗುತ್ತಿದೆ. ಬ್ರಿಟನ್ನಿನ ಅವಿಭಾಜ್ಯ(?) ಅಂಗವಾದ ಸ್ಕಾಟ್ ಲ್ಯಾಂಡ್, ಗ್ರೇಟ್ ಬ್ರಿಟನ್ ಒಕ್ಕೂಟವನ್ನು ಬಿಡಬೇಕೆಂದಿದೆ. ಸಾಲದೆಂಬಂತೆ ಬ್ರಿಟನ್ನಿನ ರಾಜವಂಶದಲ್ಲಿ ಜರ್ಮನ್ ಮತ್ತು ರಷ್ಯನ್ ರಕ್ತ ಸಾಕಷ್ಟು ಹರಿಯುತ್ತಿದೆ. ಆದರೆ ಅಪ್ಪಟ ಇಂಗ್ಲಿಷ್ ಮೂಲದವರೇ ಬ್ರಿಟನ್ನಿನ ಧರ್ಮಭ್ರಷ್ಟತೆಗೆ ರೋಸಿಹೋಗಿ ೧೬೧೦ ನೇ ಇಸವಿಯಲ್ಲಿ ದೇಶತ್ಯಾಗಮಾಡಿ ಸಾಗರೋಲ್ಲಂಘನ ಮಾಡಿ ಅಮೆರಿಕಾಗೆ ವಲಸೆ ಹೋದರೂ, ಅವರು ಇಂಗ್ಲಿಷ್ ರಾಷ್ಟ್ರೀಯತೆಯನ್ನು ೧೭೭೬ ರಲ್ಲೇ ಧಿಕ್ಕರಿಸಿದರು. ಅಮೆರಿಕಾದ ಅತಿ ಪ್ರಭಾವಿ ಬುಡಕಟ್ಟಾದ ಇಂಗ್ಲಿಷ್ ಮೂಲದವರನ್ನು ವಾಷಿಂಗ್ಟನ್ ಸುತ್ತಮುತ್ತ WASP(White Anglo

Saxon Protestant) ಎಂದು ಕರೆಯುವುದುಂಟು.

ಅಬ್ಬಬ್ಬಾ, ದೃಢವಾದ, ಅತಿ ಪ್ರಾಚೀನ ಪಾರ್ಲಿಮೆಂಟ್ ಅನ್ನು ಹೊಂದಿರುವ ಚಿಕ್ಕ ಬ್ರಿಟನ್ನಿನಲ್ಲೇ ರಾಷ್ಟ್ರೀಯತೆಯನ್ನು ಅರ್ಥೈಸುವುದು ಇಷ್ಟು ತೊಂದರೆ ಇದ್ದರೆ ಇನ್ನೂ ದೊಡ್ಡ ದೇಶಗಳಲ್ಲಿ ಎಷ್ಟಿರಬೇಡ?

ಪ್ರಜಾಸಮೂಹವನ್ನು ಯಾವುದಾದರೂ ಮೌಲ್ಯ, ಧ್ಯೇಯ, ಹಕ್ಕು ಮತ್ತು ಬಾಧ್ಯತೆಗಳ ಚೌಕಟ್ಟಿನಲ್ಲಿ ಹಿಡಿದಿಡುವುದೇ ರಾಷ್ಟ್ರೀಯತೆಯ ಪ್ರಯೋಗ. ಉದಾಹರಣೆಗೆ ತಾಯ್ನಾಡು ಅಥವಾ ತಂದೆನಾಡು ಎನ್ನುವ ಪ್ರೀತಿಯ ಮೌಲ್ಯ, ಯಾವ ವೈರಿಯೂ ನಮ್ಮ ಮೇಲೆ ದಾಳಿ ಮಾಡಲಾರ ಎನ್ನುವ ಅಮೆರಿಕನ್ನರ ಭೌಗೋಳಿಕ ಮೌಲ್ಯ, ಫ್ರೆಂಚರ, ಮತ್ತು ಸ್ವಲ್ಪಮಟ್ಟಿಗೆ ಅಮೆರಿಕನ್ನರ Liberty, Equality and Fraternity ಮೌಲ್ಯಗಳು, ರಷ್ಯಾ ಮತ್ತು ಚೈನಾದ From each according to his ability; to each according to his need' ಎನ್ನುವ ಸಮತಾವಾದ ಇತ್ಯಾದಿ.

ಅಂತೂ ಇಂತೂ ರಾಷ್ಟ್ರೀಯತೆಯನ್ನು ಹಲವಾರು ಮೂಲವಸ್ತುಗಳಿಂದ ಸಂಸ್ಕರಿಸುವುದೂ ನಡೆಯುತ್ತಿದೆ, ಹಲವಾರು ಕೋನಗಳಿಂದ ವ್ಯಾಖ್ಯಾನಿಸುವುದೂ ನಡೆಯುತ್ತಿದೆ. ಭಾರತದಲ್ಲಂತೂ ಹಲವಾರು ಭಾಷೆಗಳು, ಸಂಸ್ಕೃತಿಗಳು ಹಲವಾರು ರಾಷ್ಟ್ರಗಳು, ದೇಶಗಳನ್ನೇ ಸೃಷ್ಟಿಸಿದ್ದವು. ಆದರೂ ವಿಶಾಲ ಭಾರತದ ಬಹುಭಾಗದಲ್ಲಿ ಇದ್ದ ಸಂವೇದನಾಶೀಲತೆ ಭಾರತದ್ದೇ ಆಗಿತ್ತು. ಎರಡೋ, ಮೂರೋ ಪ್ರಮುಖ ಧರ್ಮಗಳನ್ನು ಹೊಂದಿದ, ಆದರೂ ಬಹುಮಟ್ಟಿಗೆ ಸಾಮರಸ್ಯದಿಂದ ಇದ್ದ ಬಹುರಾಷ್ಟ್ರೀಯ ಭಾರತವನ್ನು ಬ್ರಿಟೀಷರು ಒಂದೇ ದೇಶ ಎಂದು ಕರೆದು ಭಾರತ ಏಕೀಕರಣವನ್ನು ತಾವೇ ಮಾಡಿದ್ದು ಎಂದು ಇಂದಿಗೂ ಹೇಳಿಕೊಳ್ಳುತ್ತಾರೆ. ಅದನ್ನು ಪುನರುಚ್ಚರಿಸುವ ಭಾರತೀಯರೂ ನಮ್ಮಲ್ಲಿ ಇದ್ದಾರೆ. ಇಂತಹವರಿಗೆ ರಾಷ್ಟ್ರೀಯತೆಯ ಸ್ವರೂಪ ಭೌಗೋಳಿಕವಾಗಿ, ಆಡಳಿತಾತ್ಮಕವಾಗಿ ಮಾತ್ರ ಕಾಣುತ್ತದೆ. ಆದರೆ ರಾಷ್ಟ್ರೀಯತೆಯ ವ್ಯಾಖ್ಯಾನ ಇಷ್ಟರಲ್ಲೇ ಮುಗಿಯಿತೇ ?

ತದನಂತರದ ಭಾಷಾವಾರು ಪ್ರಾಂತಗಳ ಕತೆಯೂ ರಾಷ್ಟ್ರೀಯತೆಯ ಖಂಡವ್ಯಾಖ್ಯಾನವಿಷ್ಟೇ. ನೆಹ್ರುರವರ "Unity in Diversity" ಎನ್ನುವ ಅರ್ಥನಿರೂಪಣೆಯನ್ನು ನಾವುಗಳು ಸಾಕಾರಗೊಳಿಸಿಲ್ಲ.

ರಾಷ್ಟ್ರ ಮತ್ತು ಜಾಗತಿಕ ಪ್ರಜ್ಞೆ

ಸಾರೇ ಜಹಾಂಸೆ ಅಚ್ಛಾ, ಹಿಂದುಸ್ತಾನ್ ಹಮಾರಾ ಎಂದು ನಮ್ಮ ಮಿಲಿಟರಿ ಬ್ಯಾಂಡ್ಗಳು ನುಡಿಸಿದಾಗ ಭಾರತೀಯರ ಎದೆ ಉಬ್ಬುತ್ತದೆ. ಮಝಹಬ್ ನಹೀಂ ಸಿಖಾತಾ, ಆಪಸ್ ಮೆ ಬೇರ್ ರಖನಾ; ಹಿಂದೀ ಹೈ ಹಮ್, ವತನ್ ಹೈ ಹಿಂದುಸ್ತಾನ್ ಹಮಾರಾ ಎನ್ನುವ ಸಾಲಿನಲ್ಲಿ ರಾಷ್ಟ್ರೀಯತೆಯ ಮೂಲಪಾಠ-ಸಹಿಷ್ಣುತೆ ಕಾಣುತ್ತದೆ. ಆದರೆ ಇದೇ ಕವಿ ಒಂದೆರಡು ದಶಕಗಳ ನಂತರ ಎರಡನೆ ಸಾಲಿನಲ್ಲಿ ಮುಸ್ಲಿಂ ಹೈ ಹಮ್, ವತನ್ ಹೈ ಸಾರಾ ಜಹಾಂ ಹಮಾರಾ ಎಂದು ರಾಷ್ಟ್ರೀಯತೆಯ ಪರ್ಯಾಯವಾಗಿ ಧರ್ಮ ಮತ್ತು ಜಾಗತಿಕತೆ ಸಾರಿದರು. ಇವರ ದೃಷ್ಟಿವಿಶಾಲ್ಯದ ಕೂಸಾಗಿ ಹುಟ್ಟಿದ್ದು PunjabAfghanistanKashmir ಪಾಕಿಸ್ತಾನ. ಅಖಂಡ ಭಾರತದ ಕಲ್ಪನೆಯೂ ಅಷ್ಟೇ.

ಭಾರತೀಯರ ನೆಚ್ಚಿನ ವಿಷಯಗಳಾದ ಎಲ್ಲ ಭಾಷೆಗಳಿಗೂ ಮಾತೃಭಾಷೆ ಸಂಸ್ಕೃತ, ಗಣಿತದಲ್ಲಿ ಶೂನ್ಯದ ಆವಿಷ್ಕಾರ ಭಾರತದ್ದೇ, ಭಾರತವೇ ವಿಶ್ವಗುರು ಇತ್ಯಾದಿಗಳಲ್ಲಿ ಸ್ವಲ್ಪ

ಸತ್ಯವಿದ್ದರೂ ಭಾರತೀಯನೊಬ್ಬನು ಇಷ್ಟರಿಂದಲೇ ವಿಶ್ವಮಾನವನಾಗಲು ಸಾಧ್ಯವಿಲ್ಲ. ಇತರ ನೆಲ, ನಾಡು, ಜನ, ರೀತಿ, ರಿವಾಜುಗಳಲ್ಲಿ ಕುತೂಹಲವಿಲ್ಲದೆ ಅಂತಾರಾಷ್ಟ್ರೀಯ ವಿದ್ಯಮಾನಗಳಲ್ಲಿ ಭಾರತದ ಸ್ಥಾನ ಏನೆಂಬುದನ್ನು ತಿಳಿದುಕೊಳ್ಳದೆ ಜಾಗತಿಕ ಪ್ರಜ್ಞೆ ಸಾಧ್ಯವಿಲ್ಲ.

ಕಳೆದೆರಡು ದಶಕಗಳಿಂದ ಮಾನವ ಸಂಪನ್ಮೂಲ ಮತ್ತು ಮಾರುಕಟ್ಟೆಗಳ ವಿಷಯದಲ್ಲಿ ಭಾರತದ ಹೆಚ್ಚಿದ ಸ್ಥಾನಮಾನಗಳ ಹಿಂದೆ ಇರುವ ಕೆಲವು ಕಾರಣಗಳನ್ನೂ ತಿಳಿದುಕೊಳ್ಳಬೇಕು. ಆದರೆ ಬಡತನ, ರೋಗ, ಆರ್ಥಿಕ ಅಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಸ್ವಚ್ಛತೆ, ವ್ಯವಹಾರದಲ್ಲಿ ಪಾರದರ್ಶಕತೆ ಇತ್ಯಾದಿಗಳಲ್ಲಿ ನಾವು ಇನ್ನೂ ಬಹಳ ಹಿಂದುಳಿದಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳದ ವ್ಯಕ್ತಿಗೆ ಜಾಗತಿಕ ಪ್ರಜ್ಞೆ ಮೂಡುವುದಿಲ್ಲ.

ಸಂಕೇತಗಳು

ಭಾರತದ ಭೂಪಟವನ್ನು ಪ್ರಕಟಿಸಬೇಕಾದರೆ ಕಾಶ್ಮೀರ ಸೀಮೆಯಲ್ಲಿ ಅಂತಾರಾಷ್ಟ್ರೀಯ ನಿಯಂತ್ರಣಾ ರೇಖೆಯನ್ನು ಸರಿಯಾಗಿ ತೋರಿಸಬೇಕು. ಇಲ್ಲವಾದರೆ ಇದು ಸಾಂಕೇತಿಕವಾಗಿ ರಾಷ್ಟ್ರಕ್ಕೆ ಮಾಡಿದ ಅವಮಾನವಾಗುತ್ತದೆ. ಹೀಗೆ ಭೌಗೋಳಿಕ, ಚಾರಿತ್ರಿಕ, ಧಾರ್ಮಿಕ, ವ್ಯಾವಹಾರಿಕ ಸಂಕೇತಗಳು ಇತರ ರಾಷ್ಟ್ರಗಳಿಗಿಂತ ಭಾರತಕ್ಕೆ ಬಹಳ ಜಾಸ್ತಿ. ನಮ್ಮಲ್ಲಿ ಹುಟ್ಟಿದ, ನಮ್ಮಲ್ಲಿ ಹೊರಗಿನಿಂದ ಬಂದು ನೆಲೆಸಿದ ಧರ್ಮಗಳು, ಎಲ್ಲವೂ ಲಾಂಛನ, ದ್ಯೋತಕ, ಧ್ಯೇಯವಾಕ್ಯ, ಕ್ಷೇತ್ರ ಇತ್ಯಾದಿ ಸಂಕೇತಗಳನ್ನು ಒಪ್ಪಿಕೊಂಡೇ ಇದ್ದಾವೆ. ರಾಷ್ಟ್ರೀಯತೆಯೆಂದರೇ ಈ ಸಂಕೇತಗಳ ಅರಿವು ಎಂದು ಹೆಮ್ಮೆಯಿಂದ ಹೇಳುವ ಕಾಲವೊಂದಿತ್ತು.

ಇತ್ತೀಚೆಗೆ ಒಂದುಕಡೆ ಐದಾರು ಧ್ಯೇಯವಾಕ್ಯಗಳನ್ನೂ ಹೇಳಲಾರದ ಅಥವಾ ಲಾಂಛನಗಳ ಅರ್ಥ ತಿಳಿಯದವರ ಸಂಖ್ಯೆ ಹೆಚ್ಚಾಗುತ್ತಿದೆ. ಬಹುಶಃ ಸಾಂಕೇತಿಕತೆಗಿಂತ ಸಾಧನೆ ದೊಡ್ಡದು ಎನ್ನುವ ಹೊಸ ಪ್ರಜ್ಞೆ ಮೂಡುತ್ತಿರಬಹುದು. ತೀರ್ಥಕ್ಷೇತ್ರಗಳಿಗಿಂತ ಆರ್ಥಿಕ ಕ್ಷೇತ್ರಗಳಿಗೆ ಗೌರವ ಹೆಚ್ಚಾಗಿರಲು ಇದೇ ಕಾರಣವಿರಬಹುದು.

ವಿದ್ಯಾಕ್ಷೇತ್ರದಲ್ಲಿ ನಮ್ಮ ರಾಷ್ಟ್ರದ ನಾಡು, ನುಡಿಗಳ ಬಗ್ಗೆ ಸಾಕಷ್ಟು ವಿಷಯವಿದ್ದರೂ ಅಭಿಮಾನ ಬೆಳೆಸುವ, ಸಂತೃಪ್ತಿಯನ್ನು ಹೊಂದುವ ಮನೋಭಾವವನ್ನು ಬೆಳೆಸುವಲ್ಲಿ ನಾವು ಹಿಂದುಳಿಯುತ್ತಿದ್ದೇವೆ. ಸಂಗೀತವೆಂದರೆ ಅಬ್ಬರ, ವೇಷವೆಂದರೆ ಪಾಶ್ಚಿಮಾತ್ಯ ಹರಕು, ಭಾಷೆಯೆಂದರೆ ಪರದೇಶದ್ದು ಇತ್ಯಾದಿಗಳ ಚಪಲ, ನಮ್ಮ ಸಂಕೇತಗಳನ್ನು ಗೌಣ ಮಾಡುತ್ತಿದೆ.

ಭಾರತ

ನಮ್ಮ ಬುದ್ಧಿ, ಕ್ರಿಯಾಶೀಲತೆ, ಶ್ರಮಗಳ ಹೊರತು ಭಾರತ ನಮಗಾಗಿ, ನಮ್ಮ ಮುಂದಿನ ಪೀಳಿಗೆಗಳಿಗಾಗಿ ಇದೇ ರೂಪದಲ್ಲಿ ಉಳಿಯಲಾರದು. ಋಷಿಮುನಿಗಳ, ಚಕ್ರವರ್ತಿಗಳ, ಆಳರಸರ, ಸ್ವಾತಂತ್ರ್ಯ ಹೋರಾಟಗಾರರ ರಾಷ್ಟ್ರ ನಮ್ಮ ಮಕ್ಕಳಿಗಾಗಿ ಉಳಿಯಬೇಕೆಂದರೆ ನಮ್ಮ ಸಂಕಲ್ಪ ದೃಢವಾಗಿರಬೇಕು, ಅದನ್ನು ಬರಿಯ ಪುನರುಚ್ಚಾರದ ಮಟ್ಟದಲ್ಲಿ ಇಟ್ಟುಕೊಳ್ಳದೆ ನಾವು ಕಾಯಾ ವಾಚಾ ಮನಸಾ ಆಚರಿಸಬೇಕು. ಇದೇ ನಮ್ಮ ಮಂತ್ರ.

ಲೇಖಕರು : ಶ್ರೀ. ಎಂ.ಆರ್ ಅರುಣಕುಮಾರ, ನಿವೃತ್ತ ಬ್ಯಾಂಕ್ ಅಧಿಕಾರಿ ಮತ್ತು ಚಿಂತಕರು, ಬೆಂಗಳೂರು.

ರಾಷ್ಟ್ರೀಯತೆ ಮತ್ತು ಕನ್ನಡಿಗ

ಆನಂದ್

ಇಂದು ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚು ಚಾಲ್ತಿಯಲ್ಲಿರುವ ಪದ ರಾಷ್ಟ್ರೀಯತೆ. ರಾಷ್ಟ್ರೀಯತೆಯನ್ನು ಇಂದು ದೇಶಪ್ರೇಮದ ಪ್ರತೀಕವಾಗಿ ಬಳಸುತ್ತಿದ್ದೇವೆ. ಇಂದು ಭಾರತೀಯ ಜನತಾಪಕ್ಷ ತನ್ನದು ರಾಷ್ಟ್ರೀಯವಾದಿ ಸಿದ್ಧಾಂತ ಎಂದು ಕರೆದುಕೊಳ್ಳುತ್ತಾ ಇದೆ. ಈ ಹಿಂದಿನ ಕಾಂಗ್ರೆಸ್ ಪಕ್ಷವೂ ರಾಷ್ಟ್ರೀಯ ಪಕ್ಷವೇ ಆಗಿದ್ದು ರಾಷ್ಟ್ರೀಯತೆಯನ್ನು ಪ್ರತಿಪಾದಿಸುವಲ್ಲಿ ತನ್ನದೇ ಆದ ನಿಲುವು ಮತ್ತು ಕೊಡುಗೆ ಹೊಂದಿದೆ. ರಾಷ್ಟ್ರೀಯತೆಯ ವಿಷಯದಲ್ಲಿ ಎರಡರ ನಡುವೆ ಅಂಥಾ ವ್ಯತ್ಯಾಸವೇನೂ ಇದ್ದಂತಿಲ್ಲ. ಇಷ್ಟಕ್ಕೂ ಭಾರತದಲ್ಲಿ ರಾಷ್ಟ್ರೀಯತೆಯ ವ್ಯಾಖ್ಯಾನ ಹುಟ್ಟಿದ್ದು ಹೇಗೆ ಎನ್ನುವುದು ಕುತೂಹಲಕಾರಿ ಸಂಗತಿ.

ರಾಷ್ಟ್ರೀಯತೆ ಎನ್ನುವುದು ಯೂರೋಪು ಮತ್ತಿತರ ಪಾಶ್ಚಿಮಾತ್ಯ ನಾಡುಗಳಲ್ಲಿ ಜನ್ಮತಳೆದ ಸಿದ್ಧಾಂತ. ನೆಪೋಲಿಯನ್ ನಡೆಸಿದ ದಂಡಯಾತ್ರೆಗಳು ನಾಡಿನ ಜನರು ಒಗ್ಗೂಡುವ, ಒಗ್ಗೂಡಿ ಹೋರಾಡುವ ರಾಷ್ಟ್ರೀಯತೆಯ ಪರಿಕಲ್ಪನೆಗೆ ನಾಂದಿ ಹಾಡಿದವು ಎನ್ನಬಹುದು. ಪಶ್ಚಿಮದಲ್ಲಿ ಸ್ಪಷ್ಟವಾಗಿ ರ ಫ್ರೆಂಚ್ ಕ್ರಾಂತಿಯ ನಂತರದ ಸರ್ಕಾರದ ನಿಲುವುಗಳೊಂದಿಗೆ ರಾಷ್ಟ್ರೀಯತೆಯ ಸಿದ್ಧಾಂತ ಸ್ಪಷ್ಟರೂಪ ಪಡೆದುಕೊಂಡವು. ನೇ ಶತಮಾನದ ಕಾಲಘಟ್ಟದಲ್ಲಿ ಈ ರಾಷ್ಟ್ರೀಯತೆಯೆನ್ನುವುದು ಪಶ್ಚಿಮದಲ್ಲಿ ಅನೇಕ ದೇಶಗಳ ಸ್ವರೂಪ, ಗಡಿಗಳನ್ನು ಗುರುತು ಮಾಡಿತು. ನಮ್ಮ ಭಾರತದ ಸ್ಥಿತಿ ಆಗ ಬ್ರಿಟೀಷರ ಗುಲಾಮಗಿರಿಯಿಂದ ಬಿಡಿಸಿಕೊಳ್ಳಲು ಚಡಪಡಿಸುತ್ತಿದ್ದ, ಅದಕ್ಕಾಗಿ ಬೇರೆ ಬೇರೆ ಪ್ರಾಂತ್ಯಗಳ ಜನರು ಒಗ್ಗೂಡಲು ಹೆಣಗುತ್ತಿದ್ದ ಕಾಲವಾಗಿತ್ತು. ಇಂಥದ್ದೇ ಹೊತ್ತಿನಲ್ಲಿ ಭಾರತದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ ಟಿಸಿಲೊಡೆಯಲು ಶುರುವಾಯಿತು.

ರಾಷ್ಟ್ರೀಯತೆ ಎನ್ನುವುದರ ಮೂಲದಲ್ಲಿ ರಾಷ್ಟ್ರವಿದೆ. ಪಶ್ಚ್ಯಾತ್ಯ ಜಗತ್ತಿನಲ್ಲಿ ರಾಷ್ಟ್ರ ಎನ್ನುವುದಕ್ಕೆ ಇರುವ ಪರಿಕಲ್ಪನೆ ನಮ್ಮಲ್ಲಿ ವಿಶಾಲ ವೈವಿಧ್ಯ ಭಾರತದಲ್ಲಿನ್ನೂ ಇರದಿದ್ದ ಕಾಲದಲ್ಲೇ ಇದ್ದದ್ದು. ರಾಷ್ಟ್ರ ಅಂದರೆ ನೇಷನ್ ಎನ್ನುವುದರ ಅರ್ಥ ಒಂದು ಭಾಷೆಯನ್ನಾಡುವ, ಒಂದು ಸಂಸ್ಕೃತಿಯ ಜನಗಳು/ ನಾಡು ಎನ್ನುವುದಾಗಿದೆ. ಇದರ ಮೇಲೇ ಹುಟ್ಟಿದ ರಾಷ್ಟ್ರೀಯತೆಯ ಸಿದ್ಧಾಂತವು ನಾನು ಎನ್ನುವ ಗುರುತನ್ನು ಇಟ್ಟುಕೊಂಡು ನನ್ನವರು ಯಾರು, ನನ್ನವರಲ್ಲದವರು ಯಾರು ಎನ್ನುವುದನ್ನು ವ್ಯಾಖ್ಯಾನಿಸುವಲ್ಲಿ ನಿಂತಿದೆ. ಹೀಗೆ ಗುರುತಿಸಿ ಕಟ್ಟಿಕೊಂಡ ರಾಷ್ಟ್ರೀಯತೆಯ ಮೂಲಕ ನಾಡಿನ ಜನರನ್ನು ಭಾವನಾತ್ಮಕವಾಗಿ ಜನರನ್ನು ಒಗ್ಗೂಡಿಸಲು, ಆ ಒಗ್ಗಟ್ಟಿನ ಬಲದ ಮೂಲಕ ಸಾರ್ವಭೌಮತ್ವವನ್ನು ಗಳಿಸಿಕೊಳ್ಳಲು ಮತ್ತು ಉಳಿಸಿಕೊಳ್ಳಲು ಬಳಕೆಯಾಗುವುದನ್ನು ರಾಷ್ಟ್ರೀಯತೆಯ ಪರಮೋದ್ದೇಶವಾಗಿ ಗುರುತಿಸಲಾಗಿದೆ.

ಭಾರತವು ಸ್ವಾತಂತ್ರ್ಯಕ್ಕಾಗಿ ತಹತಹಿಸುತ್ತಿದ್ದ ಆ ಕಾಲಘಟ್ಟದಲ್ಲಿ ಭಾರತದ ಎಲ್ಲಾ ಜನರ ಒಗ್ಗಟ್ಟಿನ ಅಗತ್ಯ ಈ ಬಿಡುಗಡೆಯ ಹೋರಾಟದ ಅಗತ್ಯವೆನ್ನುವುದನ್ನು ಮನಗಂಡಿದ್ದರು ಎನ್ನುವುದು ಸತ್ಯ. ಆದರೆ ಅದು ಅಷ್ಟಕ್ಕೇ ಸೀಮಿತವಾಗದೆ ನವಭಾರತ ನಿರ್ಮಾಣದ ಸಾಧನವಾಗಬೇಕು ಎಂದು ಹಂಬಲಿಸಿದ್ದೂ ಅಷ್ಟೇ ಸತ್ಯ. ಭಾರತದ ಸ್ವರೂಪ ಯೂರೋಪಿನ, ಪಶ್ಚಿಮ ರಾಷ್ಟ್ರಗಳ ಸ್ವರೂಪಕ್ಕಿಂತ ಭಿನ್ನ. ಭಾರತದಲ್ಲಿ ಬದುಕಿನ ಪರಮೋದ್ದೇಶವೇ ಅಧ್ಯಾತ್ಮಕ ನೆಲೆಯದ್ದಾಗಿದ್ದು ಭಗವಂತ ಮತ್ತು ಮನುಷ್ಯ ಎನ್ನುವುದರ ನಡುವೆ ಮತ್ತೊಂದು ಹಂತದ ಒಗ್ಗೂಡುವಿಕೆಯೇ

ಇಲ್ಲದ ಸ್ವರೂಪ ನಮ್ಮ ನಾಡಿನದ್ದು. ಭಾರತವು ಭಾಷೆಯ ನೆಲೆಯಲ್ಲಿ, ಸಂಸ್ಕೃತಿಯ ನೆಲೆಯಲ್ಲಿ, ಧರ್ಮದ ನೆಲೆಯಲ್ಲಿ, ಆಚರಣೆ ನಂಬಿಕೆಗಳ ನೆಲೆಯಲ್ಲಿ ಅತ್ಯಂತ ವೈವಿಧ್ಯತೆಯಿಂದ ಕೂಡಿದೆ. ಹಾಗಾಗಿ ಭಾರತಕ್ಕೆ ಪಶ್ಚಿಮದ ರಾಷ್ಟ್ರೀಯತೆಯ ಸಿದ್ಧಾಂತವನ್ನು ಹೊಂದಿಸುವುದು ಆಗದ ಮಾತು. ಇದನ್ನು ಭಾರತ ಕಂಡ ಇಬ್ಬರು ಮಹಾನಾಯಕರುಗಳ ಚಿಂತನೆಯಲ್ಲಿ ಕಾಣಬಹುದು. ಭಾರತ ಮತ್ತು ಬಾಂಗ್ಲಾದೇಶಗಳ ರಾಷ್ಟ್ರಗೀತೆಯನ್ನು ರಚಿಸಿದ ರಬೀಂದ್ರನಾಥ್ ಠಾಗೂರ್ ಮತ್ತು ಭಾರತದ ರಾಷ್ಟ್ರಪಿತನೆಂದು ಹೆಸರಾದ ಮಹಾತ್ಮಗಾಂಧಿಯವರ ನಿಲುವುಗಳು ಕುತೂಹಲಕರವಾಗಿದೆ.

ಆರಂಭಿಕ ದಿನಗಳಲ್ಲಿ ಠಾಗೂರರು ಭಾರತದ ವೈವಿಧ್ಯತೆಗಳು, ನಮ್ಮಲ್ಲಿನ ಭಕ್ತ-ಭಗವಂತ ನಡುವಿನ ಸಂಬಂಧಗಳ ಕಲ್ಪನೆಯನ್ನು ಪರಿಗಣಿಸುತ್ತ, ಯೂರೋಪಿನ ರಾಷ್ಟ್ರಕೇಂದ್ರಿತ ಸಿದ್ಧಾಂತಕ್ಕಿಂತ ಬೇರೆಯಾದ ಸಮಾಜ ಕೇಂದ್ರಿತ ಸಿದ್ಧಾಂತವನ್ನು ಮುಂದಿಟ್ಟರು. ಆದರೆ ದೇಶದಲ್ಲಿನ ಮತಸಂಘರ್ಷದ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಸಿದ್ಧಾಂತದಿಂದ ಹಿಂದೆ ಸರಿಯುತ್ತಾ ತಾವು ತಪ್ಪುಹೆಜ್ಜೆ ಇಟ್ಟಿದ್ದೆ ಎಂದೂ ಹೇಳಿದರು. ಭಾರತವೆನ್ನುವುದು ಎಂದಿಗೂ ರಾಷ್ಟ್ರೀಯತೆಯನ್ನು ಹೊಂದಿರಲಿಲ್ಲ. ಇಲ್ಲಿರುವ ದೇವರು ಮತ್ತು ಮಾನವೀಯತೆಯ ಪರಮ ಮೌಲ್ಯಗಳಿಗೆ ಬದಲಿಯಾಗಿ ರಾಷ್ಟ್ರೀಯತೆಯನ್ನು ತಂದಿಡಲಾಗದು ಎಂದರು. ಅವರ ನಂತರದ ಬರಹಗಳೆಲ್ಲವೂ ಇದನ್ನೇ ಪ್ರತಿಪಾದಿಸಿದವು. ಇನ್ನೊಂದೆಡೆ ಮಹಾತ್ಮಗಾಂಧಿಯವರ ರಾಷ್ಟ್ರೀಯತೆಯ ನಿಲುವು ನೈತಿಕ ಮೌಲ್ಯಗಳನ್ನು ಆಧರಿಸಿದ್ದು ಸಂಕೀರ್ಣವಾಗಿತ್ತು. ಗಾಂಧೀಜಿ ಪ್ರತಿಪಾದಿಸಿದ ಸ್ವರಾಜ್ಯದ ಪರಿಕಲ್ಪನೆಯ ರಾಷ್ಟ್ರೀಯತೆಯು ಸಂಯಮ ಮತ್ತು ತನ್ನೇಳಿಗೆಗಳನ್ನು ಒಳಗೊಂಡ ಸೌಹಾರ್ದಯುತ ಭಾರತದ ನಿರ್ಮಾಣದ ಗುರಿ ಹೊಂದಿತ್ತು. ಇದನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ತುಸು ಅಳವಡಿಸಿಕೊಂಡೇ ಬಂದಿತು. ಇದೀಗ ಭಾರತೀಯ ಜನತಾ ಪಕ್ಷವು ರಾಷ್ಟ್ರೀಯ ಸ್ವಯಂಸೇವಕ ಸಂಘವು ಹೆಡ್ಗೇವಾರ್ ಅವರ ಕಾಲದಿಂದಲೂ ಪ್ರತಿಪಾದಿಸಿದ ಹಿಂದೂ ರಾಷ್ಟ್ರೀಯವಾದವನ್ನು ಇದು ಮುಂದಿಡುತ್ತಿದೆ.

ಭಾರತದ ವೈವಿಧ್ಯತೆಯ ಸಂಕೀರ್ಣತೆಯನ್ನು ಅರಿತ ರವೀಂದ್ರರು ರಾಷ್ಟ್ರೀಯತೆಯ ಪರಿಕಲ್ಪನೆಯನ್ನೇ ಕೈಬಿಟ್ಟರೆ, ಸ್ವನಿಯಂತ್ರಣ, ಸಂಯಮ, ಸಹಬಾಳ್ವೆಯ ಸ್ವರಾಜ್ಯದ ರಾಷ್ಟ್ರೀಯತೆಯನ್ನು ಗಾಂಧೀಜಿ ಪ್ರತಿಪಾದಿಸಿದರು. ರಾಷ್ಟ್ರದ ಒಗ್ಗಟ್ಟು ಮತ್ತು ಏಳಿಗೆಗೆ ಇದು ಸಿದ್ಧ ಪರಿಹಾರವಾಗುವಲ್ಲಿ ತೀರಾ ಬಲಹೀನ ಆದರ್ಶವೆನ್ನಿಸುವಂತಹ ಇಂದಿನ ಸ್ಥಿತಿಯಲ್ಲಿ ಬದಲಾದ ಸನ್ನಿವೇಶವಿದೆ. ರಾಷ್ಟ್ರೀಯತೆಯ ತಪ್ಪು ವ್ಯಾಖ್ಯಾನದಿಂದಾಗಿ ವೈವಿಧ್ಯತೆಗಳನ್ನು ಶಾಪವೆನ್ನುವ, ಇರುವ ವೈವಿಧ್ಯತೆ, ಸ್ವಯಮಾಡಳಿತ, ಒಕ್ಕೂಟ ಸ್ವರೂಪಗಳನ್ನು ಇಲ್ಲವಾಗಿಸಬೇಕೆನ್ನುವ ನಿಲುವುಗಳು ಇಣುಕುತ್ತಿವೆ. ಇದೇ ತಪ್ಪು ಅರ್ಥೈಸುವಿಕೆಯು ದೇಶ ಮೊದಲು ಎಂಬುದನ್ನು, ಉಳಿದೆಲ್ಲವನ್ನೂ ಕಡೆಗಣಿಸುವುದು ಎನ್ನುವೆಡೆಗೆ ನಾಡನ್ನು ಒಯ್ಯುತ್ತಿದೆ ಮತ್ತು ಇದೇ ಕಾರಣಕ್ಕಾಗಿ ಅತಿಯಾದ ಕೇಂದ್ರೀಕರಣವನ್ನು ಬೆಂಬಲಿಸುವಂತಹ ನಡೆಗಳು ಕಾಣುತ್ತಿವೆ.

ಪ್ರಸ್ತುತ ಇಂತಹ ಸನ್ನಿವೇಶದಲ್ಲಿ ನಿಂತಿರುವ ಕನ್ನಡಿಗ, ತಮಿಳ, ಬೆಂಗಾಲಿ, ಪಂಜಾಬಿ ಮೊದಲಾದ ಜನರು ರಾಷ್ಟ್ರೀಯತೆಯ ಈ ಅಲೆಯಲ್ಲಿ ದಿಕ್ಕುಗಾಣದೆ ನಿಂತಿದ್ದಾರೆ ಎಂದೇ ಅನ್ನಿಸುತ್ತದೆ. ನವ ರಾಷ್ಟ್ರೀಯವಾದದ ಸುಳಿಗೆ ಸಿಕ್ಕಿದವರು ದೇಶ ಮೊದಲು ಹಾಗಾಗಿ ನಿನ್ನತನವನ್ನೆಲ್ಲಾ, ನಿನ್ನ ಹಿತದ ಸಮೇತವಾಗಿ ಮರೆತು ಕೈಬಿಡುವುದೇ ನಿಜವಾದ ರಾಷ್ಟ್ರೀಯತೆಯೆನ್ನುವ ಹುಸಿಯಲ್ಲಿ ಕಳೆದುಹೋಗುತ್ತಿರುವಂತೆ ಕಾಣುತ್ತಿದೆ. ಈ ನಡುವೆ ಹೊಂಬೆಳಕಿನಂತೆ ಕಾಣುವುದು ನಿನ್ನತನವನ್ನು ಎಂದಿಗೂ ಬಿಡದಂತೆ ನೀನಿರು ಎನ್ನುವುದನ್ನು ಸಾರುವಂತಹ ಕರ್ನಾಟಕಾಂತರ್ಗತ ಭಾರತ ಎನ್ನುವ ಪರಿಕಲ್ಪನೆ.

ಹಾಗೆ ನೋಡಿದರೆ, ನೇ ಶತಮಾನದಲ್ಲಿ ಬಣ್ಣಿಸಿದ ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ ಅದರೊಳಗಂ ಕಿಸುವೊಳಲಾ ವಿದಿತ ಮಹಾ ಕೋಪಣ ನಗರದಾ ಪುಲಿಗೆರೆಯಾ ಸಧಬಿ ಮಸ್ತುತಮಪ್ಪೊಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ಎನ್ನುವ ಕವಿರಾಜಮಾರ್ಗದ ಸಾಲುಗಳು ಸ್ಪಷ್ಟವಾಗಿ ಕನ್ನಡನಾಡು, ಕನ್ನಡ ಜನ ಮತ್ತು ಕನ್ನಡ ಸಂಸ್ಕೃತಿಯನ್ನು ಗುರುತಿಸುತ್ತಾ ನೇಶನ್ ಎನ್ನುವ ಪಾಶ್ಚಿಮಾತ್ಯ ಕಲ್ಪನೆಗೂ ಚೆನ್ನಾಗಿ ಹೊಂದುವಂತೆ ಕನ್ನಡ ರಾಷ್ಟ್ರೀಯತೆಯನ್ನು ಎತ್ತಿತೋರುತ್ತದೆ. ಹಾಗಾಗಿ ಕನ್ನಡಿಗರಿಗೆ ಕನ್ನಡತನವೂ, ತಮಿಳರಿಗೆ ತಮಿಳುತನವೂ, ಮಹಾರಾಷ್ಟ್ರೀಯರಿಗೆ ಮರಾಟಿತನವೂ, ಬೆಂಗಾಲಿಗಳಿಗೆ ಬೆಂಗಾಲಿತನವೂ, ಗುಜರಾತಿಗಳಿಗೆ ಗುಜರಾತಿತನವೂ, ಪಂಜಾಬಿಗಳಿಗೆ ಪಂಜಾಬಿತನವೂ ತಂದುಕೊಟ್ಟಿರುವ ರಾಷ್ಟ್ರೀಯತೆಯೇ ನಮ್ಮಗಳ ರಾಷ್ಟ್ರೀಯತೆಯಾಗಿದೆ. ಇವೆಲ್ಲವುಗಳು ಪರಸ್ಪರ ಹೊಂದಿಕೊಂಡು ಒಂದುಗೂಡಿ ಭಾರತೀಯ ರಾಷ್ಟ್ರೀಯತೆ ಆಗಿದೆ ಎನ್ನಬಹುದು. ಇಂದು ನಮಗೆ ಬೇಕಿರುವುದು, ಭಾರತೀಯನಾಗಿರುವುದು ಎಂದರೆ ಕನ್ನಡಿಗನಾಗಿರುವುದು ಎಂದೇ ಅರ್ಥ ಎನ್ನುವ ಆತ್ಮಸ್ಥೈರ್ಯದ ನಿಲುವುಗಳು. ನನ್ನ ನುಡಿ, ನನ್ನ ನಂಬಿಕೆ ಆಚರಣೆ ಧರ್ಮ ಇವುಗಳನ್ನೆಲ್ಲಾ ಒಳಗೊಳ್ಳುವ ಮೂಲಕವೇ ಸಮಾನ ಗೌರವ ಪಾಲಿಸುವ ಒಕ್ಕೂಟ ಧರ್ಮವನ್ನು ಎತ್ತಿಹಿಡಿಯುವ ರಾಷ್ಟ್ರೀಯತೆಯೇ ನಮಗೆ ಇಂದು ಬೇಕಿರುವ ರಾಷ್ಟ್ರೀಯತೆಯಾಗಿದೆ. ಯಾವುದರಿಂದ ನಮ್ಮೆಲ್ಲರ ನಮ್ಮತನಗಳನ್ನು ಪೊರೆಯಲು, ಆ ಮೂಲಕ ಏಳಿಗೆಯನ್ನು ಹೊಂದಲು ಸಾಧ್ಯವಾಗುವುದೋ ಅಂತಹ ಒಕ್ಕೂಟ ಧರ್ಮವನ್ನೇ ರಾಷ್ಟ್ರೀಯತೆಯೆನ್ನಬಹುದಾಗಿದೆ. ಕನ್ನಡಿಗನೊಬ್ಬ ಕರ್ನಾಟಕದ ಏಳಿಗೆಗಾಗಿ ದುಡಿಯುವುದು, ಕನ್ನಡ ನಡೆ ನುಡಿ ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದು ನಮ್ಮ ರಾಷ್ಟ್ರೀಯತೆ. ಇದು ತಮಿಳಿನವನ, ಹಿಂದೀಯವನ ಹಕ್ಕುಗಳನ್ನು ಉಲ್ಲಂಘಿಸದು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎನ್ನುವಂತೆಯೇ ಉತ್ತರಪ್ರದೇಶದಲ್ಲಿ ಹಿಂದೀಯೂ, ಮಹಾರಾಷ್ಟ್ರದಲ್ಲಿ ಮರಾಠಿಯೂ ಸಾರ್ವಭೌಮ ಎನ್ನುತ್ತದೆ. ಹಾಗಾಗಿ ಭಾಷಾಧಾರಿತ ರಾಜ್ಯಗಳ ಅಸ್ತಿತ್ವಕ್ಕೆ ಧಕ್ಕೆಯಾಗುವುದನ್ನು ಒಪ್ಪುವುದಿಲ್ಲ. ಇದು ಭಾರತದ ಪ್ರಧಾನಮಂತ್ರಿ ಕೆಂಪುಕೋಟೆಯ ಮೇಲಿಂದ ತನ್ನ ತಾಯ್ನುಡಿಯಲ್ಲಿ ಮಾತಾಡುವುದನ್ನು ಸಂಭ್ರಮಿಸುತ್ತದೆ. ಇದು ಭಾರತದಲ್ಲಿ ನುಡಿ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಭಾರತದಂತಹ ನಾಡಿನಲ್ಲಿ ಸಂವಿಧಾನದ ಮತ್ತು ಕೇಂದ್ರಸರ್ಕಾರದ ಯಾವುದೋ ನಿಯಮಗಳನ್ನು ತೋರಿಸಿ ಒಂದು ಭಾಷೆಗೆ ವಿಶೇಷ ಸ್ಥಾನಮಾನ ಕೊಟ್ಟು ನಾಡಿನ ಪ್ರತಿಯೊಂದರಲ್ಲೂ ಆ ಭಾಷೆಯ ಜನರಿಗೆ ಅನುಕೂಲ ಮಾಡಿಕೊಡುವ ಅಸಮಾನತೆಯನ್ನು ಒಪ್ಪದು.

ಹಾಗೆಯೇ ಅಧಿಕಾರವು ಜನರ ಬಳಿಯಲ್ಲಿ ಇರುವುದೇ ನಿಜವಾದ ಸ್ವಾತಂತ್ರ್ಯ ಎನ್ನುವ ನಿಲುವನ್ನು ಹೊಂದಿರುತ್ತದೆ. ಏಕಾತ್ಮ ಶಾಸನವನ್ನು ಎತ್ತಿಹಿಡಿಯುವ ಒಂದು ದೇಶವಾಗಿ ಒಂದು , ಪರೀಕ್ಷೆ, ಒಂದು ಚುನಾವಣೆ, ಒಂದು ತೆರಿಗೆ, ಒಂದು ಭಾಷೆ ಎನ್ನುವ ಅತಿಯಾದ ಕೇಂದ್ರೀಕರಣಗೊಳ್ಳುತ್ತಿರುವ ಕುರುಡು ನಿಯಮಗಳನ್ನು ನಿಜವಾದ ರಾಷ್ಟ್ರೀಯತೆ ಒಪ್ಪದು. ಬದಲಾಗಿ ಇದು ರಾಜ್ಯಗಳ ಬಳಿಯಲ್ಲಿ ಎಲ್ಲಾ ಅಧಿಕಾರಗಳೂ ಇರಬೇಕು ಮತ್ತು ಕೇಂದ್ರಸರ್ಕಾರದ ಬಳಿ ಅತ್ಯಂತ ಕಡಿಮೆ ಅಧಿಕಾರವಿರಬೇಕು ಎನ್ನುವ ವಿಕೇಂದ್ರೀಕರಣದ ಪರವಾಗಿ ನಿಲ್ಲುತ್ತದೆ. ಈ ಮೂಲಕವೇ ಸಮಾನ ಗೌರವದ, ಸಮಾನ ಅವಕಾಶದ ಒಕ್ಕೂಟ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಭಾರತದ ಏಕತೆಯ ಹೆಸರಲ್ಲಿ ಅಂತರರಾಜ್ಯ ವಲಸೆಯನ್ನು ಉತ್ತೇಜಿಸುವುದನ್ನು, ನಾಡಿನ ಜನಲಕ್ಷಣವನ್ನು ಬದಲಿಸುವ ಹುನ್ನಾರವಾಗಿಯೇ ಇದು ಗುರುತಿಸುತ್ತದೆ. ನನ್ನತನಕ್ಕೆ ಧಕ್ಕೆ ತರುವ ಯಾವ ನಡೆಯಾದರೂ ಅದು ಒಪ್ಪಲಾಗದ್ದು ಎನ್ನುವ ಸರಳ ಸ್ವಾರ್ಥದ ಜೊತೆಯಲ್ಲೇ

ನನ್ನತನದ ಉಳಿವು ಮತ್ತು ಏಳಿಗೆಯ ಮೂಲಕವೇ ಭಾರತವನ್ನು ಸದೃಢವಾಗಿಸಲು ಸಾಧ್ಯ ಎಂಬುದನ್ನು ಪ್ರತಿಪಾದಿಸುತ್ತದೆ. ಒಟ್ಟಾರೆಯಾಗಿ ಸ್ವಯಮಾಡಳಿತ, ಅಧಿಕಾರ ವಿಕೇಂದ್ರೀಕರಣ, ಸಮಾನ ಗೌರವ ಮತ್ತು ಸಮಾನ ಅವಕಾಶಗಳನ್ನು ಒಳಗೊಂಡ ಇಂತಹ ರಾಷ್ಟ್ರೀಯತೆಯನ್ನೇ ನಾವೆಲ್ಲರೂ ಅಪ್ಪಿಕೊಳ್ಳಬೇಕಾಗಿದೆ.

ಲೇಖಕರು : ಶ್ರೀ ಆನಂದ್, ಅಧ್ಯಕ್ಷರು, ಬನವಾಸಿ ಬಳಗ, ಬೆಂಗಳೂರು.

ಅರ್ಥಶಾಸ್ತ್ರ - ವಿಭಿನ್ನ ಚಿಂತನಾ ವಿಧಾನಗಳು

ವಿವಿಧ ನೈಸರ್ಗಿಕ ಸಂಪನ್ಮೂಲಗಳು

ಪದಾರ್ಥಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಕಲ್ಲಿದ್ದಲು, ಪೆಟ್ರೋಲಿಯಂ, ಖನಿಜಗಳಂತಹ ಸೀಮಿತವಾದ ಮತ್ತು ಗೊತ್ತಾದ ಪ್ರಮಾಣದಲ್ಲಿ ಇರುವಂತಹವು. ಮತ್ತೊಂದು ಮಾನವ ಪ್ರಯತ್ನದಿಂದ ಹೆಚ್ಚಿಸಲು ಅಥವಾ ನಿರಂತರವಾಗಿ ದೊರಕುವಂತಹವು. ಉದಾಹರಣೆಗೆ ಮರ ಮುಟ್ಟುಗಳು, ಹತ್ತಿ, ನೀರು ಇತ್ಯಾದಿ. ಮೊದಲನೆಯದನ್ನು ಚಿನ್ನದ ಮೊಟ್ಟೆ ಇಡುವ ಕೋಳಿಯ ಅರ್ಥಶಾಸ್ತ್ರವೆಂದೂ, ಎರಡನೆಯದನ್ನು ಸಾಧಾರಣ ಮೊಟ್ಟೆ ಇಡುವ ಕೋಳಿಯ ಅರ್ಥಶಾಸ್ತ್ರವೆಂದು ಕರೆಯಬಹುದು. ಈ ಎರಡರಲ್ಲಿ ಮೊದಲನೆಯದ್ದು ಸುಲಭದ್ದು ಮತ್ತು ತಕ್ಷಣವೇ ಫಲ ನೀಡುವಂತಹದ್ದು. ಅದರೆ ಚಿನ್ನದ ಮೊಟ್ಟ ಇಡುವ ಕೋಳಿ ಮೊಟ್ಟೆ ಇಡುವುದನ್ನು ನಿಲ್ಲಿಸಿ ಬಿಟ್ಟರೆ ಅಥವಾ ಅದನ್ನು ಕುಯ್ದು ಬಿಟ್ಟರೆ ಅದು ಹಿಂಸೆಗೆ ದಾರಿ ಮಾಡಿಕೊಡುತ್ತದೆ.

ಸಾಧಾರಣ ಮೊಟ್ಟೆ ಇಡುವ ಕೋಳಿಯ ಅರ್ಥಶಾಸ್ತ್ರವನ್ನು ನಿರ್ವಹಿಸಲು ಸಾಕಷ್ಟು ಮಾನವ ಪ್ರಯತ್ನ ಬೇಕಿದೆ. ಹಾಗಿದ್ದೂ, ಅದು ನಿಧಾನಗತಿಯದ್ದು. ಆದರೆ ಅದು ಹಿಂಸೆಗೆ ಪ್ರೇರಕವಾಗುವುದಿಲ್ಲ.

ಒಬ್ಬ ತಂದೆ ತನ್ನ ಇಬ್ಬರು ಮಕ್ಕಳಿಗೂ ತಲಾ ಹತ್ತು ಸಾವಿರ ರೂಪಾಯಿ ನೀಡುತ್ತಾನೆ. ಒಬ್ಬ ಮಗ ತನ್ನ ಪಾಲಿನ ೧೦ ಸಾವಿರ ರೂಪಾಯಿ ತೆಗೆದುಕೊಂಡು, ಸಮೀಪದ ಪಟ್ಟಣಕ್ಕೆ ವಲಸೆ ಹೋಗುತ್ತಾನೆ. ಅಲ್ಲಿ ಆ ಹಣದಿಂದ ಐಷಾರಾಮಿ ಜೀವನ ಸಾಗಿಸುತ್ತಾನೆ. ಸ್ವಲ್ಪ ಸಮಯದಲ್ಲಿಯೇ ಅವನಲ್ಲಿ ಇದ್ದ ಬಂಡವಾಳ ಕರಗುತ್ತದೆ. ಆದರೆ ಅವನಿಗೆ ಈ ಐಷಾರಾಮಿ ಬದುಕು ಒಗ್ಗಿ ಹೋಗಿದೆ. ಆಗ ಹಣ ಹುಟ್ಟಿಸಲು ಜೂಜು, ಮೋಸ ಇತ್ಯಾದಿ ಅಪಮಾರ್ಗ ಹಿಡಿಯುತ್ತಾನೆ.

ಎರಡನೆಯ ಮಗ, ತನ್ನ ಹತ್ತು ಸಾವಿರವನ್ನು ವ್ಯಾಪಾರದಲ್ಲಿ ತೊಡಗಿಸುತ್ತಾನೆ. ಅದರಿಂದ ಆತ ತಿಂಗಳಿಗೆ ೧೫೦ ರೂ. ಲಾಭ ಗಳಿಸುತ್ತಾನೆ ಎಂದು ಭಾವಿಸೋಣ. ಅದರಲ್ಲಿಯೇ ಆತ ಬದುಕುತ್ತಾನೆ. ಅವನಿಗೆ ಬದುಕಲು ಅಪಮಾರ್ಗ ಹಿಡಿಯಬೇಕಾಗಿರುವುದಿಲ್ಲ.

ಚಿನ್ನದ ಮೊಟ್ಟೆಯ ಕೋಳಿಯ ಅರ್ಥಶಾಸ್ತ್ರ ಮೊದಲನೆಯ ಮಗನದು. ಕಣ್ಣು ಕೊರೈಸುವ ಬದುಕು ಲಭ್ಯವಾದರೂ ಅದು ವಿನಾಶಕ್ಕೆ ದಾರಿ ಮಾಡಿಕೊಡುತ್ತದೆ. ಆದರೆ ಸಾಧಾರಣ ಮೊಟ್ಟೆಯ ಕೋಳಿಯ ಅರ್ಥಶಾಸ್ತ್ರ ಎರಡನೆಯ ಮಗನದು. ಅದು ಸರಳವಾದುದು. ಆತ್ಮ ಗೌರವ ದೊರಕಿಸಿಕೊಡುವಂತಹುದು. ಆದರೆ ಇದಕ್ಕೆ ಸ್ವ ನಿಯಂತ್ರಣ ಅಥವಾ ಆತ್ಮ ಸಂಯಮದ ಅಗತ್ಯ ಇದೆ. ಇದು ಇನ್ನೊಬ್ಬರ ಬದುಕಿನ ಮೇಲೆ ಆಕ್ರಮಣ ಮಾಡುವುದಿಲ್ಲ.

ಅರ್ಥಶಾಸ್ತ್ರದ ಚಿಂತನೆಗಳು

ಹಿಂದಿನ ಅಧ್ಯಾಯಗಳಲ್ಲಿ ನಾವು ಪರಿಶೀಲಿಸಿದ ಮಾನವ ಜೀವನದ ವಿಭಿನ್ನ ಚಟುವಟಿಕೆಗಳನ್ನು ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಬಹುದು. ಚಟುವಟಿಕೆಯ ಹಿಂದಿನ ಪ್ರಬಲವಾದ ಪ್ರೇರಣಾ ಶಕ್ತಿಯನ್ನು ಆಧರಿಸಿ ಈ ವರ್ಗೀಕರಣ ಮಾಡಲಾಗಿದೆ.

೧.ದರೋಡೆಯ ಅರ್ಥಶಾಸ್ತ್ರ. ೨.ಉದ್ಯಮಶೀಲತೆಯ ಅರ್ಥಶಾಸ್ತ್ರ ೩.ಸಾಂಘಿಕ ಅರ್ಥಶಾಸ್ತ್ರ ೪.ಶಾಶ್ವತ ಅರ್ಥಶಾಸ್ತ್ರ

ದರೋಡೆಯ ಅರ್ಥಶಾಸ್ತ್ರ

ಬೆಳೆಸಲು, ಉತ್ಪಾದಿಸಲು ಅಥವಾ ಸೃಷ್ಟಿಸಲು ನಾವು ಯಾವುದೇ ಪ್ರಯತ್ನ ಮಾಡದೇ, ನಿಸರ್ಗದಲ್ಲಿ ದೊರೆಯುವ ವಸ್ತುಗಳಿಂದ ನಮ್ಮ ದೈನಂದಿನ ಅಗತ್ಯಗಳಿಗೆ ಬಳಸಿಕೊಳ್ಳುವ ಅಥವಾ ದೋಚುವ ವಿಧಾನ. ಬೇಟೆ, ಮೀನುಗಾರಿಕೆ ಇವು ಬಹುತೇಕ ಈ ವಿಧಾನದಲ್ಲಿ ಬರುತ್ತವೆ. ಖನಿಜಗಳ ಬಳಕೆ, ಗಣಿಗಾರಿಕೆ ಕೂಡಾ ಈ ವಿಧಾನಕ್ಕೆ ಅಳವಡುತ್ತದೆ. ನಮ್ಮ ಅಗತ್ಯ ಇಲ್ಲಿಯ ಪ್ರಧಾನ ಪ್ರೇರಕ ಶಕ್ತಿ. ಹಕ್ಕು, ಕರ್ತವ್ಯ ಅಥವಾ ಈ ರೀತಿಯ ಯಾವುದೂ ಇಲ್ಲಿ ಪರಿಗಣನೆಗೆ ಬರುವುದಿಲ್ಲ. ಪ್ರಾಣಿಗಳ ನಡವಳಿಕೆಗೆ ಈ ಚಿಂತನೆ ಸರಿಯಾಗಿರುತ್ತದೆ. ಇದೊಂದು ತೀರಾ ಕೆಳಸ್ತರದ್ದಾಗಿದ್ದು ಇಲ್ಲೊಂದು ಅರ್ಥಶಾಸ್ತ್ರವನ್ನು ರೂಪಿಸಿದರೆ ಪ್ರಾಣಿಗಳ ಚಟುವಟಿಕೆಗಳನ್ನು ಈ ವ್ಯವಸ್ಥೆ ಒಳಗೊಳ್ಳುತ್ತದೆ. ಈ ಇದು ಪ್ರಾಣಿಗಳ ಬದುಕಿನ ರೀತಿಯದ್ದೇ ಆಗಿರುತ್ತದೆ. ಏನನ್ನೂ ನೀಡದೆ ಪಡೆಯುವ ಇಚ್ಛೆ ಇಲ್ಲಿ ಇರುತ್ತದೆ.

ಔದ್ಯಮಿಕ ಅರ್ಥಶಾಸ್ತ್ರ

ಇಲ್ಲಿ ವ್ಯಕ್ತಿ ತನ್ನ ಹಕ್ಕನ್ನು ಚಲಾಯಿಸುತ್ತಾನೆ. ತನ್ನಲ್ಲಿರುವ ಶಕ್ತಿ, ಪ್ರತಿಭೆಗಳು ತನಗೆ, ತನ್ನ ಲಾಭಕ್ಕೆ ಮಾತ್ರ ಬಳಸಿಕೊಳ್ಳುತ್ತಾನೆ. ಇನ್ನೊಬ್ಬರು ಇದರ ಲಾಭ ಪಡೆಯದಿರಲಿ ಎಂದು ತನ್ನಲ್ಲಿಯೇ ಆ ಶಕ್ತಿಯನ್ನು ಅಡಗಿಸಿಟ್ಟುಕೊಳ್ಳಲು ಯತ್ನಿಸುತ್ತಾನೆ. ಈ ಕಾರಣಕ್ಕೆ ಅನ್ಯರ ಪ್ರಯತ್ನಗಳಿಗೆ ಅಡೆ-ತಡೆ ಸೃಷ್ಟಿಸುತ್ತಾನೆ. ಇದು ಮಾನವ ಜೀವನದ ಪ್ರಾಥಮಿಕ ಹಂತ. ಸರಕಾರವೂ ಈ ವಿಷಯದಲ್ಲಿ ಏನೂ ಪ್ರವೇಶ ಮಾಡದೇ, ಆದರಷ್ಟಕ್ಕೆ ಬಿಟ್ಟು ಬಿಡುತ್ತದೆ. ಇದು ಬಂಡವಾಳಶಾಹಿ ಮನೋಧರ್ಮ. ಕಳೆದ ಶತಮಾನದ ಹೆಚ್ಚು ಸಮಯ ಅಮೆರಿಕಾ ಮತ್ತು ಇಂಗ್ಲೆಂಡ್ ಈ ಚಿಂತನೆಗೆ ಆಶ್ರಯವಿತ್ತಿತ್ತು. ಈ ವ್ಯವಸ್ಥೆಯಲ್ಲಿ ಪ್ರತಿ ವ್ಯಕ್ತಿಯೂ ತನ್ನಷ್ಟಕ್ಕೆ ತಾನೇ ಇರುತ್ತಾನೆ. ಇದು ಸ್ವೇಚ್ಛಾಚಾರ, ಸ್ವಚ್ಛಂದ ಮತ್ತು ವೈಭೋಗದ ಬದುಕಿಗೆ ರಾಜಮಾರ್ಗ ಒದಗಿಸುತ್ತದೆ.

ಸಾಂಘಿಕ ಅಥವಾ ಗುಂಪಿನ ಅರ್ಥಶಾಸ್ತ್ರ

ಯಾರೊಬ್ಬರೂ ಅವರಷ್ಟಕ್ಕೆ ಅವರೇ ಬದುಕಲು ಸಾಧ್ಯವಿಲ್ಲ ಎಂಬ ಅರಿವು, ಮಾನವ ಜನಾಂಗ ಬೆಳೆದಂತೆಲ್ಲಾ ಅದರ ಅರಿವಿಗೆ ಬರತೊಡಗುತ್ತದೆ. ಮನುಷ್ಯ -ಮನುಷ್ಯನ ನಡುವೆ ಬಂಧಿಸುವ ಬೆಸುಗೆ ಒಂದಿದೆ ಎಂಬ ಅರಿವು ಬರುತ್ತದೆ. ಸಂಘ ಜೀವನದ ಮನೋಧರ್ಮ ಬೆಳೆಸಿಕೊಳ್ಳುತ್ತಾನೆ. ಇಲ್ಲಿಯೂ ತನ್ನ ಒಡನಾಡಿಗಳಲ್ಲಿ, ವಿವಿಧ ಸ್ತರಗಳನ್ನು ಗುರುತಿಸಿಕೊಳ್ಳುತ್ತಾನೆ.

(ಅ) ಸಾಮ್ರಾಜ್ಯವಾದ

ಒಂದೇ ರೀತಿಯ ಜನರಿರುವ ಗುಂಪುಗಳಲ್ಲಿ, ಸ್ವಕೇಂದ್ರಿತ ಕಾಳಜಿಯುಳ್ಳ ಏಕಸ್ವಾಮ್ಯ, ಟ್ರಸ್ಟ್ ಮತ್ತು ಇದೇ ರೀತಿಯ ಸಂಘಟನೆಗಳ ಹೆಸರಲ್ಲಿ ಜನರು ಕೂಡಿಕೊಳ್ಳುತ್ತಾರೆ. ಈ ಗುಂಪುಗಳಲ್ಲಿ "ದರೋಡೆ ಅರ್ಥಶಾಸ್ತ್ರ"ದ ಸಿದ್ಧಾಂತಗಳು ಪ್ರವೇಶಿಸದಲ್ಲಿ, ಅದು ಸಾಮ್ರಾಜ್ಯಶಾಹಿಗೆ ದಾರಿ ಮಾಡಿಕೊಡುತ್ತದೆ. ಇದರಲ್ಲಿ ಆ ಗುಂಪು, ತನ್ನ ಲಾಭಕ್ಕಾಗಿ, ಮತ್ತೊಂದು ಗುಂಪಿನ ಶ್ರಮ ಮತ್ತು ಸಂಪತ್ತನ್ನು ಕಸಿಯುತ್ತದೆ. ಇದರಲ್ಲಿ ಸ್ವ ಕೇಂದ್ರಿತ ಕಾಳಜಿ (ಅದನ್ನು ಚಿಕ್ಕದಾಗಿ ಸ್ವಾರ್ಥ ಎನ್ನಿ)ಯೇ ಪ್ರೇರಕ ಶಕ್ತಿ. ವ್ಯಕ್ತಿಯ ಹಕ್ಕುಗಳು (ಕರ್ತವ್ಯಗಳಿಗಿಂತ ಹೆಚ್ಚು) ಮೇಲುಗೈ ಪಡೆದುಕೊಳ್ಳುತ್ತವೆ. ತನ್ನ ಗುಂಪಿನ ಹಿತಾಸಕ್ತಿಯೇ ಮುಖ್ಯವಾಗಿ ಇನ್ನಿತರ ಅಂಶಗಳು ಗೌಣವಾಗುತ್ತವೆ.

(ಆ) ಫ್ಯಾಸಿಸಂ, ನಾಜಿವಾದ, ಕಮ್ಯುನಿಸ್ಟ್, ಸಮಾಜವಾದ

ನೈತಿಕ, ಸಾಮಾಜಿಕ, ಆರ್ಥಿಕ ಮುಂತಾದ ಆದರ್ಶಗಳನ್ನು ಉಳ್ಳ ಜನರು (ಇವರು ಒಂದೇ ರೀತಿಯ ಜನ ಅಲ್ಲ, ವಿವಿಧ ಬಗೆಯ ಜನರು, ಕಾಳಜಿಗಳಲ್ಲಿ ಸಮಾನ ಆಸಕ್ತಿ ಹೊಂದಿರುವವರು) ತಮ್ಮ ಆದರ್ಶ, ಸಿದ್ಧಾಂತಗಳ ಸಾಧನೆಗೆ ಬಂದು ಸೇರುತ್ತಾರೆ. ಇವರಿಗೆ ತಮ್ಮ

ಕರ್ತವ್ಯಗಳ ಬಗ್ಗೆ ಅರಿವು ಇದೆ. ಇದನ್ನು ತಮ್ಮ ಗುಂಪಿಗೆ ಮಾತ್ರ ಸೀಮಿತ ಮಾಡಿಕೊಂಡಿರುತ್ತಾರೆ. ಗುಂಪಿನ ಹೊರಗಿರುವವರ ಬಗೆಗಿಂತ, ಗುಂಪಿನ ಒಳಗೇ ಸ್ವ ಕೇಂದ್ರಿತ ಕಾಳಜಿ ಇರುತ್ತದೆ. ಕಳೆದ ಶತಮಾನದಲ್ಲಿ, ಇದು ಹಲವು ಬಗೆಯ ಸಾಮಾಜಿಕ ವ್ಯವಸ್ಥೆಗೆ ಹಾದಿ ಮಾಡಿಕೊಟ್ಟಿದೆ. ಇವೆಲ್ಲವೂ ಭಿನ್ನಸ್ವರೂಪ ಪಡೆದುಕೊಂಡಿದ್ದು ನಿಜ. ಆದರೂ, ಅದರ ಅಡಿಪಾಯ ಒಂದೇ. ಇಲ್ಲಿ ಸಾಮ್ರಾಜ್ಯಶಾಹಿಯಲ್ಲಿ ಇದ್ದುದಕ್ಕಿಂತ ದರೋಡೆ ಅರ್ಥಶಾಸ್ತ್ರದ ಚಿಂತನೆಯಲ್ಲಿ ಕಡಿಮೆ ಇರುತ್ತದೆ. ಸಾಮ್ರಾಜ್ಯವಾದಿ ವ್ಯವಸ್ಥೆಗಿಂತ ಇಲ್ಲಿ ಇದರ ವ್ಯಾಪ್ತಿ ವಿಸ್ತಾರ ಹೆಚ್ಚಿರುವುದೇ ಇದಕ್ಕೆ ಕಾರಣ. ಇದು ತೀವ್ರವಾದ ರಾಷ್ಟ್ರೀಯತೆಗೂ ಕಾರಣವಾಗುತ್ತದೆ. ಉನ್ನತ ಸ್ತರದ ಸಾಂಸ್ಕೃತಿಕ ಮೌಲ್ಯಗಳು ಮರೆಯಾಗುತ್ತವೆ. ಮನುಷ್ಯನ ಜೀವನಕ್ಕೆ ಆಹಾರ ಮಾತ್ರ ಸಾಕು ಎಂಬಷ್ಟಕ್ಕೆ ಇಳಿಯುತ್ತದೆ. ಈ ವ್ಯವಸ್ಥೆಯಲ್ಲಿ ಅನ್ಯ ಗುಂಪುಗಳ ಬಗ್ಗೆ ನಮ್ಮ ಕರ್ತವ್ಯಗಳ ಅರಿವೂ ಇರುವುದಿಲ್ಲ.

ಶಾಶ್ವತ ಅರ್ಥಶಾಸ್ತ್ರ

ಈವರೆಗೆ ನಾವು ಪರಿಶೀಲಿಸಿದ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಚಿಂತನೆಗಳೆಲ್ಲವೂ ಅಸ್ಥಿರವಾದ ಅರ್ಥಶಾಸ್ತ್ರೀಯ ಚಿಂತನೆಗಳಾಗಿವೆ. ಜೀವನದ (ವ್ಯಕ್ತಿ, ಗುಂಪು, ರಾಷ್ಟ್ರ) ಅಲ್ಪ ಕಾಲಾವಧಿಯ ಕಾಳಜಿಗಳನ್ನಾಧರಿಸಿ ಚಿಂತನೆಗಳು ಇವೆ. ನಾವು ಶಾಶ್ವತವಾದುದನ್ನು ಹಂಬಲಿಸಿದರೆ, ಚಿರಂತನವಾದ ತತ್ವಗಳ ಹಿನ್ನೆಲೆಯಲ್ಲಿ ಅದನ್ನು ರೂಪಿಸಬೇಕು.

ನಾವು ನಮ್ಮ ಹಕ್ಕುಗಳಿಗೆ ಮಾತ್ರ ಒತ್ತು ನೀಡಿದರೆ ಬದುಕು ಲೋಲುಪತೆಗೆ ಕಡೆಗೆ ಹೋಗುತ್ತದೆ. ನಾವು ಕರ್ತವ್ಯಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರೆ, ನಮ್ಮ ಜೀವನವನ್ನು, ಮತ್ತೊಂದು ವ್ಯಕ್ತಿಯ ಬದುಕಿನ ಜತೆಗೆ ಇಟ್ಟು ಮೌಲ್ಯಮಾಪನ ಮಾಡುತ್ತೇವೆ. ಅದು ಶಾಶ್ವತತೆಗೆ ದಾರಿಮಾಡಿಕೊಡುತ್ತದೆ. ಮನುಷ್ಯನಿಗೆ ದಿವ್ಯದ ಹಂಬಲವಿದೆ. ತನ್ನ ಸುತ್ತಲಿನ ಸಹ ಜೀವಿಗಳೊಂದಿಗೆ, ಅನಂತತೆಯನ್ನು ಕೂಡಿಕೊಳ್ಳಲು ಬಯಸುತ್ತಾನೆ. ಆತನ ಗುರಿ ತನ್ನ ಆಯುಷ್ಯದ ಕೇವಲ ೩೦-೩೫ ವರ್ಷದ ಅಲ್ಪಾವಧಿಯಲ್ಲಿ ಸ್ವೇಚ್ಛೆಯಾಗಿ ಸ್ವಚ್ಛಂದವಾಗಿ ಬದುಕುವುದು ಅಲ್ಲ. ಆತ ಶಾಶ್ವತ ಮೌಲ್ಯಗಳ ಹಿನ್ನಲೆಯಲ್ಲಿ ತನ್ನನ್ನೇ ಅವಲೋಕಿಸಿಕೊಂಡು "ಆತನ ಅರಿವಿಲ್ಲ ನೀನು ಮಾನವನಾಗಲು ಸಾಧ್ಯವೇ" ಎಂದು ಘೋಷಿಸಿಕೊಳ್ಳುತ್ತಾನೆ. ನಾವು ಈ ಭೂಮಿಯ ಮೇಲೆ ಶಾಶ್ವತವಾಗಿ ಇರಲು ಬಂದವರಲ್ಲ. ನಾವು ಇಲ್ಲಿ ಶಿಬಿರಾರ್ಥಿಗಳ ರೀತಿಯಲ್ಲಿ ಬಂದು ಹೋಗುವವರು, ಸಹ ಪಯಣಿಗರು.

ಗಾಂಧಿಯವರಿಗೆ ಈ ದೇವರ (ದಿವ್ಯ) ವ್ಯವಸ್ಥೆಯ ಬಗ್ಗೆ ಗಾಢವಾದ ನಂಬುಗೆ ಇತ್ತು. ಮಾನವ ಇತಿಹಾಸದಲ್ಲಿ, ಕಾಣುವ ಏಳು, ಬೀಳುಗಳು ಈ ದೇವರ ವ್ಯವಸ್ಥೆಯಿಂದ ದೂರು ಸರಿದ ಕಾರಣದಿಂದ ಆಗಿದೆ. ಎಲ್ಲಿಯವರೆಗೆ, ಮನುಷ್ಯ ಈ ದೇವರ ವ್ಯವಸ್ಥೆಯನ್ನು ಅನುಸರಿಸುವನೋ. ಅವನೆಲ್ಲ ಕ್ರಿಯೆಗಳನ್ನು ಆತನ ಕರ್ತವ್ಯಗಳು ಮುನ್ನಡೆಸುತ್ತವೆ. ಈ ಎಲ್ಲ ಪ್ರಕ್ರಿಯೆಗಳಲ್ಲಿ ಧರ್ಮ ಇರುತ್ತದೆ.

ನಮ್ಮ ಜೀವನದ ಅಸ್ಥಿರತೆಯನ್ನು ಎಷ್ಟರ ಮಟ್ಟಿಗೆ ಗುರುತಿಸಲು ಸಾಧ್ಯವಾಗುವುದೋ ಮತ್ತು ಶಾಶ್ವತದ ಹಿನ್ನೆಲೆಯಲ್ಲಿ ನಮ್ಮ ನಿಯಮಗಳನ್ನು ರೂಪಿಸುತ್ತೇವೆಯೋ ಅಷ್ಟರ ಮಟ್ಟಿಗೆ ಅರ್ಥಶಾಸ್ತ್ರದ ಚಿಂತನೆಗಳು ಶಾಶ್ವತದತ್ತ ಸಾಗುತ್ತದೆ. ಈ ರೀತಿಯ ಮನೋಧರ್ಮ ಮಾತ್ರ ಮನುಷ್ಯ ಜನಾಂಗವನ್ನು ಪ್ರಗತಿ ಮತ್ತು ಸಮೃದ್ಧಿಯತ್ತ ಕೊಂಡೊಯ್ಯಬಲ್ಲದು. ಅದರೊಂದಿಗೆ, ಸುಸಂಸ್ಕೃತ, ಸೂಕ್ಷ್ಮ ಸಂವೇದನೆಯ ಶಾಂತಿಯುತ ಸಹಬಾಳ್ವೆ ಸಾಧ್ಯವಾಗುತ್ತದೆ. ಆದ ಕಾರಣ ಸೂಕ್ತ ಮಾನಕಗಳಿಂದ ವಸ್ತು ನಿಷ್ಠವಾಗಿ ಈ ವಿಜ್ಞಾನವನ್ನು ಅಧ್ಯಯನ ಮಾಡಬೇಕು. ಪ್ರಪಂಚವನ್ನು ಮುನ್ನಡೆಸುತ್ತಿರುವ ನಿಯಮಗಳ ಹಿನ್ನೆಲೆಯಲ್ಲಿ ಈ ವಿಜ್ಞಾನದ ಅಳವಡಿಕೆಗೆ ಮುಂದಾಗಬೇಕು.

ಮನುಷ್ಯ ಈ ತತ್‌ಕ್ಷಣದ ಅಗತ್ಯಗಳ ಹಿನ್ನೆಲೆ ಇಟ್ಟುಕೊಂಡು ಇದರ ಅಳವಡಿಕೆ ಮಾಡಬಾರದು. ಈ ಹಿನ್ನೆಲೆಯಲ್ಲಿ ನಾವು ವ್ಯವಸ್ಥೆಯನ್ನು ರೂಪಿಸುವುದಾದಲ್ಲಿ ನಾವು ನೈಸರ್ಗಿಕ ಸಂಪನ್ಮೂಲಗಳ ಭಂಡಾರವನ್ನು ಶೋಷಿಸುವುದನ್ನು ಬಿಡುತ್ತೇವೆ. ಅದು ಎಲ್ಲ ಕಾಲಕ್ಕು, ಎಲ್ಲರಿಗೂ ದೊರೆಯುವ ರೀತಿಯಲ್ಲಿ ಶ್ರಮ ಮತ್ತು ಸಾಮಾಗ್ರಿಗಳಿಂದ ಅದನ್ನು ರೂಪಿಸಬೇಕು. ಆಗ ವಿತರಣೆಗೆ ಒತ್ತು ನೀಡಬೇಕು. ಇಂತಹ ಒಂದು ವ್ಯವಸ್ಥೆ, ನಾವು ಯಾವುದನ್ನು ಆಧುನಿಕ ಎಂದು ಕರೆಯುತ್ತೇವೆಯೋ ಅದಕ್ಕಿಂತಲೂ ಭಿನ್ನವಾದ ಜೀವನ ಶೈಲಿಯತ್ತ ಬೊಟ್ಟು ಮಾಡುತ್ತದೆ. ಕಾಲಾಂತರದಲ್ಲಿ ಕಬ್ಬಿಣದ ಅದಿರು ಬರಿದಾಗುವ ಸಾಧ್ಯತೆ ಇರುವ ಕಾರಣ, ಕಬ್ಬಿಣದ ಬಳಕೆ ಕಡಿಮೆ ಮಾಡಬೇಕಾಗುತ್ತದೆ. ಸಾಧ್ಯವಾದಷ್ಟು, ಮನುಷ್ಯ ಸೃಷ್ಟಿಸಿಕೊಳ್ಳಬಹುದಾದ ಸಾಮಾಗ್ರಿಗಳಲ್ಲಿಯೇ ನಮ್ಮ ಅಗತ್ಯವನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಅರಣ್ಯಗಳನ್ನು ಹೆಚ್ಚು-ಹೆಚ್ಚಾಗಿ ಬೆಳೆಸುವ ಸಾಧ್ಯತೆ ಇರುವುದರಿಂದ, ಮರ ಬಳಸಬಹುದು. ಆಧುನಿಕ ಜಗತ್ತು ಕಬ್ಬಿಣ ಮತ್ತು ಉಕ್ಕಿನ ಜಗತ್ತು. ಪ್ರಾಚೀನದಿಂದ ಆರ್ಜಿತವಾಗಿ ಬಂದ ಪದಾರ್ಥಗಳನ್ನು ಮನಬಂದಂತೆ ದುಂದು ಮಾಡುವುದು ಸಾಧ್ಯವಿಲ್ಲ. ನಾವು ಸೃಷ್ಟಿಸಬಹುದಾದ ಇಟ್ಟಿಗೆ, ಗಾರೆ, ಸಿಮೆಂಟು, ಮರ ಶಾಶ್ವತ ಅರ್ಥಶಾಸ್ತ್ರದ ವ್ಯಾಪ್ತಿಗೆ ಬಂದರೆ, ಕಬ್ಬಿಣ ಬಳಸಿದ ಸಿಮೆಂಟ್ ಕಾಂಕ್ರೀಟ್, ಕಬ್ಬಿಣದ ಬಾಗಿಲು ಅಸ್ಥಿರ ಅರ್ಥಶಾಸ್ತ್ರದ ವ್ಯಾಪ್ತಿಗೆ ಬರುತ್ತದೆ. 'ನ್ಯೂಯಾರ್ಕ್ ನಗರದ ಉಕ್ಕು ಮತ್ತು ಕಬ್ಬಿಣ ಬಳಸಿ ನಿರ್ಮಿಸಿದ ಗಗನಚುಂಬಿ ಕಟ್ಟಡಗಳು -ಅಸ್ಥಿರ ಅರ್ಥಶಾಸ್ತ್ರದ ವ್ಯಾಪ್ತಿಗೆ ಬಂದರೆ, ಭಾರತದ ಮಣ್ಣಿನ ಮನೆಗಳು ಶಾಶ್ವತ ಅರ್ಥಶಾಸ್ತ್ರದ ವ್ಯಾಪ್ತಿಗೆ ಬರುವುದು ಅಚ್ಚರಿಯ ಸಂಗತಿ. ನಮ್ಮ ಬದುಕಿನ ವಿವಿಧ ಚಟುವಟಿಕೆಗಳಿಗೆ, ಮೇಲುನೋಟಕ್ಕೆ ಸಮೃದ್ಧ ಎನಿಸುವ ನೈಸರ್ಗಿಕ ಸಂಪನ್ಮೂಲಗಳನ್ನು ಅವಲಂಬಿಸದೇ, ನಾವು ಉತ್ಪಾದಿಸಬಲ್ಲ ವಸ್ತುಗಳ ಮೇಲೆ ನಿರ್ಭರವಾಗಬೇಕು.

ಲೌಕಿಕ ವಸ್ತುಗಳು ಅಸ್ಥಿರವಾದವು. ಗೋರಿಯೇ ನಮ್ಮ ಗುರಿಯೂ ಅಲ್ಲ, ಆದುದರಿಂದ ಶಾಶ್ವತ ಮೌಲ್ಯಗಳ ಆಧಾರದ ಮೇಲೆ, ರಾಷ್ಟ್ರದ ನಡವಳಿಕೆ ಮೌಲ್ಯಮಾಪನ ಮಾಡಬೇಕಾಗುತ್ತದೆ. ಈ ರೀತಿಯ ಒಂದು ಪ್ರಯತ್ನ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಇದೆ. ಯುರೋಪಿನ ಚಿಂತನೆಯಲ್ಲಿ (ದರೋಡೆ ಚಿಂತನೆಯಲ್ಲಿ) ತನ್ನ ಅಸ್ತಿತ್ವ ರಕ್ಷಿಸಿಕೊಳ್ಳಲು ಭೂ ಮತ್ತು ನೌಕಾ ಸೈನ್ಯ ಆದ್ಯತೆ ಇದೆ. ಹಿಂದೂ ಸಮಾಜದಲ್ಲಿ ಆದರ್ಶಗಳ ಹುಡುಕಾಟದ ಹಿನ್ನೆಲೆಯಲ್ಲಿ ವರ್ಗೀಕರಣ ಮಾಡಲಾಗಿದೆ.

೧. ಮೊದಲನೆಯದು -

ಸ್ವಂತದ ಪ್ರಯೋಜನ ಗುರಿಯಾಗಿಸಿಕೊಳ್ಳದೇ ಶುದ್ಧ ಮನಸ್ಸಿನಿಂದ ಸೇವೆ ಮಾಡುವವ ಬ್ರಾಹ್ಮಣ

೨. ಎರಡನೆಯವನು-

ಸ್ವಂತಕ್ಕೆ ಲಾಭವಿಲ್ಲದೇ, ಎಲ್ಲ ದಾರಿಗಳಿಂದಲೂ ಸೇವೆ ಮಾಡುವವರ ಹಿತದ ಮನಸ್ಸು -ಕ್ಷತ್ರಿಯ

೩. ಮೂರನೆಯವ -

ಸೇವೆ ಮಾಡಲು ಶಕ್ತನಾದ ಲೌಕಿಕ, ಆದರೆ ಸ್ವಂತ ಲಾಭದ ಮೇಲೆ ಕಣ್ಣಿಟ್ಟಿರುವವನು ವೈಶ್ಯ

೪. ನಾಲ್ಕನೆಯವನು-

ಪ್ರಾಣಿಗಳ ಸ್ತರದಲ್ಲಿ ಬದುಕುವವನು.

ಈ ರೀತಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಲಾಭ ಪ್ರೇರಕ ಶಕ್ತಿಯಾಗಿರುವುದಿಲ್ಲ. ಇದು

ಮಾರುಕಟ್ಟೆಯನ್ನು ನಿಯಂತ್ರಿಸುವುದಿಲ್ಲ. ಇಲ್ಲಿ ವಿತರಣೆಗೆ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಒತ್ತು ಇರುತ್ತದೆ. ಸಂಗ್ರಹ ಮತ್ತು ಹಣ ಮೌಲ್ಯವಾಗಿರುವುದಿಲ್ಲ. ಯಾವೊಬ್ಬ ವ್ಯಕ್ತಿಯ ಗುಂಪಿನ ಅಥವಾ ರಾಷ್ಟ್ರದ ಉನ್ನತಿ ಗುರಿಯಾಗಿರುವುದಿಲ್ಲ. ಆದರೆ ಸಮಗ್ರ ಮನುಕುಲದ ಉನ್ನತಿಯೇ ಇದರ ಗುರಿಯಾಗಿರುತ್ತದೆ.

ಈ ರೀತಿಯ ಜಾತಿ ಆಧಾರಿತವಾದ ವಿಭಿನ್ನ ಗುಂಪುಗಳನ್ನು ಪರಿಶೀಲಿಸಿದಲ್ಲಿ, "ದರೋಡೆ ಆರ್ಥಿಕತೆ" ಶೂದ್ರ ಆರ್ಥಿಕತೆಯಾಗಿರುತ್ತದೆ. ಇದರಲ್ಲಿ ಯಾವುದೇ ಒತ್ತಡದ ಪ್ರಯತ್ನ ಇರುವುದಿಲ್ಲ. ನೈಸರ್ಗಿಕ ಸಂಪನ್ಮೂಲಗಳ ಭಾಂಡಾರವನ್ನು ದೋಚಲಾಗುತ್ತದೆ. ಅಲೆಮಾರಿ ಮತ್ತು ಆದಿಮ ಜನಾಂಗಗಳು ಈ ಜೀವನ ಶೈಲಿಯನ್ನು ಅನುಸರಿಸುವುದನ್ನು ಕಾಣಬಹುದು.

ಔದ್ಯಮಿಕ ಮತ್ತು ಸಾಮ್ರಾಜ್ಯಶಾಹಿ ಆರ್ಥಿಕತೆಯನ್ನು ವೈಶ್ಯ ಆರ್ಥಿಕತೆ ಎನ್ನಬಹುದು. ಈ ಎರಡೂ ಸ್ವಲ್ಪ ಮಟ್ಟಿಗೆ ದರೋಡೆ ಆರ್ಥಿಕತೆಯೇ, ಆದರೆ ತೀವ್ರವಾದ ಮಹತ್ವಾಕಾಂಕ್ಷೆ ಮತ್ತು ಅತ್ಯುತ್ತಮ ಪ್ರಯತ್ನಗಳನ್ನು ತೊಡಗಿಸುವ ಪ್ರಯತ್ನವನ್ನು ನಾವಿಲ್ಲಿ ಕಾಣಬಹುದು. ಬಂಡವಾಳಶಾಹಿ ಪದ್ಧತಿ ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿ ಪದ್ಧತಿಗಳು ವ್ಯಕ್ತಿ ಮತ್ತು ವರ್ಗಗಳ ವಿಕಾಸದ ಪ್ರಾಚೀನ ಗುಣಧರ್ಮಗಳಿಗೆ ನಿದರ್ಶನವಾಗಿದೆ.

ಸಾಂಘಿಕ ಅಥವಾ ಗುಂಪಿನ ಆರ್ಥಿಕ ಚಿಂತನೆ, ಕ್ಷತ್ರಿಯ ಆರ್ಥಿಕತೆ ಎಂದು ಕರೆಯಬಹುದು. ಇದು ವ್ಯಕ್ತಿ ನಿಷ್ಠವಾದುದಲ್ಲ. ಆದರೆ ಜನಾಂಗೀಯ, ರಾಷ್ಟ್ರೀಯ ಕೇಂದ್ರಿತವಾದ ಆದರ್ಶವಾದುದಾಗಿದೆ. ಇದಕ್ಕೆ ನಾಜಿವಾದ ಮತ್ತು ಕಮ್ಯುನಿಸಂ ಅನ್ನು ಉದಾಹರಣೆಯನ್ನಾಗಿ ನೀಡಬಹುದು. ಪರಹಿತಕ್ಕಾಗಿ ಸ್ವಹಿತವನ್ನು ಬಲಿಗೊಟ್ಟಿರುವುದನ್ನು ಕಾಣಬಹುದು.

ಶಾಶ್ವತ ಅರ್ಥಶಾಸ್ತ್ರ, ಅದರ ಆದರ್ಶ ಮತ್ತು ಪರಿಕಲ್ಪನೆಯಲ್ಲಿ ಬ್ರಾಹ್ಮಣ ಅರ್ಥಶಾಸ್ತ್ರವಾಗಿರುತ್ತದೆ. ವಿಶ್ವದಲ್ಲಿ ಈ ಅಸ್ತಿತ್ವದಲ್ಲಿರುವ ವ್ಯವಸ್ಥೆಯೊಂದಿಗೆ ಸಮ –ಸಮವಾಗಿ ಹೆಜ್ಜೆ ಇಡಲು ಯತ್ನಿಸುತ್ತಿದೆ. ಅನಂತದೊಂದಿಗೆ ತನ್ನನ್ನು ಸಂಯೋಜಿಸಕೊಂಡು ಕೆಲಸ ಮಾಡಲು ಯತ್ನಿಸುತ್ತಿದೆ. ಈ ಒಂದೇ ವ್ಯವಸ್ಥೆಯಲ್ಲಿ, ಅತ್ಯಂತ ಕೆಳ ವ್ಯಕ್ತಿಯ ಕಾಳಜಿ ಸುರಕ್ಷಿತವಾಗಿರುತ್ತದೆ. ಮನುಕುಲದ ವ್ಯವಸ್ಥೆಯಲ್ಲಿ ಸಮಾಜದ ದುರ್ಬಲ ಘಟಕ ಕೂಡ ಪೂರ್ಣ ವಿಕಾಸವಾಗಲು ಸಾಧ್ಯವಾಗುತ್ತದೆ. ಇದೇ ಮಾನವ ಜನಾಂಗದ ಪ್ರಗತಿಯ ಮೇಲೆ ದೃಷ್ಟಿಯನ್ನಿಟ್ಟು ಆ ಬಗ್ಗೆ ಕಾರ್ಯಪ್ರವೃತ್ತರಾಗದಿದ್ದರೆ, ನಮ್ಮ ನಾಗರಿಕತೆ ನಾಶವಾದೀತು. ಕೆಟ್ಟ ಅನಾಗರಿಕ ಸಮಾಜ ಉದ್ಭವಿಸೀತು ಎಂಬುದನ್ನು ನಾವು ಅರಿಯಬೇಕು. ಈ ಶಾಶ್ವತ ಮೌಲ್ಯಗಳ ಹಿನ್ನೆಲೆಯಲ್ಲಿ ಯೋಜಿಸುವುದಕ್ಕೆ ದೂರದೃಷ್ಟಿ ಇರಬೇಕು. ಸಾಂಸ್ಕೃತಿಕ ಬೆಳವಣಿಗೆಯ ಕಲ್ಪನೆ ಇರಬೇಕು. ಇದು ತತ್‌ಕ್ಷಣದಲ್ಲಿ ಫಲ ನೀಡುವುದಿಲ್ಲ. ನಾವು ಅತ್ಯಂತ ತಾಳ್ಮೆಯಿಂದ ಕಾಯಬೇಕಾಗುತ್ತದೆ. ಇದು ಸತ್ಯ ಮತ್ತು ಅಹಿಂಸೆಯ ದಾರಿ. ಇದರ ಫಲ ಸಾಧಾರಣ. ಆದರೆ ಇದೊಂದೇ ನಿಜವಾದ ಪ್ರಜಾಪ್ರಭುತ್ವದ ದಾರಿ. ಇದರಿಂದ ರಾಷ್ಟ್ರ ರಾಷ್ಟ್ರಗಳಲ್ಲಿ ಶಾಂತಿ ನೆಲಸೀತು.

ವೈ ದಿ ವಿಲಜ್ ಮೂಮೆಂಟ್ ಪುಸ್ತಕದ ಅನುವಾದ
ಮೂಲ : ಜೆ.ಸಿ.ಕುಮಾರಪ್ಪ
ಕನ್ನಡಕ್ಕೆ : ಕೆ. ವೆಂಕಟರಾಜು

ಪುತ್ರನಿಗೆ ಕಣ್ಣೀರಿನ ವಿದಾಯ

ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಪರಸ್ಪರ ಗಾಂಧೀಜಿಯವರು ತಳೆದಿದ್ದ ಧೋರಣೆಗಳು ಹರಿಲಾಲ್ ಮತ್ತು ಗಾಂಧೀಜಿಯವರ ನಡುವಿನ ಭಿನ್ನಾಭಿಪ್ರಾಯಕ್ಕೆ ಮುಖ್ಯ ಕಾರಣವಾಯಿತು. ನೈತಿಕತೆಯನ್ನು ಒಳಗೊಂಡಿರುವ ಭಾರತೀಯ ಶಿಕ್ಷಣ ಪದ್ಧತಿ ಕುರಿತು ಅಪಾರ ಕಾಳಜಿ ಇದ್ದ ಗಾಂಧೀಜಿಯವರಿಗೆ ಪಾಶ್ಚಿಮಾತ್ಯ ಶಿಕ್ಷಣ ನೀತಿ ಕುರಿತಂತೆ ಒಲವಿರಲಿಲ್ಲ. ಜೊತೆಗೆ ಶಿಕ್ಷಣ ಪದ್ಧತಿಯಲ್ಲಿ ಪಾಶ್ಚಿಮಾತ್ಯ ದೇಶಗಳು ತೋರುತ್ತಿದ್ದ ವರ್ಣ ಬೇಧ ನೀತಿಯಿಂದಾಗಿ ಮಕ್ಕಳು ಬೆಳೆದಂತೆ ಕೀಳರಿಮೆಯಲ್ಲಿ ನಲುಗಿ ಹೋಗುತ್ತಾರೆ ಎಂದು ಅವರು ನಂಬಿದ್ದರು. (ಆ ಕಾಲಘಟ್ಟದ ಇಂತಹ ಅನುಭವಕ್ಕೆ ಗಾಂಧೀಜಿಯವರು ಸಾಕ್ಷಿಯಾಗುವುದರ ಜೊತೆಗೆ ಇಂಗ್ಲೇಂಡ್ ನಲ್ಲಿ ವಿದ್ಯಾಭ್ಯಾಸ ಮಾಡುವಾಗ ಸ್ವತಃ ಅನುಭವಿಸಿದ್ದರು) ನನ್ನ ಮಕ್ಕಳು ಅಂತಹ ಶಿಕ್ಷಣ ಪಡೆಯುವ ಬದಲು ಅನಕ್ಷರನಾಗಿ ಇರುವುದು ಒಳಿತು ಎಂಬುದು ಅವರ ಪ್ರಬಲ ನಂಬಿಕೆಯಾಗಿತ್ತು. ಆದರೆ, ಪಾಶ್ಚಿಮಾತ್ಯ ಜಗತ್ತಿನಲ್ಲಿ ಉನ್ನತ ಶಿಕ್ಷಣ ಪಡೆದು ಮಕ್ಕಳ ವಿಷಯದಲ್ಲಿ ತೋರುತ್ತಿರುವ ಅಸಹಕಾರ ಕುರಿತು ಹರಿಲಾಲ್ ಗೆ ಗಾಂಧೀಜಿಯವರ ಮಾತುಗಳು ಹಾಗೂ ಧೋರಣೆ ಕುರಿತು ನಂಬಿಕೆ ಇರಲಿಲ್ಲ. ಗಾಂಧೀಜಿಯವರು ಸದಾ ಸಾಮಾಜಿಕ ಸೇವೆಯ ಕುರಿತು ಹಾಗೂ ಸರಳವಾದ ಮತ್ತು ಮಿತವಾದ ಜೀವನ ಕುರಿತು ಮಾತನಾಡುತ್ತಿದ್ದರು. ಜೊತೆಗೆ ಅದರಂತೆ ಬದುಕುತ್ತಿದ್ದರು. ಪಾಶ್ಚಿಮಾತ್ಯ ಪ್ರೇರಿತ ಶಿಕ್ಷಣ ಪಡೆದರೆ ಮಕ್ಕಳು ಹಾಳಾಗುತ್ತಾರೆ ಎಂದು ನಂಬಿರುವ ನನ್ನ ತಂದೆಯವರು ಪಾಶ್ಚಿಮಾತ್ಯ ದೇಶದಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರಲ್ಲ! ಸರಳವಾದ ಜೀವನ ನಡೆಸುತ್ತಾ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದ್ದಾರಲ್ಲ! ಇದು ಹರಿಲಾಲ್ ಪಾಲಿಗೆ ಒಗಟಿನ ವಿಷಯವಾಗಿತ್ತು. ತಾನೂ ಸಹ ತಂದೆಯಂತೆ ಬ್ಯಾರಿಸ್ಟರ್ ಆಗಬೇಕೆಂಬ ಕನಸುಕೊಂಡಿದ್ದ ಹರಿಲಾಲ್‌ಗೆ ತನ್ನ ಕುಟುಂಬದ ಒಬ್ಬ ಸದಸ್ಯನಿಗೆ ಶಿಷ್ಯವೇತನದಂತಹ ಅವಕಾಶ ದೊರೆತಾಗಲೂ ಸಹ ಗಾಂಧೀಜಿಯವರು ನಿರಾಕರಿಸಿದ್ದರಿಂದ ತಂದೆಯ ಜೊತೆಗಿನ ಭಿನ್ನಾಭಿಪ್ರಾಯ ಬೆಳೆಯತೊಡಗಿತು. ಈ ವಿಷಯದಲ್ಲಿ ಗಾಂಧೀಜಿಯವರ ಕುಟುಂಬದಲ್ಲಿ ಅನೇಕ ಬಾರಿ ಬಿಸಿ ಬಿಸಿ ಚರ್ಚೆ ನಡೆದು ಸದಸ್ಯರ ನಡುವೆ ಮುನಿಸಿಗೆ ಕಾರಣವಾಯಿತು. ಕಸ್ತೂರಬಾ ಮತ್ತು ಪುತ್ರರೆಲ್ಲರೂ ಗಾಂಧೀಜಿಯವರ ಧೋರಣೆ ವಿರುದ್ಧ ಸಿಡಿದು ನಿಂತರು. ಒಮ್ಮೆ ಕಸ್ತೂರಬಾ ಅವರು ತಾಳ್ಮೆ ಕಳೆದುಕೊಂಡು ಗಾಂಧಿಯವರ ಮುಂದೆ ನಿಂತು "ನಿಮ್ಮ ಮನಸ್ಸಿನಲ್ಲಿ ಏನಿದೆ? ಮಕ್ಕಳ ಭವಿಷ್ಯವನ್ನು ಹೇಗೆ ರೂಪಿಸಬೇಕೆಂದು ಯೋಚಿಸಿದ್ದೀರಿ? ಅವರನ್ನು ಅನಕ್ಷರಸ್ಥರನ್ನಾಗಿ ಮತ್ತು ಭಿಕ್ಷುಕರನ್ನಾಗಿ ಮಾಡಲು ನಿರ್ಧರಿಸಿದ್ದೀರಾ?" ಎಂದು ತೀಕ್ಷ್ಣವಾಗಿ ಪ್ರಸ್ನಿಸಿದ್ದರು.

ಗಾಂಧೀಜಿಯವರಿಗೆ ತನ್ನ ಇತರೆ ಮಕ್ಕಳಿಗಿಂತ ಹೆಚ್ಚಾಗಿ ಹರಿಲಾಲ್ ಕುರಿತು ವಿಶೇಷ ಕಾಳಜಿಯಿತ್ತು. ಹರಿಲಾಲ್ ವಯಸ್ಕನಾಗಿರುವುದರ ಜೊತೆಗೆ ಗೃಹಸ್ಥನಾಗಿದ್ದ ಕಾರಣ ಹೆಚ್ಚು ಆಸಕ್ತಿ ತೋರುತ್ತಿದ್ದರು. ಆದರೂ ಸಹ ಗಾಂಧೀಜಿಯವರ ಕೆಲವು ಆಸಕ್ತಿ ಮತ್ತು ತಾಳುತ್ತಿದ್ದ ಧೋರಣೆಗಳು ಕುಟುಂಬದ ಸದಸ್ಯರಿಗೆ ಮಾತ್ರವಲ್ಲದೆ ಅವರ ಮಿತ್ರರಿಗೂ ದ್ವಂದ್ವ ನಿಲುವುಗಳಂತೆ ಕಾಣುತ್ತಿದ್ದವು. ಈ ಕುರಿತಂತೆ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರ ಆತ್ಮೀಯ ಗೆಳೆಯರಾಗಿದ್ದ

ಪೊಲ್ಲಾಕ್ ಮತ್ತು ಕಲ್ಲೆನ್ ಬಚ್ ಇಬ್ಬರೂ ಕಳವಳ ವ್ಯಕ್ತಪಡಿಸುವುದರ ಮೂಲಕ ಮಕ್ಕಳ ಶಿಕ್ಷಣ ಕುರಿತಂತೆ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕೆಂದು ಒತ್ತಾಯಿಸಿದ್ದರು. ಇವರ ಜೊತೆಗೆ ಗಾಂಧೀಜಿಯವರು ತಮ್ಮ ಮಕ್ಕಳ ಕುರಿತಂತೆ ಕಠಿಣ ನಿಲುವನ್ನು ಹೊಂದುತ್ತಿದ್ದಾರೆ ಎಂದು ಅನೇಕ ಮಿತ್ರರು ಅಸಮಾಧಾನ ವ್ಯಕ್ತ ಪಡಿಸಿದರು. ಆದರೆ, ಗಾಂಧೀಜಿಯವರ ನಿಲುವಿನಲ್ಲಿ ಕಿಂಚಿತ್ತೂ ಬದಲಾವಣೆಯಾಗಲಿಲ್ಲ. ತನ್ನ ಮಕ್ಕಳೆಲ್ಲರೂ ಅಸಮಾಧಾನಗೊಂಡಿದ್ದಾರೆ ಎಂದು ಗೊತ್ತಿದ್ದರೂ ಸಹ ತಾನು ತೆಗೆದುಕೊಂಡಿರುವ ನಿರ್ಧಾರ ಸರಿಯಾಗಿದೆ ಎಂಬುದು ಅವರ ಅಚಲ ನಂಬಿಕೆಯಾಗಿತ್ತು. ತಾನು ಹಾಕಿಕೊಂಡಿರುವ ಯೋಜನೆ ಮತ್ತು ರೂಪು-ರೇಷೆಗಳಿಗೆ ಅನುಗುಣವಾಗಿ ತಮ್ಮ ಮಕ್ಕಳ ಶಿಕ್ಷಣ ನಡಿಯಬೇಕು ಎಂದು ಅವರು ಪಣ ತೊಟ್ಟವರಂತೆ ನಡೆದುಕೊಳ್ಳುತ್ತಿದ್ದರು. ಅವರ ಪುತ್ರರಲ್ಲಿ ಇಪ್ಪತ್ತೊಂದು ವಯಸ್ಸಿನ ಹರಿಲಾಲ್ ನಂತರ ಹತ್ತೊಂಬತ್ತು ವರ್ಷದ ಮಣಿಲಾಲ್ ತನ್ನ ತಂದೆಯನ್ನು ಪ್ರಶ್ನಿಸಬಹುದಿತ್ತು. ಆದರೆ, ತಂದೆಯ ನಿರ್ಧಾರಗಳನ್ನು ಅವರೆಂದೂ ಪ್ರಶ್ನಿಸಲಿಲ್ಲ.

ಮಹಾತ್ಮಗಾಂಧಿಯವರು ಇಂಗ್ಲೆಂಡಿನಲ್ಲಿ ಶಿಕ್ಷಣಕ್ಕಾಗಿ ಆಯ್ಕೆ ಮಾಡಿದ್ದ ಛಗನ್ ಲಾಲ್ ಅಲ್ಲಿನ ಹವಾಗುಣಕ್ಕೆ ಹೊಂದಿಕೊಳ್ಳಲಾರದೆ, ಕೇವಲ ಹದಿನೈದು ದಿನಗಳಲ್ಲಿ ವಾಪಸ್ ಭಾರತಕ್ಕೆ ಬಂದ ನಂತರ, ಡಾ. ಪ್ರಂಜೀವನ್ ದಾಸ್ ಮೆಹತಾ ಅವರು ನಿಮ್ಮ ಪುತ್ರರಾದ ಹರಿಲಾಲ್ ಅಥವಾ ಮಣಿಲಾಲ್ ಇವರಲ್ಲಿ ಒಬ್ಬರನ್ನು ಇಂಗ್ಲೆಂಡಿಗೆ ಕಳಿಸಿಕೊಡಿ ಎಂದು ಗಾಂಧೀಜಿಯವರಿಗೆ ಪತ್ರಬರೆದಾಗಲೂ ಸಹ ಗಾಂಧೀಜಿ ಆಹ್ವಾನವನ್ನು ತಿರಸ್ಕರಿಸಿದರು. ಹರಿಲಾಲ್ ಗೆ ತನ್ನ ಬದಲಿಗೆ ಕಿರಿಯ ಸಹೋದರ ಮಣಿಲಾಲ್ ಅವರನ್ನು ಕಳಿಸಿದ್ದರೂ ಸಹ ಖುಷಿ ಪಡುವ ಸ್ಥಿತಿಯಲ್ಲಿದ್ದರು. ಆದರೆ, ಎರಡನೆಯ ಬಾರಿಯು ಸಹ ಗಾಂಧಿಯವರು ತಮ್ಮ ಪುತ್ರರ ಬದಲಾಗಿ ಸೊರಾಬ್ಜಿ ಸಪ್ರುಜಿ ಎಂಬ ಪಾರ್ಸಿ ಸಮುದಾಯದ ವಿದ್ಯಾರ್ಥಿಯನ್ನು ಆಯ್ಕೆ ಮಾಡಿದರು. ಇದು ಅಂತಿಮವಾಗಿ ಹರಿಲಾಲ್ ಗೆ ಕುಟುಂಬ ತೊರೆಯಲು ಪ್ರೇರಣೆಯಾಯಿತು, ನಂತರ ಅದು ತನ್ನ ಪತ್ನಿ ಗರ್ಭಿಣಿ ಪತ್ನಿ ಗುಲಾಬ್‌ಬೆಹನ್ ಜೊತೆ ಭಾರತಕ್ಕೆ ಪ್ರಯಾಣಿಸಲು ನಿರ್ಧರಿಸಿದಾಗ ಅನುಮತಿ ನಿರಾಕರಿಸಿದ ತನ್ನ ತಂದೆ ಬಗ್ಗೆ ಸಿಡಿಮಿಡಿಗೊಂಡಿದ್ದ ಹರಿಲಾಲ್ ಅಂತಿಮವಾಗಿ ತಂದೆಯ ವಿರುದ್ಧ ಸ್ಫೋಟಗೊಳ್ಳಲು ಕಾರಣವಾಯಿತು.

ಹರಿಲಾಲ್‌ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ತನ್ನ ತಂದೆಯ ಮನೆಯನ್ನು ತೊರೆದ ಸಂದರ್ಭದಲ್ಲಿ ಇತ್ತ ಭಾರತದಲ್ಲಿ ಅವರ ಪತ್ನಿ ಗುಲಾಬ್ ಬೆಹನ್ ಗಂಡು ಮಗುವಿಗೆ ಜನ್ಮವಿತ್ತರು. ಈ ಸುದ್ದಿ ತಿಳಿದ ನಂತರ ಹರಿಲಾಲ್‌ರವರು ಭಾರತಕ್ಕೆ ಹಿಂತಿರುಗಲು ಚಡಪಡಿಸಿದರು. ಆದರೆ, ಅವರ ಬಳಿ ಹಣವಿರಲಿಲ್ಲ. ಹರಿಲಾಲ್‌ಗೆ ತನ್ನ ಪತ್ನಿ ಹಾಗೂ ಮಗುವನ್ನು ನೋಡುವುದರ ಜೊತೆಗೆ ಭಾರತಕ್ಕೆ ಹಿಂತಿರುಗಿ ಶಿಕ್ಷಣವನ್ನು ಮುಂದುವರಿಸಿ ತಂದೆಗೆ ತಕ್ಕ ಉತ್ತರ ನೀಡಬೇಕೆಂಬ ಚಡಪಡಿಕೆ ಸಹ ಮನದೊಳಗೆ ಬಲವಾಗಿ ಬೇರೂರಿತ್ತು. ಏಕೆಂದರೆ, ಯಾವ ಕಾರಣಕ್ಕೂ ತಾನು, ಪತ್ನಿ ಮತ್ತು ಮಕ್ಕಳು ತನ್ನ ತಂದೆಯ ಆಶ್ರಯದಲ್ಲಿ ಬದುಕಬಾರದು ಎಂದು ಅವರು ನಿಶ್ಚಯಿಸಿದ್ದರು. ಈ ಹಿಂದೆ ಗಾಂಧೀಜಿಯವರು ಸಾರ್ವಜನಿಕವಾಗಿ ಉಡುಗೊರೆಯಾಗಿ ಪಡೆದಿದ್ದ ಆಭರಣಗಳನ್ನು ವೈಯಕ್ತಿಕವಾಗಿ ಬಳಸಿಕೊಳ್ಳಲು ನಿರಾಕರಿಸಿದ ಸಂದರ್ಭದಲ್ಲಿ ಹರಿಲಾಲ್ ತಂದೆಯ ನಿಲುವನ್ನು ಬೆಂಬಲಿಸಿದ್ದರು ಹಾಗಾಗಿ ದುಡಿದು ಜೀವನ ಮಾಡುವುದು ಶ್ರೇಷ್ಠವಾದ ಕಾಯಕ ಎಂಬುದರಲ್ಲಿ ನಂಬಿಕೆಯಿಟ್ಟುಕೊಂಡಿದ್ದ ಹರಿಲಾಲ್ ಗೆ ಯಾವುದೇ ರೀತಿಯಲ್ಲಿ ತಂದೆಯ ಆಶ್ರಯ ಬೇಡ ಎನಿಸಿತ್ತು. ಕುಟುಂಬದ ಯಾರೊಬ್ಬರಿಗೂ ತಿಳಿಸದೆ ರಹಸ್ಯವಾಗಿ ಭಾರತಕ್ಕೆ ಹಿಂತಿರುಗಲು ಹರಿಲಾಲ್ ನಿರ್ಧರಿಸಿದರು. ಈ ನಿರ್ಧಾರವನ್ನು ಅವರು ಸೆರೆಮನೆವಾಸದಲ್ಲಿದ್ದಾಗ ನಿರ್ಧರಿಸಿದ್ದರು.

ಗಾಂಧೀಜಿಯವರಿಗೆ ಆತ್ಮೀಯರಾಗಿದ್ದ ಜೋಸೆಫ್ ರಾಯಪ್ಪನ್ ಎಂಬುವರ ಜೊತೆ ಮೊದಲ ಬಾರಿಗೆ ಈ ವಿಷಯವನ್ನು ಹರಿಲಾಲ್ ಪ್ರಸ್ತಾಪ ಮಾಡಿದರು. ಜೋಸೆಫ್ ರಾಯಪ್ಪನ್‌ರವರು ದಕ್ಷಿಣ ಆಫ್ರಿಕಾದ ನಟಾಲ್ ನಗರದ ಕಾಲೋನಿಯಲ್ಲಿ ಜನಿಸಿ, ಇಂಗ್ಲೆಂಡ್ ನಲ್ಲಿ ಒಂಬತ್ತು ವರ್ಷಗಳ ಕಾಲ ಉನ್ನತ ವ್ಯಾಸಂಗದಲ್ಲಿ ತೊಡಗಿಕೊಂಡು, ಬ್ಯಾರಿಸ್ಟರ್ ಪದವಿ ಪಡೆದು ತಾಯ್ನಾಡಿಗೆ ಹಿಂತಿರುಗಿದ್ದರು. ದಕ್ಷಿಣ ಆಫ್ರಿಕಾದ ಟ್ರಾನ್ಸ್ ವಾಲ್ ನಗರದಲ್ಲಿ ಗಾಂಧೀಜಿಯವರು ನಡೆಸುತ್ತಿದ್ದ ಸತ್ಯಾಗ್ರಹದಲ್ಲಿ ಸ್ವಯಂ ಪ್ರೇರಿತರಾಗಿ ಪಾಲ್ಗೊಂಡು ಸೆರೆಮನೆ ವಾಸ ಅನುಭವಿಸಿದ್ದರು. ಸತ್ಯಾಗ್ರಹದ ಮೂಲಕ ಜೋಸೆಫ್ ರಾಯಪ್ಪನ್ ಗಾಂಧೀಜಿ ಕುಟುಂಬಕ್ಕೆ ಹತ್ತಿರವಾಗಿದ್ದರು. ಇದಲ್ಲದೆ ಹರಿಲಾಲ್ ಮತ್ತು ರಾಯಪ್ಪನ್ ಒಟ್ಟಿಗೆ ಸೆರೆಮನೆ ವಾಸ ಅನುಭವಿಸಿದ್ದರಿಂದ ಅವರಿಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು.

ಜೋಸೆಫ್ ರಾಯಪ್ಪನ್ ರವರು ೧೯೧೧ ರ ಮೇ ೨೦ ರಂದು ಡರ್ಬಾನ್ ನಗರದಿಂದ ಟ್ರಾನ್ಸ್ ವಾಲ್ ನಗರಕ್ಕೆ ಸತ್ಯಾಗ್ರಹಕ್ಕಾಗಿ ಹೊರಡುವ ಮುನ್ನ, ಹರಿಲಾಲ್ ಅವರನ್ನು ಜೋಹಾನ್ಸ್ ನಗರದಲ್ಲಿ ಭೇಟಿ ಮಾಡಿ ಈ ವಿಷಯ ತಿಳಿಸಿದ್ದರು. ಸಾಧ್ಯವಾದರೆ, ತನ್ನ ನಿರ್ಧಾರವನ್ನು ತನ್ನ ತಂದೆಯವರಿಗೆ ತಿಳಿಸುವಂತೆ ವಿನಂತಿಸಿಕೊಂಡರು. ಈ ಘಟನೆಗಳು ಜರುಗುವ ಮುನ್ನವೇ ಹರಿಲಾಲ್ ಅವರು ೧೯೧೧ ಮೇ ೮ ರಂದು ತನಗೆ ಸಂಬಂಧಿಸಿದ ವಸ್ತುಗಳನ್ನು ಕಲೆ ಹಾಕಿಕೊಂಡು ಹೊರಡಲು ಅಣಿಯಾಗಿದ್ದರು. ಅವರು ಸಂಗ್ರಹಿಸಿಕೊಂಡಿದ್ದ ಕೆಲವು ಪುಸ್ತಕಗಳು ಮತ್ತು ವಸ್ತುಗಳ ಜೊತೆ ತನ್ನ ತಂದೆಯ ಭಾವ ಚಿತ್ರವೂ ಇದ್ದುದ್ದು ವಿಶೇಷವಾಗಿತ್ತು. ಮನೆಯನ್ನು ತೊರೆಯುವ ಮುನ್ನ ಗಾಂಧೀಜಿಯವರಿಗೆ ಹರಿಲಾಲ್ ಪತ್ರವೊಂದನ್ನು ಬರೆದಿಟ್ಟರು. ಆ ಪತ್ರವನ್ನು ಗಾಂಧೀಜಿಯವರು ಓದಿದಾಗ ನೊಂದುಕೊಂಡ ಅವರ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಹರಿಲಾಲ್ ತನ್ನ ಪತ್ರದಲ್ಲಿ ತನ್ನ ನಿರ್ಧಾರಕ್ಕೆ ತಾನು ಓದಿಕೊಂಡ "ಸರಸ್ವತಿ ಚಂದ್ರ" ಎಂಬ ಕಾದಂಬರಿ ಮೂಲ ಪ್ರೇರಣೆಯಾಯಿತು ಎಂದು ದಾಖಲಿಸಿದ್ದರು. (ಗುಜರಾತಿ ಭಾಷೆಯ ಗೋವರ್ಧನ್ ಮಹಾವರ್ಮ ತ್ರಿಪಾಠಿ ಎಂಬುವರ ಕಾದಂಬರಿ) ಹರಿಲಾಲ್ ಮನೆ ತೊರೆದ ವಿಷಯ ತಿಳಿದ ನಂತರ ಸುರೇಂದ್ರ ಮೇಧ್ ಮತ್ತು ಪ್ರಾಗ್ಜಿ ಎಂಬುವರು ಜೋಹಾನ್ಸ್ ನಗರಕ್ಕೆ ತೆರಳಿ ಹರಿಲಾಲ್ ಗಾಗಿ ಹುಡುಕಾಟ ನಡೆಸಿದರು. ಆದರೆ, ಹರಿಲಾಲ್ ತನಗೆ ಪರಿಚಯವಿದ್ದ ಮಿತ್ರರಿಂದ ಇಪ್ಪತ್ತು ಪೌಂಡ್ ಹಣವನ್ನು ಸಾಲವಾಗಿ ಪಡೆದು ಅಲ್ಲಿಂದ ಕಾಣೆಯಾಗಿದ್ದರು.

ಗಾಂಧಿಯವರ ಪುತ್ರ ಹರಿಲಾಲ್ ಮನೆ ತೊರೆದು ಹೋಗಿದ್ದಾನೆ ಎಂಬ ಸುದ್ದಿಯು ದಕ್ಷಿಣ ಆಫ್ರಿಕಾದಲ್ಲಿದ್ದ ಭಾರತೀಯ ನಿವಾಸಿಗಳ ನಡುವೆ ಕಾಡ್ಗಿಚ್ಚಿನಂತೆ ಹರಡಿತು. ಅನೇಕ ಮುಸ್ಲಿಂ ಸಮುದಾಯದ ಭಾರತೀಯ ವ್ಯಾಪಾರಿಗಳು ಗಾಂಧಿ ಕುಟುಂಬದ ನೆರವಿಗೆ ಆಗಮಿಸಿದರು. ಕೆಲವರು "ನೀವು ನಿಮ್ಮ ಪುತ್ರನನ್ನು ಇಂಗ್ಲೆಂಡಿಗೆ ಕಳಿಸಬೇಕಿತ್ತು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅಸಹಾಯಕರಂತಿದ್ದ ಗಾಂಧೀಜಿಯವರು ತಮ್ಮ ಸೋದರ ಸಂಬಂಧಿ ಮಗನ್ ಲಾಲ್ ರವರಿಗೆ ಖಾಸಗಿಯಾಗಿ ಪತ್ರ ಬರೆದು " ಹರಿಲಾಲ್ ದುಡುಕುವುದರ ಮೂಲಕ ಅತಿರೇಕದ ನಿರ್ಧಾರ ತೆಗೆದುಕೊಂಡಿದ್ದಾನೆ. ಇದರಲ್ಲಿ ಅವನದು ತಪ್ಪಿಲ್ಲ. ಅವನ ನಿರ್ಧಾರದ ಹಿಂದೆ ನನ್ನ ಹೊಣೆಗೇಡಿತನದ ನಡುವಳಿಕೆಯಿದೆ" ಎಂದು ತಮ್ಮ ಪಶ್ಚಾತ್ತಾಪದ ಭಾವನೆಯನ್ನು ಹೊರಹಾಕಿದರು. ಅದೇ ದಿನ ಅಂದರೆ, ಮೇ ೮ ರಂದು ಗಾಂಧೀಜಿಯವರು ತಮ್ಮ ಜೋಹಾನ್ಸ್ ಬರ್ಗ್ ಕಚೇರಿಯಿಂದ ಹೊರಟು ಟಾಲ್ಸ್ ಟಾಯ್ ಫಾರಂ ತಲುಪಿದರು. ಅಲ್ಲಿನ ಸಹವರ್ತಿಗಳ ಜೊತೆ ಮಾತನಾಡುತ್ತಾ, ಹರಿಲಾಲ್ ಮನೆ ತ್ಯಜಿಸಿರುವ ವಿಷಯವನ್ನು ಕಸ್ತೂರಬಾ ಅವರಿಗೆ ತಿಳಿಸದೆ ರಹಸ್ಯವಾಗಿಡುವಂತೆ ಮನವಿ ಮಾಡಿಕೊಂಡರು. ಮುಂದಿನ

ದಿನಗಳಲ್ಲಿ ಸಂದರ್ಭವನ್ನು ನೋಡಿ ನಾನು ನನ್ನದೇ ಆದ ಮಾರ್ಗದಲ್ಲಿ ಆಕೆಗೆ ವಿಷಯ ಮುಟ್ಟಿಸುತ್ತೀನಿ ಎಂದು ನುಡಿದರು.

ಇತ್ತ ಹರಿಲಾಲ್ ಜೋಹಾನ್ಸ್ ಬರ್ಗ್‌ನಗರದಿಂದ ರೈಲಿನಲ್ಲಿ ಹೊರಟು ದಕ್ಷಿಣ ಆಫ್ರಿಕಾದ ಪಶ್ಚಿಮ ಕರಾವಳಿಯಲ್ಲಿದ್ದ ಪೋರ್ಚುಗೀಸರ ವಸಾಹಿತು ಪ್ರದೇಶ ಹಾಗೂ ಬಂದರು ನಗರವಾದ ಲೌರೆಂಕೊ ಮಾರ್ಕ್ವೆಸ್ ಎಂಬಲ್ಲಿಗೆ ಬಂದಿಳಿದರು. (ಈ ನಗರಕ್ಕೆ ಡೆಲಾಣ್ ಬೇ ಎಂದು ಸಹ ಕರೆಯಲಾಗುತ್ತದೆ.) ತಾನು ಗಾಂಧೀಜಿ ಪುತ್ರನೆಂದು ಎಲ್ಲಿಯೂ ತೋರಿಸಿಕೊಳ್ಳಲು ಇಚ್ಛಿಸಿದೆ ತಮ್ಮ ಹೆಸರನ್ನು ಬದಲಾಯಿಸಿಕೊಂಡರು. ನಂತರ ಅಲ್ಲಿನ ಇಂಗೆಂಡ್ ರಾಯಭಾರಿ ಕಚೇರಿಗೆ ತೆರಳಿ ತಾನೊಬ್ಬ ಭಾರತೀಯ ನಿರಾಶ್ರಿತನೆಂದು ಹೇಳಿಕೊಂಡು ಭಾರತಕ್ಕೆ ಹಿಂತಿರುಗಲು ಸಹಾಯ ಮಾಡಬೇಕೆಂದು ಮನವಿ ಮಾಡಿಕೊಂಡರು. ಆದರೆ, ಅಲ್ಲಿನ ಅಧಿಕಾರಿಗಳು ಈತ ಗಾಂಧೀಜಿಯವರ ಪುತ್ರನೆಂಬುದನ್ನು ಗುರುತಿಸಿ, ಹರಿಲಾಲ್ ಗೆ ತಾತ್ಕಾಲಿಕ ಆಶ್ರಯವನ್ನು ನೀಡುವುದರ ಜೊತೆಗೆ ಗಾಂಧೀಜಿಯವರಿಗೆ ಈ ವಿಷಯವನ್ನು ಮುಟ್ಟಿಸಿದರು. ಗಾಂಧೀಜಿಯವರ ಮಿತ್ರ ಕಲ್ಲೆನ್‌ಬಚ್ ಹರಿಲಾಲ್ ನನ್ನು ಕರೆದುಕೊಂಡು ಬರಲು ಸಿದ್ಧರಾದಾಗ ಅವರನ್ನು ಗಾಂಧಿ ತಡೆ ಹಿಡಿದರು. ನಂತರ ತನ್ನ ಪುತ್ರನಿಗೆ ಎರಡು ಟೆಲಿಗ್ರಾಂ ಸಂದೇಶಗಳನ್ನು ಕಳಿಸಿ ವಾಪಸ್ ಬರುವಂತೆ ವಿನಂತಿಸಿಕೊಂಡರು. ತಂದೆಯ ಕರೆಗೆ ಓಗೊಟ್ಟು ಹರಿಲಾಲ್ ವಾಪಸ್ ಜೋಹಾನ್ಸ್ ನಗರಕ್ಕೆ ಹಿಂತಿರುಗಿದರು. ೧೯೧೧ ರ ಮೇ ೧೫ ರಂದು ವಾಪಸ್ ಬಂದ ಹರಿಲಾಲ್ ಹಾಗೂ ಗಾಂಧೀಜಿ ನಡುವೆ ಎರಡು ದಿನಗಳ ಕಾಲ ಸತತ ಮಾತುಕತೆಗಳು ಸುಧೀರ್ಘವಾಗಿ ನಡೆದವು. (ಈ ವಿಷಯವನ್ನು ಗಾಂಧೀಜಿಯವರು ಮಗನ್ ಲಾಲ್ ರವರಿಗೆ ಬರೆದಿರುವ ಪತ್ರದಲ್ಲಿ ಸವಿವರವಾಗಿ ದಾಖಲಿಸಿದ್ದಾರೆ)

ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸದೆ, ಅವರನ್ನು ಗುಲಾಮರಂತೆ ಬೆಳೆಸುವ ಗಾಂಧೀಜಿಯವ ನಿಲುವನ್ನು ಕಟುವಾಗಿ ಟೀಕಿಸಿದ ಹರಿಲಾಲ್, "ನಿಮ್ಮ ಮಕ್ಕಳ ಅಭಿಲಾಷೆ ಏನು ಎಂಬುದನ್ನು ಕೇಳಿ ತಿಳಿದುಕೊಳ್ಳಲಾದಷ್ಟು ಸ್ಥಿತಿಯಲ್ಲಿರುವ ನೀವು ನನ್ನ ದೃಷ್ಟಿಯಲ್ಲಿ ಓರ್ವ ಸರ್ವಾಧಿಕಾರಿ" ಎಂದು ತರಾಟೆಗೆ ತೆಗೆದುಕೊಂಡರು. ಗಾಂಧೀಜಿಯವರು ತಮ್ಮ ಪುತ್ರನ ಕೋಪ ತಾಪಗಳನ್ನು ಸಹಿಸಿಕೊಂಡು ಸಂತೈಸಲು ಪ್ರಯತ್ನಿಸಿದರು. ಅಂತಿಮವಾಗಿ ವಿಫಲರಾದ ಅವರು, ಮೇ ೧೬ ರಂದು ಹರಿಲಾಲ್ ಜೊತೆ ಉಪಹಾರ ಸೇವಿಸಿ, ನಾಳೆ ಬೆಳಿಗ್ಗೆ ಹರಿಲಾಲ್ ಭಾರತಕ್ಕೆ ಹೊರಡುತ್ತಾನೆ ಎಂದು ಘೋಷಿಸಿದರು. ಮೇ ೧೭ ರಂದು ಜೋಹಾನ್ಸ್ ಬರ್ಗ್ ನಗರದಿಂದ ಪುತ್ರನನ್ನು ಬೀಳ್ಕೊಡುವಾಗ ತುಂಬಾ ಭಾವುಕರಾಗಿದ್ದ ಗಾಂಧೀಜಿಯವರು ರೈಲು ನಿಲ್ದಾಣದಲ್ಲಿ ರೈಲು ಹೊರಡುವ ಮುನ್ನ ಹರಿಲಾಲ್ ನ ಕೈ ಗಳನ್ನು ಹಿಡಿದುಕೊಂಡು ಗದ್ಗದಿತರಾಗಿ "ನಿನ್ನ ತಂದೆ ತಪ್ಪು ಎಸಗಿದ್ದಾನೆ ಎಂಬುವುದು ನಿನ್ನ ಭಾವನೆಯಾಗಿದ್ದರೆ, ಈ ಅಸಹಾಯಕ ತಂದೆಯನ್ನು ಕ್ಷಮಿಸಿಬಿಡು" ಎಂದು ನುಡಿದರು. ಈ ಮಾತುಗಳು ಅವರ ಬಾಯಿಂದ ಹೊರ ಬರುತ್ತಿದ್ದಂತೆ ಅವರು ತಡೆ ಹಿಡಿದಿದ್ದ ಕಣ್ಣೀರು ಅವರ ಕೆನ್ನೆಗಳ ಮೇಲೆ ಪ್ರವಾಹದ ರೀತಿಯಲ್ಲಿ ಹರಿಯತೊಡಗಿತು. ಅಲ್ಲಿ ನೆರೆದಿದ್ದ ಗಾಂಧೀಜಿಯವರ ಸಹವರ್ತಿಗಳು ಅಪ್ಪ-ಮಗನ ವಿದಾಯದ ಕ್ಷಣಕ್ಕೆ ಸಾಕ್ಷಿಯಾಗುತ್ತಾ ಮೌನಕ್ಕೆ ಶರಣಾಗುವುದರ ಮೂಲಕ ಕಣ್ಣೀರು ಹಾಕುತ್ತಾ ಮೂಕ ಪ್ರಾಣಿಗಳಂತೆ ನಿಂತಿದ್ದರು.

ಹರಿಲಾಲ್ ಗೆ ಭಾರತಕ್ಕೆ ಹಿಂತಿರುಗುವ ಪ್ರಯಾಣದ ವೆಚ್ಚದ ಜೊತೆಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಹಿಂತಿರುಗಿ ಬರುವ ತನಕ ನಾಲ್ಕು ವರ್ಷಗಳ ಕಾಲ (೧೯೧೧ ರಿಮದ ೧೯೧೫ ರವರೆಗೆ) ಶಿಕ್ಷಣ ವೆಚ್ಚವನ್ನು ಭರಿಸಿದರು. ತನ್ನ ಪುತ್ರ ಹರಿಲಾಲ್ ಕುಟುಂಬದಿಂದ ಸಿಡಿದು

ದೂರ ಹೋದ ನಂತರ ಗಾಂಧೀಜಿಯವರ ಮನದಲ್ಲಿ ಅಲ್ಲೋಲ ಕಲ್ಲೋಲವೇರ್ಪಟ್ಟಿತು. ತಮ್ಮ ನಿಲುವುಗಳು ಹಾಗೂ ನಿರ್ಧಾರಗಳನ್ನು ಮರು ವಿಮರ್ಶೆಗೆ ಒಳಪಡಿಸಿದರು. ಅವರ ಆತ್ಮಸಾಕ್ಷಿಗೆ ಅವುಗಳು ಕಠಿಣವೆನಿಸಿದರೂ ಸಹ ಸರಿಯಾದ ನಿರ್ಧಾರ ಎನಿಸಿದ ನಂತರ ನಿರುಮ್ಮಳರಾದರು. ಈ ಕುರಿತು ತನ್ನ ಸಂಬಂಧಿ ಮಗಲ್ ಲಾಲ್‌ಗೆ ಒಂದು ಸುಧೀರ್ಘ ಪತ್ರ ಬರೆದು ಎದೆಯ ಭಾರವನ್ನು ಇಳಿಸಿಕೊಂಡರು.

(ಮುಂದುವರಿಯುವುದು)

ಹರಿಲಾಲ್ ಗಾಂಧೀ ಜೀವನ ಕಥನ
ಮೂಲ : ಚಂದೂಲಾಲ್ ಜೈನ್; ಕನ್ನಡಕ್ಕೆ : ಜಗದೀಶ ಕೊಪ್ಪ

ಸ್ವಾತಂತ್ರ್ಯ ಎಂಬ ಪರಿಕಲ್ಪನೆ

ಆಂಗ್ಲ ಕಾದಂಬರಿಕಾರ ಸಾಮರ್‌ಸೆಟ್ ಮಾಮ್ 'ಪ್ರಿನ್ಸೆಸ್ ಸೆಪ್ಟೆಂಬರ್' ಎಂಬ ಸೊಗಸಾದ ಕಥೆಯೊಂದನ್ನು ಬರೆದಿದ್ದಾನೆ. ಆ ಕಥೆಯಲ್ಲಿರುವುದು ನೈಟಿಂಗೇಲ್ ಎಂಬ ಹಾಡುಹಕ್ಕಿಯ ಪ್ರಸಂಗ. ಪುಟ್ಟ ರಾಜಕುಮಾರಿ ಸೆಪ್ಟೆಂಬರ್ ದುಃಖಿತಳಾಗಿದ್ದ ಸಂದರ್ಭದಲ್ಲಿ ಎಲ್ಲಿಂದಲೋ ಹಾರಿಬಂದ ಈ ಪಕ್ಷಿ ತನ್ನ ಮಧುರಗಾನದಿಂದ ರಾಜಕುಮಾರಿಯನ್ನು ಸಂತೈಸುತ್ತದೆ. ಅಂಥ ಪಕ್ಷಿ ತನ್ನಿಂದ ದೂರವಾದೀತೆಂಬ ಭೀತಿಯಿಂದ ರಾಜಕುಮಾರಿ ಅದನ್ನು ಚಿನ್ನದ ಪಂಜರದಲ್ಲಿರಿಸುತ್ತಾಳೆ ಸ್ವಚ್ಛಂದವಾಗಿ ಹಾರುವ ಅವಕಾಶವನ್ನು ಕಳೆದುಕೊಂಡ ನೈಟಿಂಗೇಲ್ ಪಕ್ಷಿ ಹಾಡುವ ಶಕ್ತಿಯನ್ನು ಕಳೆದುಕೊಂಡು ಸಾಯುವಂತಾಗುತ್ತದೆ. "ಸ್ವಾತಂತ್ರ್ಯವಿಲ್ಲದೆ ನಾನು ಹಾಡಲಾರೆ, ಹಾಡದೆ ನಾನು ಬದುಕಲಾರೆ" ಎಂದು ಅದು ಬಿಡುಗಡೆಗಾಗಿ ಮೊರೆಯಿಡುತ್ತದೆ. ರಾಜಕುಮಾರಿ ಅದನ್ನು ಬಿಡುಗಡೆ ಮಾಡಿದಾಗ ಆ ಪಕ್ಷಿ ಹಾಡುವ ಶಕ್ತಿಯನ್ನು ಮರಳಿಪಡೆಯುತ್ತದೆ.

ಈ ಕಥೆ ಸ್ವಾತಂತ್ರ್ಯದ ಮಹತ್ವವನ್ನು ಅತ್ಯಂತ ಸಮರ್ಥವಾಗಿ ಧ್ವನಿಸುತ್ತದೆ. 'ಸ್ವಾತಂತ್ರ್ಯ' ಎಂಬುದೊಂದು ಅಮೂರ್ತವಾದ ಪರಿಕಲ್ಪನೆ ಎಂಬುದೇನೋ ನಿಜ. ಆದರೆ ಸ್ಪಷ್ಟವಾಗಿಯೋ ಅಸ್ಪಷ್ಟವಾಗಿಯೋ ಎಲ್ಲ ಜೀವಿಗಳಲ್ಲಿಯೂ ಸ್ವಾತಂತ್ರ್ಯದ ಹಂಬಲ, ಅದನ್ನು ಅನುಭವಿಸಬೇಕೆಂಬ ತೀವ್ರ ತುಡಿತ ಇದ್ದೇ ಇರುತ್ತದೆ. ಕಾಡಿನಲ್ಲಿ ತಮ್ಮ ಪಾಡಿಗೆ ತಾವಿದ್ದ ಪ್ರಾಣಿಗಳನ್ನು ಹಿಡಿದು ಬೋನಿನಲ್ಲಿ ಕೂಡಿಹಾಕಿದಾಗ ಅವು ಆರ್ಭಟಿಸುತ್ತವೆ; ಉದ್ರಿಕ್ತಗೊಳ್ಳುತ್ತವೆ. ಒಂದು ಚಿಕ್ಕಮಗುವನ್ನು ಕೈಕಾಲು ಆಡಿಸದಂತೆ ಹಿಡಿದುಕೊಂಡರೆ, ಅದು ಕೋಪದಿಂದ ಕಿರುಚುತ್ತದೆ. ಒಟ್ಟಿನಲ್ಲಿ ಸ್ವಾತಂತ್ರ್ಯವೆಂಬುದು ಎಲ್ಲ ಬದುಕಿನ ವಿಕಾಸ ಹಾಗೂ ಉತ್ಕರ್ಷದ ಮೂಲಸ್ರೋತ.

'ಸ್ವಾತಂತ್ರ್ಯ' ಎಂಬುದು ಸಂಸ್ಕೃತ ಪದ. ಮನುಷ್ಯಲೋಕದ ಸಂದರ್ಭದಲ್ಲಿ ಈ ಪದವನ್ನು ಸ್ಥೂಲವಾಗಿ ಹೀಗೆಂದು ವಿವರಿಸಬಹುದು: ಒಬ್ಬ ಮನುಷ್ಯ ತನ್ನನ್ನು ತಾನೇ ಆಳಿಕೊಳ್ಳುವ, ತನ್ನ ಕೆಲಸಗಳನ್ನು ತಾನೇ ನಿರ್ವಹಿಸುವ, ತನ್ನನ್ನು ತಾನು ಸರಿಯಾಗಿಸಿಕೊಳ್ಳುವ ಸ್ಥಿತಿಯೇ 'ಸ್ವಾತಂತ್ರ್ಯ'. ಈ ಪದಕ್ಕೆ ಆಂಗ್ಲಭಾಷೆಯಲ್ಲಿ freedom, liberty ಮತ್ತು independence ಎಂಬ ಮೂರು ಪದಗಳನ್ನು ಸಮನಾರ್ಥಕವೆಂಬಂತೆ ಬಳಸುತ್ತೇವೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ

ಅವುಗಳ ಅರ್ಥದಲ್ಲಿ ಸ್ವಲ್ಪ ಅಂತರವಿರುವುದು ಕಂಡೀತು. Freedom ಎಂದರೆ ಅಡ್ಡಿ ಅಡಚಣೆಗಳಿಲ್ಲದಿರುವ ಸ್ಥಿತಿ; liberty ಎಂದರೆ ಬಂಧನದಿಂದ ಬಿಡುಗಡೆ: independence ಎಂದರೆ ಪರಾವಲಂಬನವಿಲ್ಲದಿರುವ ಸ್ಥಿತಿ.

ಇಂಗ್ಲೀಷಿನ ಈ ಮೂರು ಪದಗಳ ಎಲ್ಲ ಅರ್ಥಸ್ತರಗಳೂ 'ಸ್ವಾತಂತ್ರ್ಯ' ಎಂಬ ಪದದಲ್ಲಿ ಅಂತರ್ಗತವಾಗಿವೆ; ಮಾತ್ರವಲ್ಲ, 'ಸ್ವಾತಂತ್ರ್ಯ' ಎಂಬ ಪದದಲ್ಲಿ ಅದರ ಇಂಗ್ಲೀಷ್ ಸಮನಾರ್ಥಕ ಪದಗಳಿಗಿಂತ ಅರ್ಥಪುಷ್ಟಿ ಹೆಚ್ಚಾಗಿದೆ. 'ಸ್ವ-ತಂತ್ರ' ಎಂದರೆ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವುದು; ಆಳಿಕೊಳ್ಳಲು ಶಕ್ತನಾಗುವುದು. ಸ್ವಾತಂತ್ರ್ಯದಿಂದ ನಮ್ಮ ಮೇಲಿರುವ ಹೊರಕಟ್ಟುಗಳು ಕಳಚುತ್ತವೆ. ಆದರೆ ಅವುಗಳ ಜಾಗದಲ್ಲಿ ನಮಗೆ ನಾವೇ ಒಳಕಟ್ಟುಗಳನ್ನು ಹಾಕಿಕೊಳ್ಳಬೇಕಾಗುದುದು ಅನಿವಾರ್ಯವಾಗುತ್ತದೆ. "ನಮ್ಮ ಯೋಗಕ್ಷೇಮ ವಿಚಾರಗಳಲ್ಲಿ ಇನ್ನೊಬ್ಬರ ಅಧಿಕಾರ ಹೋಗಿ, ನಮ್ಮ ಸ್ವಂತದ ಅಧಿಕಾರ ನಮ್ಮ ಮೇಲೆ ಬರಬೇಕು. ನಮ್ಮ ಇಷ್ಟಾನುಕೂಲತೆಯ ಯೋಚನೆಯ ಜೊತೆಗೆ ನಮ್ಮ ಕರ್ತವ್ಯದ ಸ್ಮರಣೆ ಸೇರಿರಬೇಕು. ಅದೇ ಸ್ವಾತಂತ್ರ್ಯ" ಎಂದು ಸ್ವಾತಂತ್ರ್ಯದ ವ್ಯಾಪ್ತಿಯನ್ನು ಡಿ.ವಿ.ಜಿ ವರ್ಣಿಸಿದ್ದಾರೆ.

ಸ್ವಾತಂತ್ರ್ಯ ಎಂಬ ನಾಣ್ಯಕ್ಕೆ ಎರಡು ಮುಖಗಳಿವೆ. ಒಂದು ಮುಖ ಹಕ್ಕು (right): ಇನ್ನೊಂದು ಕರ್ತವ್ಯ (duty). ಒಬ್ಬ ವ್ಯಕ್ತಿಗೆ ನ್ಯಾಯವಾಗಿ ಪ್ರಾಪ್ತವಾಗಬೇಕಾದುದು ಅಥವಾ ಸಲ್ಲಬೇಕಾದುದು ಹಕ್ಕು. ಆತ ಸಮಾಜಕ್ಕೆ, ದೇಶಕ್ಕೆ ಅಥವಾ ಪ್ರಪಂಚಕ್ಕೆ ನ್ಯಾಯವಾಗಿ ಸಲ್ಲಿಸಬೇಕಾದುದು ಕರ್ತವ್ಯ. ಆ ಪ್ರಜ್ಞೆಯಿಲ್ಲದ ಆತ್ಮಕೇಂದ್ರಿತ ವ್ಯಕ್ತಿಯಿಂದ ಸಮಾಜ ಹಿಂಸೆಯನ್ನು ಅನುಭವಿಸುತ್ತದೆ. ನನ್ನ ಪಾಲಿನ ಸ್ವಾತಂತ್ರ್ಯ ನನ್ನ ನೆರೆಯಾತನ ಸ್ವಾತಂತ್ರ್ಯಕ್ಕೆ ಧಕ್ಕೆ ತಂದರೆ, ಸ್ವಾತಂತ್ರ್ಯವೆಂಬುದು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಸ್ವಾತಂತ್ರ್ಯದ ನಿಜವಾದ ಅರ್ಥದಲ್ಲಿ ವ್ಯಷ್ಟಿಯ ಹಿತ, ಸಮಷ್ಟಿಯ ಹಿತ-ಎರಡೂ ಸೇರಿಕೊಂಡಿವೆ.

ಮುಖ್ಯವಾದ ಮಾತೆಂದರೆ, ಸ್ವಾತಂತ್ರ್ಯವೆಂದರೆ ನಿರಂಕುಶ ಸ್ಥಿತಿಯಲ್ಲ: ಸ್ವೇಚ್ಛಾಚಾರ ಸಾಧನವಲ್ಲ: ಧರ್ಮ ನ್ಯಾಯಗಳ ಚೌಕಟ್ಟನ್ನು ಮೀರಿದ ಸ್ಥಿತಿಯಲ್ಲ. ಧರ್ಮ ನ್ಯಾಯಗಳಿಂದ ಕೂಡಿದ ಸ್ವಾತಂತ್ರ್ಯ ಮನೆಯನ್ನು ಬೆಚ್ಚಗಿಡುವ ಅಗ್ಗಿಷ್ಟಿಕೆಯಂತೆ: ಅದಿಲ್ಲದ ಸ್ವಾತಂತ್ರ್ಯ ಮನೆಯನ್ನು ಸುಡುವ ಬೆಂಕಿಯಂತೆ.

-ವೈನತೇಯ

ಉತ್ಸಾಹವಿಲ್ಲದ ಸ್ವಾತಂತ್ರ್ಯೋತ್ಸವ

ಮತ್ತೊಂದು ಸ್ವಾತಂತ್ರ್ಯ ದಿನಾಚರಣೆ ಬಂದಿದೆ. ಆದರೆ ಅದಕ್ಕಿರಬೇಕಾದ ಸಂಭ್ರಮ ಎಲ್ಲೂ ಕಾಣುತ್ತಿಲ್ಲ. ನಮ್ಮ ಹಳ್ಳಿಯಿಂದ ದೆಹಲಿವರಗೆ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಎಲ್ಲ ಕಾರ್ಯಕ್ರಮಗಳು ಉತ್ಸಾಹವಿಲ್ಲದ ಆದರೆ ಅನಿವಾರ್ಯವಾಗಿ ಆಚರಿಸಲೇ ಬೇಕಾದ ಕಾರ್ಯಕ್ರಮಗಳಾಗುತ್ತಿವೆ. ಎಲ್ಲ ಊರುಗಳಲ್ಲೂ ನಡೆಯುವ ಸ್ವಾತಂತ್ರ್ಯ ಕಾರ್ಯಕ್ರಮ ಕೇವಲ ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಅವರ ಹಿಂಬಾಲಕರು ಭಾಗವಹಿಸುವ ಕಾರ್ಯಕ್ರಮಗಳಾಗಿವೆ.

ಜನರು ಈ ಕಾರ್ಯಕ್ರಮಗಳಲ್ಲಿ ಏಕೆ ಭಾಗವಹಿಸುವುದಿಲ್ಲ ಎಂಬುದಕ್ಕೆ ಸ್ಪಷ್ಟ ಕಾರಣಗಳು ಕಾಣದಿದ್ದರೂ ಈ ರೀತಿಯ ಕಾರ್ಯಕ್ರಮಗಳು ನಾವೆಲ್ಲರೂ ಒಂದೆ ಎಂಬ ಭಾವ ತುಂಬಲು ಅನೇಕ ಕಾರಣಗಳಿಂದ ಸೋತಿವೆ. ಸ್ವಾತಂತ್ರ್ಯ ಬಂದ ಮೇಲೆ ಮೊದಲಿನ ಕೆಲವು ವರ್ಷ ಇದ್ದ ಉತ್ಸಾಹ ನಿಧಾನಗತಿಯಲ್ಲಿ ಕಡಿಮೆಯಾಗತೊಡಗಿದೆ. ನಮ್ಮೆಲ್ಲರನ್ನು ಹಿಡಿದಿಡಬಲ್ಲ ಯಾವುದೇ ಒಂದೇ ಒಂದು ಭಾವನಾತ್ಮಕ ವಿಚಾರವೂ ವರ್ತಮಾನದಲ್ಲಿ ಕಾಣಬರುತ್ತಿಲ್ಲ. ನಮ್ಮ ಸ್ವಂತಿಕೆಯ ಯಾವ ವಿಚಾರವೂ ನಮಗೆ ಹೊಳೆಯುತ್ತಿಲ್ಲ.

ಕೆಂಪು ಕೋಟೆಯ ಮೇಲಿನಿಂದ ನಮ್ಮ ಹಿಂದಿನ ನಾಯಕರುಗಳು ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣಗಳಲ್ಲಿ ನಮ್ಮೆಲ್ಲ ಸಮಸ್ಯೆಗಳ ನಡುವೆಯೂ, ದೇಶದ ಜನರ ಮನಸ್ಸಿನಲ್ಲಿ ನಾವು ಕಟ್ಟ ಬೇಕಾದ ಹೊಸ ರಾಷ್ಟ್ರ ಒಂದರ ಕನಸನ್ನು ಬಿತ್ತುವ ಮಾತುಗಳಾದರೂ ಇತ್ತು. ಇಂದು ಆ ರೀತಿಯ ಕನಸನ್ನು ಬಿತ್ತುವ, ಆದರ್ಶಗಳನ್ನು ತೋರಿಸುವ ವ್ಯಕ್ತಿತ್ವಗಳೇ ನಮಗೆ ಕಾಣದಂತಾಗಿದೆ. ದೇಶದ ಯುವ ಜನರ ಹೊಸ ಆದರ್ಶಗಳೊಂದಿಗೆ ಹೆಜ್ಜೆ ಇಡಲು ಪ್ರೇರೇಪಿಸ ಬೇಕಾದವರು ನಮ್ಮ ನಾಯಕರು. ದುರಂತವೆಂದರೆ ಇಡೀ ದೇಶವನ್ನು ಹುಡುಕಿದರೂ ಈ ದೇಶದ ಅಸಲೀ ಮೌಲ್ಯಗಳು ಮತ್ತು ಪರಂಪರೆಯ ಹಿನ್ನೆಲೆಯಲ್ಲಿ ಹೊಸ ತಲೆಮಾರಿಗೆ ದಿಕ್ಕು ತೋರಬಲ್ಲ ಒಬ್ಬನೇ ಒಬ್ಬ ನಾಯಕನೂ ಕಾಣಬರದಿರುವುದು ಶೋಚನೀಯ. ಒಂದು ದೇಶ ಮತ್ತೊಂದು ದೇಶವನ್ನು ಹಿಡಿದು ಕೊಳ್ಳಲು ಪ್ರಯತ್ನಿಸುವುದೇ ಸಂಪನ್ಮೂಲಗಳನ್ನು ಕಬಳಿಸಲು ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ದೇಶಗಳನ್ನು ಆಕ್ರಮಿಸುವುದು, ದೇಶದ ಎಲ್ಲೆಗಳನ್ನು ಆಕ್ರಮಿಸುವುದು ಹಳೆಯ ತಂತ್ರವಾಗಿದೆ. ದೇಶವನ್ನು ಭೌತಿಕವಾಗಿ ಆಕ್ರಮಿಸದೆಯೇ ಆ ದೇಶದ ಸಂಪತ್ತೆಲ್ಲವನ್ನು ತನ್ನದಾಗಿಸಿಕೊಳ್ಳುವ ಹೊಸ ತಂತ್ರಗಳು ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಲದಿಂದ ಮುಂದುವರೆದ ರಾಷ್ಟ್ರಗಳಿಗೆ ಲಭ್ಯವಾಗಿದೆ. ಈ ಕಾಲಘಟ್ಟದಲ್ಲಿ ನಮ್ಮ ಗಡಿಗಳನ್ನೇ ಕೇಂದ್ರವಾಗಿಟ್ಟುಕೊಂಡು ದೇಶವನ್ನು ಕಲ್ಪಿಸಿಕೊಳ್ಳುವುದು ತನ್ನ ಅರ್ಥವನ್ನು ಕಳೆದು ಕೊಳ್ಳುತ್ತಿದೆ. ಬಂಡವಾಳ ಮತ್ತು ಸಂಪನ್ಮೂಲಗಳೆ ಇಂದು ಜಾಗತಿಕ ರಾಜಕೀಯದ ಆಧಾರ ಸ್ತಂಭವಾಗಿವೆ. ಅವು ನಮ್ಮ ಅರಿವಿಗೆ ಬಾರದೆ ದೇಶದ ಎಲ್ಲೆಗಳನ್ನಷ್ಟೇ ಕಲ್ಪಿಸಿಕೊಂಡು ದೇಶಾಭಿಮಾನ ಮೆರೆಯುತ್ತಾ ಕುಳಿತರೆ ಅದು ಬಾಲಿಶವಾಗಿ ತೋರುತ್ತದೆ.

ದೇಶವನ್ನು ಒಗ್ಗೂಡಿಸಿ ಇಡಲು ನಮ್ಮೆಲ್ಲರ ಕನಸುಗಳು ಒಂದಕ್ಕೊಂದು ಪೂರಕವಾಗಬೇಕು. ಆದರೆ ನಾವೆಲ್ಲರೂ ಒಂದು ಎಂದು ಕೊಳ್ಳುತ್ತಿರುವುದು ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು

ನೋಡುವಾಗ, ಕಾರ್ಗಿಲ್ ಯುದ್ಧದ ನೆನಪಿನ ದಿನವನ್ನು ಆಚರಿಸುವಾಗ. (ವಿಚಿತ್ರವೆಂದರೆ ನಮ್ಮ ದೇಶಾಭಿಮಾನವನ್ನು ಕೆರಳಿಸುತ್ತಿರುವ ಕ್ರಿಕೆಟ್ ಪಂದ್ಯಗಳು ಒಂದು ದಿನದ ಪಂದ್ಯಗಳನ್ನು ಬೇರೆ ಬೇರೆ ದೇಶದ ಆಟಗಾರರನ್ನು ಒಂದು ತಂಡಕ್ಕೆ ಸೇರಿಸಿ ಆಡಿಸಿ ನಮ್ಮ ದುರಭಿಮಾನ ಮುರಿಯುವಂತೆ ಮಾಡುತ್ತಿದೆ) ಆದರೆ ಇವು ಕೆಲವರಲ್ಲಿ ಒಂದಿಷ್ಟು ಅಭಿಮಾನವನ್ನೋ ದುರಭಿಮಾನವನ್ನೋ ತರಬಹುದೇ ಹೊರತು ಅವು ದೀರ್ಘಾವಧಿಯಲ್ಲಿ ದೇಶದ ಬಗೆಗೆ ನಮ್ಮ ಅಭಿಮಾನ ಹೆಚ್ಚಿಸಿ ಇಲ್ಲಿನ ಕಷ್ಟ ಕಾರ್ಪಣ್ಯಗಳನ್ನು ಎತ್ತಿ ಬಿಸಾಡುವಂತೆ ಮಾಡುತ್ತಿಲ್ಲ. ಇಲ್ಲಿನ ಭ್ರಷ್ಟಾಚಾರದ ವಿರುದ್ಧ ನಮ್ಮ ಯುವಕರನ್ನು ಬಡಿದೆಬ್ಬಿಸುತ್ತಿಲ್ಲ. ನೈಸರ್ಗಿಕ ಸಂಪನ್ಮೂಲಗಳು ತಳ ಸೇರುತ್ತಿರುವುದಕ್ಕೆ ನಮ್ಮಲ್ಲಿ ಆತಂಕ ಉಂಟುಮಾಡುತ್ತಿಲ್ಲ. ನಮ್ಮ ಸರ್ಕಾರಿ ಶಾಲೆಗಳು, ಸಾಲ ಹೊತ್ತ ರೈತರು, ನೇಕಾರರು ಇತರ ಕುಶಲಕರ್ಮಿಗಳ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಅನುಕಂಪಪಡುವಷ್ಟಾದರೂ ನಮ್ಮ ದೇಶಾಭಿಮಾನ ಕೆಲಸ ಮಾಡುತ್ತಿಲ್ಲ.

ಭಾರತ ತನ್ನ ಭೂತಕಾಲದಲ್ಲಿ ಬದುಕುತ್ತಿದೆ. ಇಡೀ ಪ್ರಪಂಚಕ್ಕೆ ಕಣ್ಮಣಿಯಾಗಿದ್ದವರು ನಾವು ಎಂಬ ಗತವೈಭವವನ್ನು ನೆನೆಯುತ್ತಾ ಬದುಕುವಂತೆ ಮಾಡುತ್ತಿದೆ. ವರ್ತಮಾನದ ಭಾರತದಲ್ಲಂತೂ ಇದು ಮಿತಿಮೀರಿ ದೇಶಾಭಿಮಾನದ ಹೆಸರಿನಲ್ಲಿ ನಮಗೆ ನಾವೇ ಮೋಸ ಮಾಡಿಕೊಂಡು ಬದುಕುವಂತೆ ಮಾಡುತ್ತಿದೆ. ಇದು ಕೇವಲ ಮುಖವಾಡದ ಹಿಂದಿನ ಮಾತು ಎಂಬುದು ಎಲ್ಲರಿಗೂ ಗೊತ್ತು. ನಮ್ಮ ಈ ಅಭಿಮಾನವು ಹುಸಿ ಅಭಿಮಾನ ಎಂಬುದೂ ಅರಿವಿದೆ. ಭೌತಿಕವಾಗಿ ಆದ ಒಂದಿಷ್ಟು ಬದಲಾವಣೆಯನ್ನೇ ಇಟ್ಟು ಕೊಂಡು ದೇಶ ಮುಂದುವರೆಯುತ್ತಿದೆ ಎಂಬುದು ನಮಗೆ ನಾವೇ ಮಾಡಿಕೊಳ್ಳುವ ಮೋಸ. ಭವ್ಯ ಪರಂಪರೆಯನ್ನೇ ಬಂಡವಾಳವಾಗಿ ಮಾಡಕೊಂಡು ಬದುಕುವುದು ನಮ್ಮ ದೇಹವನ್ನೇ ತಿಂದು ಬದುಕುವ ಕ್ಯಾನ್ಸರ್ ಕಾಯಿಲೆಯಂತೆ.

ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ
ಸಮಬಗೆಯ ಸಮಸುಖದ ಸಮದು:ಖದ
ಸಾಮರಸ್ಯದ ಸಾಮಗಾನಲಹರಿಯ ಮೇಲೆ
ತೇಲಿ ಬರಲಿದೆ ನೋಡು ನಮ್ಮ ನಾಡು !

ಎಂಬ ಕವಿವಾಣಿ ನನಸಾದಾಗ ನಮ್ಮ ಸ್ವಾತಂತ್ರ್ಯೋತ್ಸವಗಳಿಗೆ ಒಂದು ಸಂಭ್ರಮ ಬರುತ್ತದೆ.

ನಾ ಮೆಚ್ಚಿದ ಕವನಕ್ಕೆ ಟಿಪ್ಪಣಿ

ಮಹಾಕವಿ ಕುವೆಂಪು ಸ್ವಾತಂತ್ರ್ಯಪೂರ್ವದಲ್ಲಿ ರಚಿಸಿದ ಕವಿತೆ ಇದು. ಸ್ವಾತಂತ್ರ್ಯ ಯೋಧರಲ್ಲಿ ಉತ್ಸಾಹ, ಕೆಚ್ಚು ತುಂಬುವ ಬಲ್ಮೆಯ ನುಡಿಗಳಲ್ಲಿ ಕವಿತೆಯನ್ನು ಹೆಣೆಯಲಾಗಿದೆ. ಇಲ್ಲಿ ಕಾಳಿ ಮತ್ತು ರಕ್ಕಸರ ರೂಪಕದ ಮೂಲಕ ಸ್ವಾತಂತ್ರ್ಯ ಕಲಿಗಳು ಮತ್ತು ಪರಂಗಿ ಆಡಳಿತಗಾರರನ್ನು ಹೋಲಿಸಲಾಗಿದೆ. ಕಾಳಿ ರಕ್ಕಸರನ್ನು ಹೇಗೆ ಬಲಿ ತೆಗೆದುಕೊಳ್ಳುವಳೋ ಅದೇ ಮಾದರಿಯಲ್ಲಿ ಸ್ವಾತಂತ್ರ್ಯ ವೀರರೂ ಬ್ರಿಟಿಷರನ್ನು ಬಲಿಗೈಯ್ಯುವ ಸೂಚನೆ ಕವಿತೆಯಲ್ಲಿದೆ. ಉತ್ತೇಜನಕಾರಿಯಾದ ಮಾತುಗಳಿಂದ ರಣೋತ್ಸಾಹವನ್ನು ತುಂಬುವ, ಹರಿದುಂಬಿಸುವ ಚೈತನ್ಯಕಾರಿ ಧ್ವನಿ ಇಲ್ಲಿ ದಟ್ಟವಾಗಿದೆ. 'ಜಗ್ಗದೆಯೆ ಕುಗ್ಗದೆಯೆ ನುಗ್ಗಿ ನಡೆ ಮುಂದೆ' ಎಂಬ ನುಡಿಗಳಲ್ಲಿ ಅದರ ಪ್ರವರ್ತಕ ಗುಣ ಕಾಣಿಸುವಂತಿದೆ.


೧೯೩೬ರಲ್ಲಿ ಪ್ರಸ್ತುತ ಕವಿತೆ ರಚನೆಗೊಂಡಿರುವ ಸಂದರ್ಭವೇ ಹೇಳುವಂತೆ ದೇಶ ಗುಲಾಮೀ ವ್ಯವಸ್ಥೆಯಲಿ ನಲುಗಿ ಹೋಗಿತ್ತು. ಸ್ವಯಂಕೃತವಾದ ಅನ್ಯಾಯಗಳಿಂದ ಜನ ಬಡತನ, ರೋಗ ರುಜಿನ, ಅಜ್ಞಾನ, ಮೂಢ ನಂಬಿಕೆ, ಜಾತಿ ಮತಗಳ ತಾರತಮ್ಯದಿಂದ ಕುರುಡರಾಗಿದ್ದ ಬರ್ಬರ, ದಾರುಣ ಸಂದರ್ಭ ಅದು. ಗಾಂಧೀಜಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಆಗಷ್ಟೇ ತನ್ನ ತೀವ್ರತೆಯನ್ನು ಪಡೆದುಕೊಳ್ಳುತ್ತಿತ್ತು. ಎಚ್ಚೆತ್ತ ಪ್ರಜೆಗಳೂ ಗಾಂಧಿಯ ಹೆಜ್ಜೆಯ ಜೊತೆ ಹೆಜ್ಜೆ ಕೂಡಿಸುತ್ತಿದ್ದರು. ದೇಶದ ತುಂಬ ಈ ಕಾವು ಏರುತ್ತಿದ್ದ ಕಾಲಘಟ್ಟ ಅದು. ಸಹಜವಾಗಿಯೆ ಸೂಕ್ಷ್ಮಜ್ಞನಾದ ಕವಿ ತನ್ನ ಅಕ್ಷರ ಕಾಣಿಕೆಯನ್ನು ಈ ಸಮರ ಯಜ್ಞಕ್ಕೆ ಅರ್ಪಿಸಿರುವುದು ಉತ್ಪ್ರೇಯದೇನೂ ಅಲ್ಲ. ಅಲ್ಲಿ 'ಸರ್ವರಿಗೆ ಸಮಪಾಲು, ಸರ್ವ-ರಿಗೆ ಸಮಬಾಳು' ಕನಸಿನ ಮಾತಾಗಿತ್ತು. ಸ್ವಾತಂತ್ರ್ಯ ಎಂಬುದು ಗಗನ ಕುಸುಮವಾಗಿತ್ತು. ಈ ದುರ್ಬರ ಸಂದರ್ಭ ಸೂಕ್ಷ್ಮಮತಿಯಾದ ಕವಿಗೆ ಸಹಿಸಲಾರದ ಸಂಗತಿ. ಇಂಥ ಬಿಕ್ಕಟ್ಟಿನ ಗಳಿಗೆಯಲ್ಲಿ ವ್ಯಕ್ತಿ ತನ್ನ ವಯಕ್ತಿಕತೆಯನ್ನು ಮೀರಿ ದೇಶವನ್ನು ಬಂಧನದಿಂದ ಮುಕ್ತಿಗೊಳಿಸುವುದೇ ತನ್ನ ಪರಮ ಗುರಿ ಎಂದು ಬಗೆಯಬೇಕಾದ ಅನಿವಾರ್ಯತೆಯನ್ನು ಕವಿತೆ ದೊಡ್ಡ ದನಿಯಲ್ಲಿ ಹೇಳುತ್ತದೆ. 'ಭರತಖಂಡದ ಹಿತವೆ ನನ್ನ ಹಿತ ಎಂದು/ ಭರತಮಾತೆಯ ಮತವೆ ನನ್ನ ಮತ ಎಂದು/ ಭಾರತಾಂಬೆಯ ಸುತರೆ ಸೋದರರು ಎಂದು/ ಭಾರತಾಂಬೆಯ ಮುಕ್ತಿ ಮುಕ್ತಿ ನನಗೆಂದು' ಎಂಬ ಸರ್ವಾರ್ಪಣೆಯ ಭಾವವನ್ನು ಕವಿತೆ ತನ್ನ ಇಡೀ ಬಂಧದಲ್ಲೇ ಮೈದುಂಬಿಕೊಂಡಿದೆ.

ಕವಿತೆಯ ಶೀರ್ಷಿಕೆಯೂ ಶ್ರೀಕೃಷ್ಣನ ಪಾಂಚಜನ್ಯವನ್ನು ನೆನಪಿಸುವುದರಿಂದ ಅದರ ಮಹತ್ವವೇನು ಎಂಬುದನ್ನೂ ಧ್ವನಿಸುತ್ತದೆ. ಸ್ವಾತಂತ್ರ್ಯ ಚಳುವಳಿ ಒಂದು ಯುದ್ಧವೇ ಆದಾಗ ಅದರಲ್ಲಿ ಭಾಗವಹಿಸುವವರೆಲ್ಲರೂ ಯೋಧರೇ ಎಂದು ಅವರೆಲ್ಲರೂ ರಣಬಲಿಗೆ ಸಿದ್ಧರಿರಬೇಕು, ಸ್ವಯಂ ಬಲಿಗೂ ತಯಾರಾಗಬೇಕಾದ ಅನಿವಾರ್ಯತೆಯನ್ನೂ ಒತ್ತಿ ಹೇಳುವಂತಿದೆ.

ನಾವು ಬದುಕುತ್ತಿರುವ ಸ್ವತಂತ್ರ ಎಂದು ಕರೆಯಬಹುದಾದ ಭಾರತದಲ್ಲಿ ಈಗ ನಡೆಯುತ್ತಿರುವ ರಾಜಕೀಯ ಪ್ರಹಸನ, ದೈನೇಸಿ ಆರ್ಥಿಕತೆ, ಸಾಮಾಜಿಕ ನ್ಯಾಯದ ಕೊರತೆಯನ್ನು ಗಮನಿಸಿದರೆ ಮತ್ತೊಂದು ಆಂತರಿಕ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರೇಪಿಸುವಂತಿರುವುದರಿಂದ ಕವಿತೆ ವರ್ತಮಾನಕ್ಕೂ ಸಲ್ಲುವಂತಿದೆ.

–ಚಂದ್ರಶೇಖರ ತಾಳ್ಯ

೧೦೦ ವರ್ಷದ ಹಿಂದೆ ಗಾಂಧಿ



ಆಗಸ್ಟ್ ೧೯೧೮ ಗಾಂಧೀಜಿಯವರ ಆರೋಗ್ಯ ಚೆನ್ನಾಗಿಲ್ಲ. ಈ ತಿಂಗಳ ಎರಡನೇ ವಾರ ತೀವ್ರವಾದ ಆಮಶಂಕೆಯಿಂದ ನರಳುತ್ತಿದ್ದಾರೆ. ಆವರಿಗೆ ಯಾವುದೇ ಔಷಧ ತೆಗೆದುಕೊಳ್ಳುವ ಮನಸ್ಸಿಲ್ಲ. ಅವರಿಗೆ ಆಗಲೇ ಪ್ರಕೃತಿ ಚಿಕಿತ್ಸೆಯಲ್ಲಿ ಅಪಾರವಾದ ನಂಬಿಕೆ ಬಂದಿದೆ. ಉಪವಾಸ ಮತ್ತು ಕನಿಷ್ಟ ಆಹಾರ ಸೇವಿಸಿ ಆಮಶಂಕೆಯನ್ನು ಹತೋಟಿಗೆ ತಂದು ಕೊಳ್ಳಲು ಪ್ರಯತ್ನಿಸಿದ್ದಾರೆ. ಕಡೆ ಕಡೆಗೆ ಅವರು ಎಷ್ಟೊಂದು ನಿತ್ರಾಣರಾಗಿದ್ದಾರೆಂದರೆ ಶೌಚಾಲಯಕ್ಕೆ ನಡೆದು ಹೋಗಲೂ ಶಕ್ತಿ ಇಲ್ಲದೆ ತೆವಳುತ್ತಾ ಹೋಗುತ್ತಿದ್ದಾರೆ. ಈ ಮಾಹೆಯಲ್ಲಿ ಅವರು ಆರೋಗ್ಯ ಮತ್ತು ಪ್ರಕೃತಿ ಚಿಕಿತ್ಸೆಯ ಬಗ್ಗೆ ಹಲವರಿಗೆ ಪತ್ರ ಬರೆಯುತ್ತಾರೆ.


ಈ ಮಧ್ಯೆ ನಡಿಯಾದ್ ನ ಹಿಂದೂ ಸ್ತ್ರೀ ಮಂಡಲದವರು ತಮ್ಮ ವಾರ್ಷಿಕ ಕಾರ್ಯಕ್ರಮಕ್ಕೆ ಕಸ್ತೂರ ಬಾ ಗಾಂಧಿಯವರನ್ನು ಅಧ್ಯಕ್ಷತೆ ವಹಿಸಲು ಕೋರಿ ಪತ್ರ ಬರೆದಿದ್ದಾರೆ. ಅವರಿಗೆ ಗಾಂಧಿಯವರು ಬರೆದ ಪತ್ರ ಕುತೂಹಲಕರವಾಗಿದೆ. ನಾನು ದೊಡ್ಡ ಮನುಷ್ಯ. ಆಕೆ ನನ್ನ ಹೆಂಡತಿ ಎಂಬ ಯಾವ ಬಿಗುಮಾನವೂ, ಸೋಗಲಾಡಿತನವೂ ಇಲ್ಲದೆ, ಇರುವ ಸಮಸ್ಯೆಯನ್ನು ಅವರು ವಿವರಿಸಿ ಪತ್ರ ಬರೆದಿರುವುದೇ ಅವರ ದೊಡ್ಡತನಕ್ಕೆ ಸಾಕ್ಷಿ.

ಹಿಂದೂ ಸ್ತ್ರೀ ಮಂಡಲದವರಿಗೆ ಅವರು ಬರೆದಿರುವ ಪತ್ರದಲ್ಲಿ, ನಿನ್ನೆಯಷ್ಟೇ ನಿಮ್ಮ ಪತ್ರವನ್ನು ನನ್ನ ಹೆಂಡತಿಗೆ ಓದಿ ಹೇಳಿದೆ. ತಡವಾದುದಕೆ ಕ್ಷಮೆ ಇರಲಿ. ನಾವಿಬ್ಬರೂ ಸ್ವತಂತ್ರವನ್ನು ಹೊಂದಿದ್ದು ಇಬ್ಬರೂ ಸಮಾನ ಹಕ್ಕನ್ನು ಉಳ್ಳವರಾಗಿದ್ದೇವೆ. ನಮ್ಮ, ನಮ್ಮ ಕೆಲಸದ ಕ್ಷೇತ್ರವನ್ನೂ ನಮ್ಮಗಳ ಅನುಕೂಲಕ್ಕಾಗಿ ಸರಿಯಾಗಿ ಸ್ಪಷ್ಟಪಡಿಸಿಕೊಂಡಿದ್ದೇವೆ. ನಮ್ಮ ಮದುವೆಯ ಸಂದರ್ಭದಲ್ಲಿ ನನ್ನ ಹೆಂಡತಿ ಅನಕ್ಷರಸ್ಥೆಯಾಗಿದ್ದಳು. ಬಹಳ ಪ್ರಯತ್ನಮಾಡಿ ನಾನು ಆಕೆಗೆ ಸ್ವಲ್ಪ ಶಿಕ್ಷಣ ಕೊಟ್ಟೆ. ಆದರೆ ಅನೇಕ ಕಾರಣಗಳಿಂದಾಗಿ ಅದು ಸಮಾಧಾನಕರವಾಗಿಲ್ಲ. ಈ ಕಾರಣಗಳಿಗಾಗಿ ಆಕೆಯು ತಮ್ಮ ಆಹ್ವಾನವನ್ನು ಮನ್ನಿಸಲಾಗುತ್ತಿಲ್ಲ. ಆಕೆಗೆ ಬರೆದು ಕೊಟ್ಟ ಭಾಷಣವನ್ನೂ ಓದಲು ಆಗುವುದಿಲ್ಲ. ಅವಳಿಗೆ ಖಂಡಿತಾ ತನ್ನ ಭಾಷಣವನ್ನು ತಯಾರುಮಾಡಿಕೊಳ್ಳಲು ಸಾಧ್ಯವಿಲ್ಲ. ಹೋಗಲಿ ಅಲ್ಲಿಗೇ ಬಂದು ನಿಮ್ಮ ಚಟುವಟಿಕೆಯನ್ನು ನೋಡಿ ತತ್ಸ್ಥಳದಲ್ಲೇ ಭಾಷಣ ಮಾಡಲು ಅವಳು ಸಮರ್ಥಳಲ್ಲ. ಹಾಗಾಗಿ ನಾವಿಬ್ಬರೂ ಜೊತೆಯಾಗಿ ವಿಷಾದಿಸುತ್ತಾ ನಮ್ಮನ್ನು ಕ್ಷಮಿಸಲು ತಮ್ಮಲ್ಲಿ ಕೋರುತ್ತೇವೆ.

ವಂದೇಮಾತರಂ,

ಮೋಹನದಾಸ

ತಿಂಗಳ ಚಿತ್ರ



ಡೆಬಿ ಮತ್ತು ರಿಚರ್ಡ ಅಮೇರಿಕಾದವರು ಅವರಿಗೆ ಕ್ರಮವಾಗಿ 67 ಮತ್ತು 72 ವರ್ಷ. 40 ವರ್ಷಗಳ ಹಿಂದೆ ಮದುವೆಯಾಗಿ ಆದರ್ಶವಾದ ಶ್ರಮ ಜೀವನ ನಡೆಸಲು ಒಂದು ಹಳ್ಳಿಯಲ್ಲಿ ನೆಲೆಸಿದವರು. ಡೆಬಿ ನೇಯ್ಗೆ ಮಾಡಿದರೆ ರಿಚರ್ಡ ಕುಂಬಾರಿಕೆ ಮಾಡುತ್ತಾರೆ. ಕಳೆದ ತಿಂಗಳು ಅವರು ಜನಪದ ಸೇವಾ ಟ್ರಸ್ಟಿನಲ್ಲಿ ಒಂದು ವಾರ ಇದ್ದು ಹೋದರು.

Janapada Vichara *Kannada Monthly Digest*
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651584, 9739743237

KA/SK/MND/470/2018-2020
Regd No : KAR/KAN/2000/3820